ಕಳೆದ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ವಿಟ್ಲ ಸರ್ಕಲಿನಿಂದ ಶ್ರೀ ವಿಠಲದಾಸ ಶೆಟ್ಟಿ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ನಿಂತು ಶ್ರೀ ಅಜಿಲಾಡಿ ರಾಮಣ್ಣ ರೈಗಳವರು ಸ್ವತಂತ್ರರಾಗಿಯೂ ಚುನಾವಣೆಗೆ ನಿಂತು ಶ್ರೀ ಶೆಟ್ಟಿಗೆ ೬೨ ಓಟು ಹೆಚ್ಚು ಸಿಕ್ಕಿ ಅವರು ಚುನಾಯಿತರಾಗಿದ್ದರು. ಸಾರ್ವಜನಿಕ ವಾಹನಗಳನ್ನು ಶೆಟ್ಟರ ಪರವಾಗಿ ಓಟು ಕೊಡಲು ಉಪಯೋಗಿಸಿದರೆಂದು ಸೋತವರ ಕಡೆಯಿಂದ ದಾವೆ ಮಾಡಲಾಗಿತ್ತು. ಇಲೆಕ್ಷನ್ ಕಮಿಶನರರಾದ ಸಬ್ ಜಡ್ಜರು ಸಾಕಷ್ಟಾಣೆ ವಗೈದ ಫಲವಾಗಿ ಶ್ರೀ ವಿಠಲ ದಾಸ ಶೆಟ್ಟಿ ಪಿ. ಸಿ. ಸಿ. ಕಂಪೆನಿಯ ಲೊರಿಗಳನ್ನು ಓಟರರನ್ನು ಒಯ್ಯಲು ಉಪಯೋಗಿಸಿ ಚುನಾಯಿಸಲ್ಪಟ್ಟರೆಂದೂ ಆ ಕಾರಣ ದಿಂದ ಅವರ ಚುನಾವಣೆಯನ್ನು ರದ್ದು ಗೊಳಿಸಬೇಕೆಂದೂ, ಮತ್ತು ಶ್ರೀ ರಾಮಣ್ಣ ರೈಗಳ ದಾವೆ ಖರ್ಚನ್ನು ಕೂಡಾ ಶ್ರೀ ಶೆಟ್ಟರೇ ಕೊಡಬೇಕೆಂದೂ ತೀರ್ಮಾನಿಸಲ್ಪಟ್ಟಿದೆ. ಈಗ ಅಲ್ಲಿ ಪುನಃ ಚುನಾವಣೆ ನಡೆಯಲಿದೆಯೆಂದು ತಿಳಿದುಬರುತ್ತದೆ.

ಗವರ್ನಮೆಂಟ್ ಕಾಲೇಜ್ ಹಾಸ್ಟೆಲ್ ದಿನ

ಮೇಲ್ಕಂಡ ವಿದ್ಯಾರ್ಥಿ ನಿಲಯದ ದಿನಾಚರಣೆ ಈಚೆಗೆ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ, ಹಿತ ಸೂಚನೆಗಳಾದ ಮೇಲೆ ವಿದ್ಯಾರ್ಥಿ ಮತ್ತು ಅತಿಥಿಗಳ ವರವಾಗಿ ಭಾಷಣಗಳಾದುವು. ~~ಕಾಲೇಜ್ ಪ್ರಿನ್ಸಿಪಾಲ್ ಹಸೀಮಿಯವರು~~ ಬೋಧಪರ ಭಾಷಣವಿತ್ತರು.

Zam-Buk ಜಾಂಬುಕು
ಗಾಯ, ಕಡಿತ, ಕಜ್ಜಿ, ಮುದ್ದಣ, ಕುರುಗಳಿಗೆ

ಶೀಘ್ರವಾಗಿ, ಪರಿಪೂರ್ಣವಾಗಿ ಗುಣಪಡಿಸುತ್ತದೆ.

ಜಾಂಬುಕು ಅಮೂಲ್ಯ ಔಷಧೀಯ ಎಣ್ಣೆಗಳುಳ್ಳದ್ದು. ಇದು ಚರ್ಮದೊಳಗೆ ಅತೀ ಆಳಕ್ಕೆ ಇಂಗುತ್ತದೆ. ಜಾಂಬುಕು ನೋವನ್ನೂ ಊದುವಿಕೆಯನ್ನೂ ನಿಡಿತವನ್ನೂ ನಿಲ್ಲಿಸುತ್ತದೆ. ಅದು ಚರ್ಮವನ್ನು ಶುದ್ಧೀಕರಿಸಿ, ವಿಷಾಣುಗಳನ್ನು ಸಾಶಮಾಡಿ, ಕೀವನ್ನು ಒಣಗಿ, ಶೀಘ್ರವೂ ಸ್ವಚ್ಛವೂ ಆದ ಗುಣವನ್ನು ಕೊಡುತ್ತದೆ. ಎಲ್ಲಾ ಕರದ್ರಚರ್ಮ ವ್ಯಾಧಿಗಳಿಗೆ, ಜಖಮುಗಳಿಗೆ, ಕ್ರಿಮಿಕಡಿತ, ಸುಡತ, ಬೀಯುನಿಕೆ, ದೊಕ್ಕೆಗಳಿಗೆ ಜಾಂಬುಕು ಅತೀ ಶ್ರೇಷ್ಠ ನಿವಾರಣೆ. ಇದರಲ್ಲಿ ಸ್ಯಾಡಿಗಳ ಕೊಟ್ಟು ಖಂಡಿತವಾಗಿಯೂ ಮಿಶ್ರವಾಗಿಲ್ಲ.

ಜಾಂಬುಕು ಜಗತ್ತಿನ ಅತೀ ಶ್ರೇಷ್ಠ ಚರ್ಮವ್ಯಾಧಿ ಮುಲಾಮು

ಏಜೆಂಟರು: ದಾದಾ ಎಂಡ್ ಸನ್ಸ್, ಪಿ. ಟಿ. ಮದ್ರಾಸು

TENDERS

Sealed tenders are invited for the extension of St. Agnes College, Kankanady Post. The tenders must reach the Principal by 4 p. m. on 28—2—1950. Tender papers are available at the office of the Principal between 2-30 and 4-30 p. m. on working days.

ಮಂಗಳೂರು

ಮುನಿಸಿಪಲ್ ನೈರ್ಮಲ್ಯ ಸಿಬಂದಿಯ ಕೇಳಿಕೆಗಳು

ನಗರದ ನೂರ್ಗ ಸಫಾಯಿ, ಮತ್ತು ಮಲ ಸ್ವಚ್ಛ ಮಾಡುವ ಕೆಲಸಗಾರರು ಕೆಲವು ಕೇಳಿಕೆಗಳನ್ನು ಪ್ರಕಟಿಸಿ ನಗರ ಸಭೆಯವರು ಅನ್ನನ್ನು ಪೂರೈಸದಿದ್ದರೆ ಮುಷ್ಕರ ಕೈಕೊಳ್ಳಬೇಕಾಗುವುದೆಂದು ಸ್ಥಾರಿರುವರು. ಅವರಿಗೆ ವರ್ಷಕ್ಕೆರಡು ಜೋಡು ಪೋಷಾಕು ಮೆಟ್ಟುಗಳನ್ನು ಕೊಡುವುದನ್ನು ಕೊಡಲಿಲ್ಲವೆಂದೂ ಹಿಂದಿನ ಮುಷ್ಕರ ಕಾಲದಲ್ಲಿ, ಆಶ್ವಾಸನೆಯಿತ್ತಂತೆ ಸಂಬಳವನ್ನು ಮೂವತ್ತರಿಂದ ನಾಲ್ವತ್ತು ರೂಪಾಯಿಗೆ ಏರಿಸಬೇಕೆಂದೂ ತಿಳಿಸುವ ಕರವತ್ರಗಳು ಈ ಸಂಬಂಧದಲ್ಲಿ ಹಂಚಲ್ಪಟ್ಟಿವೆ.

ಸೇಲಂ ಜೈಲ್ ಗುಂಡು ಹೊಡೆತದ ನಿಷೇಧ

ಕಳೆದ ತಾ. ೨೧ರಂದು ಸಾಯಂಕಾಲ ಕೇಂದ್ರಮೈದಾನಿನಲ್ಲಿ ನಗರದ ಕೆಲ ಮುಖಂಡರ ಸಾರ್ವಜನಿಕ ಸಭೆ ಜರಗಿತು. ಸೇಲಂ ಜೈಲಿನಲ್ಲಿ ನಡೆದ ಕಮ್ಯೂನಿಸ್ಟ್ ಕೈದಿಗಳ ಮೇಲೆ ಗುಂಡು ಹೊಡೆದುದರ ಕುರಿತು ಖಂಡನೆಯ ಭಾಷಣಗಳಾದುವು. ಈ ಸಂದರ್ಭದಲ್ಲಿ ಹಂಚಿದ ಕರಪತ್ರದಲ್ಲಿ ಕೊಂಗ್ರೆಸ್ ಸರಕಾರಗಳನ್ನು ಖಂಡಿಸುವ, ಸೇಲಂ ಜೈಲ್ ಅಧಿಕಾರಿಗಳನ್ನು ಡಿಸ್‌ಮಿಸ್ ಮಾಡ ಬೇಕೆನ್ನುವ, ವಿಚಾರಣೆಯಿಲ್ಲದೆ ಇರಿಸಲ್ಪಟ್ಟ ವರನ್ನು ಬಿಡಬೇಕೆನ್ನುವ ಕೇಳಿಕೆಗಳು ನಮೂದಿಸಲಾಗಿದ್ದುವು.

ಮೋಟಾರು ಕೆಲಸಗಾರರ ಮುಷ್ಕರ

ಮುಂಚಿತವಾಗಿ ನೋಟಿಸು ಕೊಟ್ಟ ಪ್ರಕಾರ ಡಿ. ಕೆ. ಮೋಟಾರ ಕೆಲಸಗಾರರು ಕಳೆದ ತಾ. ೨೨ರಿಂದ ಮುಷ್ಕರವನ್ನಾರಂಭಿಸಿರುವರು. ಇದರಲ್ಲಿ ಹೆಚ್ಚಿನ ಡ್ರೈವರುಗಳು ಭಾಗವಹಿಸಿಲ್ಲವೆಂದು ತಿಳಿದುಬರುತ್ತದೆ. ಮಂಗಳೂರಿನಿಂದ ಹೊರಡುವ ಹೆಚ್ಚಿನ ಬಸ್ಸುಗಳು ಯಥಾ ಪ್ರಕಾರ ಹೋಗಿವೆಂದು ಹೇಳಲಾಗಿದೆ. ಟವ್ಹಾಲು ಬಸ್ಸುಗಳು ಪೋಲಿಸ್ ವಹರೆಯಲ್ಲಿ ಒಯ್ಯಲ್ಪಟ್ಟಿವೆ. ಮುಷ್ಕರಗಾರರು ಹೊರಡುವ ಬಸ್ಸುಗಳನ್ನು ಅಡ್ಡಗಟ್ಟಿದ್ದರಿಂದ ಕೆಲವು ಬಸ್ಸುಗಳು ಸ್ವಲ್ಪ ವಿಳಂಬವಾಗಿ ಹೊರಟಿವೆ. ಹೆಚ್ಚಿನ ಅತಂಕ ಮಾಡಿದವರನ್ನು ಕೈದು ಮಾಡಲಾಗಿದೆಂದು ತಿಳಿಯುತ್ತದೆ. ಈ ಸಂಬಂಧ ಸ್ಥಳೀಕದಿನ ಪತ್ರಿಕೆಯಲ್ಲಿ ಈ ಕೆಳಗಿನ ವಿವರಗಳು ಪ್ರಕಟವಾಗಿವೆ:

ನಿನ್ನೆ ತಾ. ೨೩ರಂದು ಮೋಟರ್ ಡ್ರೈವರರು ಸಂಪೂರ್ಣ ಸಹಕರಿಸಿದೆರೂ ಪೋಲೀಸ್ ವ್ಯವಸ್ಥೆಗಳು ಸರಿ ಇಲ್ಲದೆ ಮಂಗಳೂರಿಗೆ ಹಿಂತಿರುಗಿದ ಡ್ರೈವರರ ಸ್ಥೈರ್ಯವು ಕದಲಿಹೋಯಿತು. ಮಾರ್ಗದಲ್ಲಿ ಏದಾರು ಮೈಲಿಗೊಂದು ವಂಗಡವು ಬಸ್ಸುಗಳನ್ನು ಅಡ್ಡಕಟ್ಟಿ ಬೈಯುತ್ತ, ನಿಂದಿಸುತ್ತ, ಹಂಗಿಸುತ್ತ, ಸಮಜಾಯಿಷಿಸುತ್ತ ಡ್ರೈವರರ ಮನಸ್ಸನ್ನು ವಿಚಲಿತವಾಯಿತು. ತಾ. ೨೨ರಲ್ಲಿ ಘಂಟೆ ದಿಗಿಕ್ಕೆ ಗುರುವುರ ಸಂಕದ ಹತ್ತಿರ ಅಟಕಾಯಿಸಲ್ಪಟ್ಟು ಜಮೆಯಾಗಲಾರಂಭವಾದ ಎಂಟು ಬಸ್ಸುಗಳು ಪೋಲೀಸರಿಗೆ ಅಲ್ಲಿ ಹೋಗಲುಂಟಾದ ಅಸೌಕರ್ಯಗಳಿಂದ ಸಾಯಂಕಾಲ ಆರುವರೆ ಘಂಟೆಯವರೆಗೆ ತಡೆಯಲ್ಪಟ್ಟು ಆ ಮೇಲೆ ಗೆರೇಜನ್ನು ಸೇರಿದುವು. ಪಡೀಲಿನಲ್ಲಿ ಕುಂಬ ಪೋಕಾಟನ ಕಲ್ಲೆಸೆಯುವುದು, ಕೊಲ್ಲುತ್ತೇನೆಂಬ ಬೆದರಿಕೆ, ಬಸ್ಸಿನ ಭಾಗಗಳನ್ನು ಮುರಿಯುವುದು ಇತ್ಯಾದಿ ಪುಂಡಾಟಿಕೆಯಿಂದ ಡ್ರೈವರರು ಕಂಗಾಲಾದರು. ಒಬ್ಬ ಹೊಸತಾಗಿ ಸೇರಿದ ಡ್ರೈವರನು ಕೂಳೂರಿನಿಂದ ಬರುವಾಗ ಹಾದಿಯಲ್ಲಿ ಬಸ್ಸು ಹಾರಿ ಬಸ್ಸಿನ ಭಾಗವನ್ನು ಸೆಳೆದು ಲ್ಯಾಟುಗಳನ್ನು ಮುರಿದು ಡ್ರೈವರನ ಕಿವಿಹಿಂಡಿ ಅವನಿಗೆ ಜೀವದ ಅಪಾಯ ತೋರಿಸಿ ಬಸ್ಸನ್ನು ಕೋಡಿಗೆ ದೂಡಿ, ಡ್ರೈವರನನ್ನು ಕಳುಹಿಸಿದರಾಗಿ ಡ್ರೈವರನು ಬಂದು ಹೇಳಿದನು. ಮೂಲ್ಕಿಯಲ್ಲಿ ಸಿಕೆಟ್ ಮಾಡುವವರನ್ನು ಗೆರೇಜಿನ ಒಳಗೆ ವರೆಗೆ ಹೋಗಲು ಬಿಟ್ಟು ಅಲ್ಲಿನ ಏಳೆಂಟು ಬಸ್ಸುಗಳ ಭಾಗಗಳು ಕೆಡವಿ ಬಸ್ಸು ನಡೆಸಲಾಗದಾಗಿದೆ. ಮೂಲ್ಕಿಯಲ್ಲಿ ಮಹಾಜನರ ಪ್ರೋತ್ಸಾಹವು ಸಂಪೂರ್ಣ ಮುಷ್ಕರದೊಡನಿತ್ತಾಗಿ ತಿಳಿದುಬರುತ್ತದೆ.

ತಾ. ೨೨ರಂದು ಹಲವು ಘಟನೆಗಳಿಂದ, ಮುಷ್ಕರಗಾರರ ಬೆದರಿಕೆಗಳಿಂದ, ಮುಷ್ಕರಗಾರರನ್ನೇ ಕೂಡುವುದು ಸುರಕ್ಷಿತವೂ ಲಾಭಕರವೂ ಎಂದು ಡ್ರೈವರರು ಮರುದಿನ ಕಾಣೆಯಾಗಲು ಆರಂಭವಾದರು ಹಾಗೂ ಸಮಜಾಯಿಸಿ ಒಬ್ಬ ಹೊಸ ಡ್ರೈವರರಿಗೆ ಬಸ್ಸು ಕೊಟ್ಟು ಬೀಬಿ ಅಲಾಬಿಯಿಂದ ಪೋಲೀಸಕೊಡನೆಯೂ ಟವ್ಹಾಲು ಇಲಾಖೆಯ ಜನರೊಡನೆಯೂ ಹಂಪನಕಟ್ಟೆಗೆ ಇತರ ಎರಡು ಬಸ್ಸುಗಳೊಡನೆ ಟವ್ಹಾಲು ಒಯ್ಯುವ ಬಗ್ಗೆ ಕಳುಹಿಸಿದಾಗ, ಸೆಕ್ಷನ್ ೧೪೪ ಜ್ಯಾರಿಯಲ್ಲಿದ್ದರೂ ಸಾವಿರಾರು ಜನರ ಕೂಡಾಟವಾಗಿ ಪೈಕಿ ಕೆಲವು ಮುಷ್ಕರಗಾರರು ಡ್ರೈವರರನ್ನು ಬಸ್ಸಿನಿಂದ ಕೆಳಗೆಳೆದು ಪೋಲೀಸರ ಎದುರಿಗೇನೇ ಎತ್ತಿ ಕೊಂಡೊಯ್ದರು. ಆ ಮೇಲೆ ಸರ್ವಿಸು ಕಳುಹಿಸುವುದು ಅಸಾಧ್ಯವಾಯಿತು. ಬಸ್ಸುಗಳು ಅಲ್ಲಲ್ಲಿ ಮುಷ್ಕರಗಾರರು ಹಾಳಗೆಡಿಸುವುದನ್ನು ತಡೆಯಲಿಕ್ಕೂ, ಪೋಲೀಸ್ ಸೌಕರ್ಯಗಳು ಸಾಕಾಗದುದರಿಂದಲೂ ಬಸ್ಸು, ಮ್ಹಾಲಿಕರು ಸರ್ವಿಸುಗಳನ್ನು ನಡೆಸುವ ಯೋಚನೆಯನ್ನು ಬಿಟ್ಟುಕೊಟ್ಟು ಬಸ್ಸುಗಳನ್ನು ಜಾಗ್ರತೆಯಲ್ಲಿ ಗೆರೇಜಿನೊಳಗೆ ಇಟ್ಟಿರುವರು.

ಬಂಗಾರ ಮೋಸದ ಮೊಕದ್ದಮೆ

ಕಳೆದ ದಶಂಬರ ೭ರಂದು ರಥಬೀದಿಯ ಶ್ರೀ ಭಂಡಾರಕಾರರ ಚಿನಿವಾರ ಕಟ್ಟೆಯಲ್ಲಿ ಸುಮಾರು ೨೬,೬೫೭ ರೂ.ಗಳ ನಾಲ್ಕೂದ ಭಂಗಾರದ ವಿಶ್ವಾಸನಂಚೆಯ ಮಾಡಿದವರಲ್ಲಿ ಒಬ್ಬನಾದ ವಾಸುದೇವ ಸಾಹೇವರ್ಮ ಎಂಬಾತನನ್ನು ಬನಾರಸದಿಂದ ಕೈದುಮಾಡಿ ಸಬ್ ಮೆಜಿಸ್ಟೇಟರಲ್ಲಿ ವಿಚಾರಣೆಗೆ ಹಾಜರು ಮಾಡಲಾಗಿದೆ. ಮೋಸದ ಕೃತ್ಯವು ಮೇಲ್ಕಂಡ ಆರೋಪಿತನಾದ ಅವನ ಭಾವ ಸೀತಾವ್ರಸಾದ್ ಯಾನೆ ಬಾಬು ಲಾಲ್ ಎಂಬವನಿಂದ ಜರಗಿಸಲ್ಪಟ್ಟಿತು.

ಸಿಡುಬು

1. ಸಿಡುಬು ರೋಗವು ತಗಲದಂತೆ ಮಾಡುವರೆ, ಡಾಕು ಹಾಕಿಸಿಕೊಳ್ಳುವುದೇ ಒಂದು ಉಪಾಯ.

2. ಮಹಾಜನರ ಉಪಯೋಗಾರ್ಥವಾಗಿ, ಹಂಪನ ಕಟ್ಟೆ ಮಿಡ್‌ವೈಫ್ ಸೆಂಟರ್‌ನಲ್ಲಿ ಬಂದು ಹಂಗಾಮಿ ಡಾಕ್ಟರ್‌ಹಾಕುವ ದಿವೋವನ್ನು ತೆರೆಯಲಾಗಿದೆ. ಬೆಳಿಗ್ಗೆ 7–30ರಿಂದ 11–30ರ ವರೆಗೂ, ಸಾಯಂ 4ರಿಂದ 6–30ರ ವರೆಗೂ, ಸದ್ರಿ ದಿವೋದಲ್ಲಿ ಡಾಕು ಹಾಕಿಸಿಕೊಳ್ಳಬಹುದು.

3. ಮೈಲಿಗೆ ಇರುವ ವಠಾರಗಳಲ್ಲಿ 14 ಜನ ವೆಕ್ಸಿನೇಟರರು, ವ್ಯಕ್ತಿ ಮನೆಗೆ ಹೋಗಿ ಡಾಕು ಹಾಕುತ್ತಾರೆ. ಎಲ್ಲರೂ ಈ ಸಂದರ್ಭಗಳಲ್ಲಿ ಡಾಕು ಹಾಕಿಸಿಕೊಂಡು ಸಿಡುಬು ರೋಗದಿಂದ ತಪ್ಪಿಸಿಕೊಳ್ಳಬೇಕು.

4. ಯಾವ ವಠಾರದಲ್ಲಿಯೊದರೂ ಸಿಡುಬು ರೋಗದ ಕುರುಹು ತಿಳಿದುಬಂದರೆ ಆ ವಿಷಯವನ್ನು ಆದಷ್ಟು ಬೇಗನೇ ಮುನ್ಸಿಪಲ್ ಹೆಲ್ತ್ ಅಧಿಕಾರಿಗಳಿಗೆ ತಿಳಿಸಬೇಕಾಗಿ ವಿನಂತಿ.

ಅಡಿಕೆ ಧಾರಣೆ

ಅಡಿಕೆ ಧಾರಣೆ ಈ ವರ್ಷದಷ್ಟು ಚಲೋ ರೀತಿಯಲ್ಲಿ ಎಂದೂ ಇರಲಿಲ್ಲ. ಹಳೆ ಅಡಿಕೆ ವ್ಯಕ್ತಿ ವರ್ಷ ಜೂನ್ ತಿಂಗಳ ವರೆಗೆ ಮಾಯಾವವಾಗದೆ ಇರುವ ಬದಲು ಈಗಲೇ ಸಂಪೂರ್ಣವಾಗಿ ವಿಕ್ರಯವಾಗಿರುತ್ತದೆ. ಹೊಸ ಅಡಿಕೆಗೂ ಚೆನ್ನಾಗಿ ಗಿರಾಕಿಯಿದೆ. ಧಾರಣೆ ಖಂಡಿಗೆ ೭೦೦ ರೂಪ್ಯಾಗಳಿಂದ ಮೇಲೆ ೮೦೦ ರೂಪ್ಯಾ ತನಕ ಇದೆ.


ಸೌಂದರ್ಯ ಸಾಧನೆ
ಪತ್ರಿಸಲ ಕುಟಿಕೂರಾದಿಂದ
ತಿಕ್ಕಿ ತೊಳೆದಾಗ
ಈ ಸೌಗಂಧ ಸಾಬೂನಿನಲ್ಲಿ ಔಷಧೀಯ ಮತ್ತು ಶೃಂಗಾರ ನೈಲ್ಯವಿದೆ. ಚರ್ಮವನ್ನು ಸ್ವಚ್ಛವಾಗಿ ತೊಳೆದು ಅದಕ್ಕೆ ಹೊಸ ಕಾಂತಿ ಕೊಟ್ಟು ಎಲ್ಲಾ ಅದರ ಅವಗುಣಗಳನ್ನು ಹೋಗಲಾಡಿಸುತದೆ.
CUTICURA SOAP MEDICINAL TOILET
555
ಕುಟಿಕೂರಾ ಸಾಬೂನು
CUTICURA SOAP

ಬರೇ 3 ಘಂಟೆಗಳ ಸಮಯದಲ್ಲಿ
57 ಮೈಲುಗಳ ಬಸ್ಸು ಪ್ರಯಾಣ

ಇದೇ ತಿಂಗಳ ತಾರೀಕು 3ನೇ ಸೋಮವಾರ ಲಾಗ್ಯಾತು (3—10—'49) ಮದ್ರಾಸು ಅತ್ತಕಡೆಯಿಂದ ಮಂಗಳೂರಿಗೆ ಸಂಜೆ ಘಂಟೆ ೫–15ಕ್ಕೆ ಬಂದು ತಲ್ಪುವ ಮೈಲು ಟ್ರೈನ್ ಪೇಸಂಜರರ ಮುಂದಿನ ಪ್ರಯಾಣಕ್ಕೆ ಕಾರ್ಕಳ ಮತ್ತು ಉಡುಪಿಗೆ ಪ್ರಯಾಣಿಸುವವರ ಅನುಕೂಲಕ್ಕೆ ಸರಿಯಾಗಿ ಸಂಜೆ ಘಂಟೆ 6ಕ್ಕೆ ಮಂಗಳೂರು–ಕಾರ್ಕಳ–ಉಡುಪಿ ಎಕ್ಸ್‌ಪ್ರೆಸ್ (Express)ಯೆಂಬ ಸರ್ವೀಸನ್ನು ಜರೂರಿಂದ ಉಡುಪಿಗೆ ರಾತ್ರೆ ಘಂಟೆ 9–15ರೊಳಗೆ ತಲಪುವಂತೆ ಪ್ರಾರಂಭಿಸುತ್ತೇವೆ. ಈ ಸರ್ವೀಸಿನಲ್ಲಿ ಮಂಗಳೂರಿನಿಂದ ಸಹಾ ಕಾರ್ಕಳಕ್ಕೂ ಮತ್ತು ಉಡುಪಿಗೂ ಮಾತ್ರ ಪ್ರಯಾಣಿಸಬಹುದಲ್ಲದೆ ಅಲ್ಲಲ್ಲಿ ನಿಲ್ಲಿಸಿ ಪ್ಯಾಸೆಂಜರರನ್ನು ಹತ್ತಿಸುವ, ವ, ಇಳಿಸುವ ಏರ್ಪಾಡು ಇರುವುದಿಲ್ಲ.

			ರೂ. ಆ. ಪೈ.
ಚಾರ್ಜು:—	ಮಂಗಳೂರು—ಕಾರ್ಕಳ		1—10—0
	ಮಂಗಳೂರು—ಉಡುಪಿ		2—14—0
	ಕಾರ್ಕಳ —ಉಡುಪಿ		1— 3—0

ವಿ. ಸೂಚನೆ:—ಜಿಲ್ಲೆಯ ಎಲ್ಲಾ ಸರ್ವೀಸುಗಳಿಗೂ ಒಂದು ದಿವಸ ಮುಂಚಿತವಾಗಿಯೂ ಜಿಲ್ಲೆಯ ಹೊರಗೆ ಕಡೂರು—ಮೈಸೂರು—ಹರಿಹರ ಇತ್ಯಾದಿ ಸ್ಥಳಗಳಿಗೆ ಹೋಗುವವರಿಗೆ ಎರಡು ದಿವಸಗಳ ಮುಂಚಿತವಾಗಿಯೂ ಟಿಕೇಟು ಆಗುವಂತೆ ರಿಜರ್ವೇಶನ್ ಏರ್ಪಾಡು ಕೂಡಾ ಇಂಟು.

ಮಂಗಳೂರು
14–10–49

ಜ್ಯೊಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ, ಮಂಗಳೂರು.

THE CANARA BANKING CORPORATION LTD.

(Incorporated in India with limited liability)

Estd: 1906.

ANNOUNCEMENT

A Branch of the Bank will shortly be opened at PONAMPET (South Coorg)

ಬ್ಯಾಂಕಿನ ಒಂದು ಶಾಖೆಯು ಸದ್ಯದಲ್ಲಿಯೇ

ಪೊನ್ನಂಪೇಟೆ (ದಕ್ಷಿಣ ಕೊಡಗು)ಯಲ್ಲಿ ತೆರೆಯಲಾಗುವುದು

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳ ಕಡ್ಡಿ, ವಿಷ್ಟ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ. ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನಿರಾಮ್ಮಕಾಲದ ನಿಶ್ಚಿಂತೆ ಜೀವನಕ್ಕೆ — ಕುಟುಂಬದ ಸುಖ ಸೌಕರ್ಯಕ್ಕೆ

ಅತ್ಯಮೂಲ್ಯ ಆಕರ್ಷಕ ವಿಮಾಯೋಜನೆ:

ಮಾಸನಕ್ಕೆ ಕೇವಲ ರೂ. 55/-ರ ವಿನಿಯೋಗದಿಂದ ರೂ. 30,080/- ನಿಧಿ ನಿಮ್ಮದಾಗುವುದು

ಆಥವಾ ವರ್ಷಂಪ್ರತಿ ರೂ. 1,998ರಂತೆ ಕಾಯಂ ಆಗಿ ದೊರೆಯುವ ಅಡೀವ ವರ್ಷಾಸನ (ವರ್ಷದಲ್ಲಿ ನೀವು ತೆತ್ತ ಹಣ ರೂ. 660/ ಮಾತ್ರ)

ಅಥವಾ ನಿಶ್ಚಿತ ಅವಧಿಯಲ್ಲಿ ರೂ. 17830/- ನಗದು

ಆಥವಾ ನಿರ್ದಿಷ್ಟ ಅವಧಿಯಲ್ಲಿ ರೂ. 28,600/- ಮತ್ತು ಮರಣಾನಂತರ ಇನ್ನೊಮ್ಮೆ ರೂ. 10,000/-

ಮೇಲೆ ನಮೂದಿಸಿದುದು ಮಾತ್ರವಲ್ಲದೆ ಕ್ಲುಪ್ತ ಅವಧಿಯ ಮೊದಲು, ಯಾವ ಸಮಯದಲ್ಲೇ ಆಗಲಿ, ಮರಣ ಹೊಂದಿದರೆ, ವರ್ಷಕ್ಕೆ ರೂ. 1000/-ಕ್ಕೆ ರೂ. 30/-ರಂತೆ ಖಾತ್ರಿಯಾಗಿ ಬೋನಸ್ಸು ದೊರೆಯುವ ರೂ. 10,000/-ದ ಪೂರ್ಣ ವಿಮಾರಕ್ಷಾ ಕವಚ ಸಹಾ.

ವಿಮಾ ಕ್ಷೇತ್ರದಲ್ಲಿ 40 ವರ್ಷಕ್ಕೆ ಮಿಕ್ಕಿ ದುಡಿದು ಉತ್ತಮ ಅನುಭವ ಗಳಿಸಿದ ನಿಮ್ಮ ವಿಮೆಯ ಉತ್ಕೃಷ್ಟ ಸಲಹೆಗಾರರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಚೀಫ್ ಏಜೆಂಟ್ಸ್:

ದಿ ಬೊಂಬ್ಬಾ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಬೊಂಬಾಯಿ ಲ್ಯಾಫ್ ಬಿಲ್ಡಿಂಗ್, ಉಡುಪಿ (ದ. ಭಾರತ)

M/s. KOCHIKAR BROTHERS, LTD.,

Chief Agents:

The Bombay Life Assurance Co. Ltd.,

(Bombay Life Building Udipi S. India)

With Offices at:—Mangalore, Calicut, Coimbatore, Madura, Bangalore City, Trivandrum, Madras, Bombay.

ಕೆನರಾ ಬ್ಯಾಂಕು, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಭಾರತದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ; ೧,೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು . . . . . ನೂರಕ್ಕೆ ವರ್ಷಕ್ಕೆ ೨।

ಅರಿಂದ ೫ ತಿಂಗಳು . . . . ,, ,, ೨॥

೬ರಿಂದ ೯ ತಿಂಗಳು . . . . ,, ,, ೨॥

ರೂ. ೧,೦೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಮಂಗಳೂರು ಶಾಖೆಗಳು:

(1) ಬಂದರ ರೋಡ (2) ಡೊಂಗರಕೇರಿ

ಇತರ ಶಾಖೆಗಳು:—ಕಾರ್ಕಳ, ಬಂಳವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ, ಇತ್ಯಾದಿ.

CANARA BANK, LIMITED.

ESTD: 1906

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seleteed ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ಸುರಿತ ಅನುಭವಸ್ಥರಿಂದ ಉತ್ಕೃಷ್ಟ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಕಡಿಗೆಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಜಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಕಳ್ಳಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 44] ಶಾರೀಕು 3—3—1950 [ಸಂಚಿಕೆ 9]

ವಿದೇಶ ವಾರ್ತಾ ಸಂಗ್ರಹ

ಅಳಿದುಳಿದ ಚೀನೀ ರಾಷ್ಟ್ರೀಯ ಬಲ

ಕಮ್ಯೂನಿಸ್ಟರಿಂದ ಆಗ್ನೇಯ ಭಾಗಕ್ಕೆ ಕಳ್ಳಲ್ಪಟ್ಟು ಅಲ್ಲಲ್ಲಿ ಚದರಿಕೊಂಡಿರುವ ರಾಷ್ಟ್ರೀಯ ಚೀನ ಸೈನ್ಯಗಳು ಸೇನಾಪತಿಗಳ ಹತೋಟಿ ವಿಗುಕ್ತಿನೆಯೆಂದೂ, ಈ ಅನ್ಯ ವಸ್ಥೆಯನ್ನು ಸಹಿಸದೆ ಪ್ರಸ್ತುತ ಪ್ರಧಾನ ಯೆನ್ ಶೀಶಾನ್‌ರವರು ಅಧಕ್ಷ ಪೀ ಅವರಿಗೆ ರಾಜಿನಾಮೆ ಕಳುಹಿಸಿದುವರೆಂದೂ ತಿಳಿದುಬರುತ್ತದೆ ಅಮೇರಿಕದಲ್ಲಿ ಸಂಚಾರ ಮಾಡುತಿದ್ದ ಪೀ ಅವರನ್ನು ಹಿಮ್ಮರಳಬೇಕಾಗಿ ಇತರ ಮಂತ್ರಿಗಳು ತಂತಿ ಕಳುಹಿಸಿರುನರು

ಚರ್ಚಿಲ್ಲರೂ ರಶ್ಯವೂ

ನೂತನ ಶೋಧವಾಗ ಹ್ಯಾಡ್ರೋಜನ್ ಬೊಂಬಿನ ಅಪತ್ತನ್ನು ಮುಂದಿಟ್ಟು ರಶ್ಯದೊಡನೆ ಹೊಸ ವಿಧಾನದ ಮಾತುಕತೆಗಳನ್ನಾರಂಭಿಸಬೇಕೆಂದು ಚರ್ಚಿಲ್ಲರು ತಮ್ಮ ಚುನಾವಣೆ ಘೋಷಣೆಯಾಗಿ ಸಾರಿದ್ದು "ಕೇವಲ ಕಣ್ಣುಕಟ್ಟು" ಎಂದು ಸಮಾಜವಾದಿ ಪತ್ರಿಕೆಗಳಿಂದ ಟೀಕಿಸಲ್ಪಟ್ಟಿದೆ ಈ ಕುರಿತು ಚರ್ಚಿಲ್ಲರು "ಯುದ್ಧವಾದರೆ ನರಳುವುದು ಜನತೆಯಲ್ಲದೆ ಸಮಾಜವಾದಿ ಮುಖಂಡರು ರಕ್ತ ಸುರಿಸಲು ಮುಂದೆ ಬರಲಾರರು" ಎಂದಿರುವರು ತಮ್ಮ ಹೇಳಿಕೆಗೆ ವಿಶ್ವವಿಶಾಲ ಸಮರ್ಥನೆ ದೊರಕಿದೆಂದು ಅವರ ವಿಶ್ವಾಸ

ಲೇಬರ್ ವಿಜಯ

ಈ ಸಲದ ಬ್ರಿಟಿಷ್ ಚುನಾವಣೆಗಳಲ್ಲಿ ಬ್ರಿಟಿಷ್ ಲೇಬರ್ ಪಕ್ಷವು ಚರ್ಚಿಲ್ಲರ ಕನ್ಸರ್ವೆಟಿವ್ ಪಕ್ಷಕ್ಕಿಂತ 6 ಸದಸ್ಯರ ಬಹುಮತವನ್ನು ಪಡೆದು ಗೆದ್ದಿದೆ. ಇದರಿಂದ ಎಟ್ಲಿ ಸರಕಾರದ ಮೇಲೆ ಅಲ್ಲಿ ಬಹುಮತದ ವಿಶ್ವಾಸವಿದೆಯೆಂದು ಸ್ಪಷ್ಟವಾಯಿತು.

ಪುನಃ ಚಿಯಾಂಗರು ಪ್ರವೇಶ

ಚಿಯಾಂಗ್ ಕೇಶೇಕರು ಪುನಃ ರಾಷ್ಟ್ರೀಯ ಚೀನದ ಮುಖಂಡತ್ವವನ್ನು ವಹಿಸಿ ಕಮ್ಯುನಿಸ್ಟರೊಡನೆ ಹೋರಾಡಲು ಸಿದ್ಧತೆ ನಡೆಸಿರುವರೆಂದು ತಿಳಿಯುತ್ತದೆ. ಅವರು ಇದೇ ಮಾರ್ಚ್ 1ರಿಂದ ರಾಷ್ಟ್ರೀಯ ಚೀನೀ ಸರಕಾರದ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿರುವರು.

ಅಮೇರಿಕದಲ್ಲಿ ಗಾಂಧೀ ಸ್ಮಾರಕ

ಸಂಯುಕ್ತ ಅಮೇರಿಕದ ರಾಜಧಾನಿ ವಾಶಿಂಗ್‌ಟನ್ನಿನ ಬಡಜನತೆಯ ವಸತಿಯ ಕೇಂದ್ರದಲ್ಲಿ ಸುಮಾರು ಒಂದು ಕೋಟಿ ಡಾಲರು ಮೌಲ್ಯದ ಗಾಂಧೀ ಸ್ಮಾರಕವನ್ನು ಸ್ಥಾಪಿಸಲು ಧನ ಸಂಗ್ರಹವಾಗುತ್ತಿರುವುದು ಈ ಸ್ಮಾರಕವು ಮಹಾತ್ಮರ ಜೀವನಾದರ್ಶಗಳ ಸಂಕೇತ ಸ್ವರೂಪದ್ದಾಗಿರುವಂತೆ ರಚಿಸಲಾಗುವುದೆಂದು ಹೇಳಲಾಗಿದೆ

ಹಿಂದ್ - ಪಾಕ್ ಸಮಸ್ಯೆಯ ಕುರಿತು

ಈಜಿಪ್ತದ ಮುಖ್ಯ ಪ್ರಧಾನ ಡಾಹಾಸ್ ಪಾಶಾರವರು ಅರಬ ರಾಷ್ಟ್ರಗಳ ಪ್ರತಿನಿಧಿಗಳ ಒಂದು ವರಿಷತ್ತನ್ನು ಕೈರೋದಲ್ಲಿ ಏರ್ಪಡಿಸಲು ಯೋಜಿಸಿದ್ದಾರೆ ಇದರಲ್ಲಿ ಭಾರತ ಪಾಕಿಸ್ತಾನಗಳೊಳಗಿನ ಕಚ್ಚಾಟವನ್ನು ಪರಿಹರಿಸಲು ಪ್ರಯತ್ನಗಳಾಗುವುದಂತೆ

ಅಣುಬಾಂಬಿನ ಹೆದರಿಕೆ ಇಲ್ಲ

ರಶ್ಯನ್ ಸೈನ್ಯದ 27ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಅಲ್ಲಿನ ಪ್ರಾವ್ದಾ ಪತ್ರಿಕೆಯು ಒಂದು ಅಗ್ರ ಲೇಖದಲ್ಲಿ "ರಶ್ಯವು ಶಾಂತಿಪ್ರಿಯ ರಾಷ್ಟ್ರ, ಆದರೆ ಸಾಮ್ರಾಜ್ಯ ಶಾಹಿಗಳು ಅಣುಬಾಂಬಿನಿಂದ ನಮ್ಮನ್ನು ಹೆದರಿಸುತಿದ್ದಾರೆ ನಮ್ಮ ಕಾರ್ಮಿಕ ಜನತೆ ಈ ಬೆದರಿಕೆಗಳಿಗೆ ಸೊಪ್ಪು ಹಾಕಲಾರದು" ಎಂದು ಬರೆದಿದೆ.

ಸ್ವದೇಶ ವಾರ್ತಾಸಾರ

ಹೊಸ ಶಾಸನ

ಹಿಂದೀ ಪಾರ್ಲಿಮೆಂಟಿನಲ್ಲಿ ಹೊಸ ಶಾಸನವೊಂದು ಅತ್ಯವಸರದಿಂದ ಮಂಜೂರು ಮಾಡಲಾಯಿತು ಅದರ ಪ್ರಕಾರ ದೇಶದಲ್ಲಿ ಅಪಾಯಕಾರಕ ಚಟುವಟಿಕೆಗಾರರೆಂದು ಸಂಶಯಿಸಲ್ಪಟ್ಟವರನ್ನು ಸ್ಥಾನ ಬದ್ಧತೆಯಲ್ಲಿಡಲು ಅನುಕೂಲವಾಗಿದೆ ಇದುತನಕದ ಆ ಕುರಿತಾದ ಶಾಸನಗಳು ಕೆಲವು ಪ್ರಾಂತ್ಯಗಳ ಹೈಕೋರ್ಟುಗಳಲ್ಲಿ ತೀವ್ರ ಅವ್ಯವಸ್ಥೆಯ ಟೀಕೆಗೊಳಗಾಗಿದ್ದುವು ಇದನ್ನು ಪರಿಹರಿಸಲು ಗೃಹ ಮಂತ್ರಿ ಸರ್ದಾರ್ ಪಟೇಲರು ಈ ಹೊಸ ಶಾಸನವನ್ನು ರಚಿಸಿದ್ದರು.

ರಶ್ಯದೊಡನೆ ಶಾಂತಿ ಒಪ್ಪಂದವಿಲ್ಲ

ಯಾವ ತರದ ಸೌಹಾರ್ದ ಭಾವವನ್ನು ತೋರಿಸದ ರಶ್ಯದೊಡನೆ ಅಮೇರಿಕವು ಎಂದಿಗೂ ಶಾಂತಿ ಒಪ್ಪಂದವನ್ನು ಮಾಡಿಕೊಳ್ಳಲಿಚ್ಛಿಸುವುದಿಲ್ಲವೆಂದು ಅಧ್ಯಕ್ಷ ಟ್ರೂಮನ್ನರು ಒಂದು ಹೇಳಿಕೆಯಲ್ಲಿ ತಿಳಿಸಿದರು

ಮದ್ರಾಸ್ ಆಯವ್ಯಯಪಟ್ಟಿ

ಮದ್ರಾಸ್ ವ್ಯಾಂಕ್ಯದ 1950–51ರ ಆಯವ್ಯಯ ಪಟ್ಟಿಯು ಪ್ರಕಟವಾಗಿದೆ. ಅದರಲ್ಲಿ ಯಾವ ಹೊಸ ತೆರಿಗೆಗಳ ವಿಚಾರವಿಲ್ಲ ಹಳೆಯವುಗಳನ್ನು ರದ್ದುಮಾಡುವ ಸೂಚನೆಯೂ ಇಲ್ಲ ವಿದ್ಯಾಖಾತೆಗೆ ಸುಮಾರು 11 ಕೋಟಿ ಅಂದರೆ ಆಯತಾಂಶದ ಸುಮಾರು ಹದನೇ ಒಂದು ಪಾಲಿನಷ್ಟು ವಿಂಗಡಿಸಲಾಗಿದೆ. ಮೂಲ ಶಿಕ್ಷಣ, ನವೀನ ವಿದ್ಯಾಕ್ರಮಗಳಿಗೆ ಹೆಚ್ಚಿನ ಸೌಕರ್ಯಗಳು ನಮೂದಿಸಲಾಗಿದೆ. ಒಟ್ಟಿನಲ್ಲಿ ಕಳೆದ ವರ್ಷ ಸುಮಾರು 53 ಲಕ್ಷ ಉಳಿತಾಯವಾಗಿದ್ದರೆ ಬರುವ ಈ ವರ್ಷ ಸುಮಾರು 31 ಲಕ್ಷ ರೂಪ್ಯಾಗಳ ಕೊರತೆ ಬೀಳಬಹುದೆಂದು ಅದರಲ್ಲಿ ಕಾಣಿಸಲಾಗಿದೆ

ಖಾನೇಷುಮಾರಿಯಲ್ಲಿ ಜಾತಿ ವಿವರ

ಮುಂದೆ ತೆಗೆಯಲಾಗುವ ಖಾನೇಷು ಮಾರಿಯಲ್ಲಿ ನ್ರಜೆಗಳ ಜಾತಿಮತ ವಿವರಗಳನ್ನು ಹೆಚ್ಚು ವಿಸ್ತಾರವಾಗಿ ಕಾಣಿಸದಂತೆ, ಅಂದರೆ ಅದರಿಂದ ಯಾವ ತರದ ವಿಭೇದಾತ್ಮಕ ಭಾವನೆಯುಂಟಾಗದಂತೆ ಬರಕೊಳ್ಳುವಂತೆ ಏರ್ಪಾಡು ಮಾಡಲಾಗುವುದೆಂದು ಮುಖ್ಯ ಪ್ರಧಾನ ನೆಹರುರವರು ಪಾರ್ಲಿಮೆಂಟಿನಲ್ಲಿ ತಿಳಿಸಿದರು. ಸದಸ್ಯರು ಆ ಸೂಚನೆಯನ್ನು ಹರ್ಷೋದ್ಗಾರಗಳಿಂದ ಸ್ವೀಕರಿಸಿದರು.

ಕೇಂದ್ರ ಮಂತ್ರಿ ಮಂಡಳದಲ್ಲಿ ಬದಲಾವಣೆ

ಭಾರತ ಸರಕಾರದ ಮಂತ್ರಿಮಂಡಳದ ಮೂವರು ಮಂತ್ರಿಗಳು ರಾಜನಾಮೆ ಕೊಡಲಿರುವರೆಂದೂ ಅವರ ಸ್ಥಾನಗಳನ್ನು ಬೇರೆ ಸದಸ್ಯರಿಂದ ಭರ್ತಿ ಮಾಡಲಾಗುವುದೆಂದೂ ತಿಳಿಯುತ್ತದೆ. ಒರಿಸ್ಸಾದ ಹರೇಕೃಷ್ಣ ಮೇತಾಬರು ಕೇಂದ್ರ ಮಂತ್ರಿಗಳಾಗುವ ಸಂಭವವಿದೆಯೆಂದೂ ಒಂದು ವಾರ್ತೆಯಿದೆ.

THE UNITED INDIA LIFE ASSURANCE COMPANY LIMITED.

MADRAS.

"UNITED INDIA"

UNITED INDIA is one of the soundest of insurance concerns.
It is the custodian of more than 40 millions of rupees belonging the Policy holders.
It has more than 100,000 Policy holders.
It has assured sums of more than Rs. 200 millions.
It has constituted a TRUST—the Official Trustee of Madras is the Trustee for the Policy—holders' Fund.
UNITED INDIA is a household word in South India and is well—Known throughout India, Ceylon, Malaya and East Africa.
For particulars please apply to:—
The Branch Manager,



ಮೋಟಾರು ಕೆಲಸಗಾರರ ಮುಷ್ಕರ

ಕಳೆದ ತಾ. ೨೩ರಿಂದು ಆರಂಭವಾದ ಮೋಟಾರ ಕೆಲಸಗಾರರ (ಮುಷ್ಕರವು ಮುಂದುವರಿಯುತ್ತಿದೆ. ಎರಡು ದಿನಗಳ ನಂತರ ಮೋಟಾರ್ ಮ್ಹಾಲಕರು ಲಾಕ್‌ಔಟ್‌ನ್ನು ಮಾಡಬೇಕಾದ ಪರಿಸ್ಥಿತಿ ಉತ್ಪನ್ನವಾಯಿತೆಂದು ಹೇಳಲಾಗಿದೆ. ವರಿಷ್ಠಾನುವಾಗಿ ತಾ. ೨೪ರಿಂದ ಬಸ್ ಚಲಾವಣೆಯು ಸಂಪೂರ್ಣ ಸ್ಥಬ್ದವಾಯಿತು. ಕೆಲವು ಸಂದಿಗ್ಧ ಸ್ಥಳಗಳಲ್ಲಿ ಕಲ್ಲು ಹೊಡೆತಗಳೂ, ಅಭ್ಯಂತರಗಳೂ ಕಂಡುಬಂದುವು. ಹೀಗೆ ಮುಷ್ಕರವು ಹಿಂಸಾತ್ಮಕ ರೂಪವನ್ನು ತಾಳಿವ ನಿದರ್ಶನಗಳು ಕಂಡುಬಂದುವು. ಮಂಗಳೂರು ನಗರದ ಮಟ್ಟಿಗೆ ಪ್ರಯಾಣ ಬಸ್ಸು ಮತ್ತು ಲಾರಿಗಳ ಚಲಾವಣೆಯಿಂದಾಗುತ್ತಿದ್ದ ವ್ಯವಹಾರವು ಮಂದಗತಿಯನ್ನು ತಾಳಿರುವುದು ಬಜಾರುಗಳಿಂದ ಬಂದ ಸುದ್ದಿಯಿಂದ ತಿಳಿಯುತ್ತವೆ. ಅಭ್ಯಂತರದ ಉಪಟಳಗಳು ಹೆಚ್ಚಾಗುತ್ತಿವೆಂಬ ಸುದ್ದಿ ಹರಡಿದೊಡನೆ ಪಾಸಗಿ ಲಾರಿಗಳ ಚಲಾವಣೆ ನಿಲ್ಲಿಸುವಂತಾಯಿತು. ಮತ್ತೆ ತಾ. ೨೬ರಿಂದ ಕೆಲ ಸರ್ವೀಸುಗಳು ಕಟ್ಟಿಣದ ಸಂಗೆಗಳಿಂದ ಮುಚ್ಚಲ್ಪಟ್ಟು ಪೋಲೀಸರಿಂದೊದಗೂಡಿ ಚಲಾವಣೆ ಮಾಡಲ್ಪಟ್ಟವು. ತಲಚೇರಿ ಕಡೆಯಿಂದ ಡ್ರೈವರರು ಕರೆಲ್ಪಟ್ಟಿದ್ದರು. ಕೆಲವು ಹೊಸ ಡ್ರೈವರರುಗಳನ್ನು ನೇಮಕ ಮಾಡಲಾಗಿತ್ತು. ತಾ ೨೭ರಿಂದ ಹೆಚ್ಚೆಚ್ಚು ಸರ್ವಿಸುಗಳು ಚಲಾವಣೆಯಾಗತೊಡಗಿದುವು: ಇದು ಪೋಲೀಸ್ ಉಸ್ತುವಾರಿ ನುತ್ತ ಬಿಗಿ ಧೋರಣೆಯಿಂದ ಪರಿಣಾಮವೆಂದೆನ್ನಲಾಗಿದೆ. ಮದ್ರಾಸ್ ಸ್ಪೆಶಲ್ ಪೋಲೀಸಿನ ಪಡೆಯೂ ೬೦ ಮಂದಿಗಳಷ್ಟರ ಮಟ್ಟಿಗೆ ತರಲ್ಪಟ್ಟಿದೆ. ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಅವರು ಖುದ್ದಾಗಿ ಪರಿಸ್ಥಿತಿಯನ್ನು ಪರಾಂಬರಿಸಲು ಬಂದಿರುವರೆಂದೂ ತಿಳಿಯುತ್ತದೆ. ಮೋಟಾರ್ ವರ್ಕರ್ಸ್ ಯೂನಿಯನಿನ ಮುಷ್ಕರ ಪ್ರಾರಂಭವಾದ ಎರಡು ದಿನಗಳಲ್ಲಿ ಆಟೋಮೊಬ್ಯಾಲ್ ವರ್ಕರ್ಸ್ ಯೂನಿಯನ್ನಿನವರೂ ನೋಟಿಸು ಕೊಟ್ಟಿದ್ದರೆಂದೂ ಅದೀಗ ಹಿಂತೆಗೆಯಲ್ಪಟ್ಟಿದೆಯೆಂದೂ ತಿಳಿದು ಬರುತ್ತದೆ.

ಮುಷ್ಕರದ ಸಂಬಂಧ ತಿಳಿದುಬಂದ ಕೆಲವು ಸಂಗತಿಗಳು ಹೀಗಿವೆ: ಮುಷ್ಕರ ಪ್ರೇರೇಪಿಸಿದ ಕೆಲಸಗಾರರ ಯೂನಿಯನ್ನು ರಿಜಿಸ್ಟರ್ ಆದ ಸಂಸ್ಥೆಯಲ್ಲ. ಕೆಲವೆ ಎಂ. ಎಲ್. ಎ.ಗಳು ರಾಜಿನ್ಯಮಾತ್ಮ ನಡೆಸಿದ್ದರೂ ಸದ್ರಿ ಸಂಸ್ಥೆಯ ಮುಷ್ಕರ ಸಮಿತಿಯವರು ರಾಜಿಗೆ ಸಾಧಕವಾದ ಧೋರಣೆಯನ್ನು ನಹಿಸದಾದರು. ಮೋಟಾರ್ ಮ್ಹಾಲಕರ ಪರವಾಗಿ ಸರಕಾರಕ್ಕೆ ಅನೇಕ ಮನವಿಗಳು ಮಾಡಲ್ಪಟ್ಟವೆಯೊದರೂ "ಮೈಲಿ ದರವನ್ನು ಏರಿಸುವ ಕುರಿತು ಸರಕಾರ ಪರ್ಯಾಲೋಚಿಸುತ್ತಿದೆ" ಎಂಬುದಕ್ಕಿಂತ ಹೆಚ್ಚಿನ ಉತ್ತರ ದೊರೆಯಲ್ಲಿಲ್ಲ. ದರ ಹೆಚ್ಚಿಸದೆ ಎವರ್ಡೆನ್ ಶರ್ತಗಳಂತೆ ಮಜೂರಿ ಕೇಳಿಕೆಗಳನ್ನು ಪೂರೈಸಲು ಸಾಧ್ಯವಿಲ್ಲ. ಈಗ ಒಂದು ನೇಳೆ ದರವನ್ನು ಹೆಚ್ಚಿಸಿದರೂ ಕಳೆದರಡು ವರ್ಷಗಳಿಂದ ಬಾಕಿಯಾದ ಎಲಾ ರೀತಿಯ ಹಣವನ್ನು ಕೊಡಲು ಕಂಪೆನಿಗಳಿಗೆ ಸಾಧ್ಯವಾಗುವುದಿಲ್ಲ. ಏನಾದರೂ ಕೊಡುವುದಿದ್ದರೆ ಅದು ದರ ಹೆಚ್ಚಿಸಿದ ಅವಧಿಯ ನಂತರದಿಂದ ಕೊಡಲು ಸಾಧ್ಯವಾಗುತ್ತದೆ. ಬಸ್ ಕಂಪೆನಿಗಳವರು ತಮ್ಮ ಸಂಸ್ಥೆಗಳು ಸರಕಾರದ ವಶಕೊಡಲು ಸಿದ್ಧರಿದ್ದಾರೆ. ಈಗಿನ ಮೋಟಾರು ಉಪಕರಣಗಳ ವಿಪರೀತ ಏರಿದ ಧಾರಣೆಯಿಂದ ಈಗಿರುವ ೬॥ ಸೈ ದರದಲ್ಲಿ ಕಂಪೆನಿಗಳನ್ನು ಚಲಾಯಿಸುವುದು ಅಸಾಧ್ಯ. ಎವಾರ್ಡ್ ಕೊಡುವಾಗ ಟ್ರಿಬ್ಯೂನಲಿನವರು ಕೆಲವೊಂದು ಪ್ರಾಮುಖ್ಯ ಸಂಗತಿಗಳನ್ನು ಅಲಕ್ಷಿಸಿದ್ದಾರೆ. ದರಗಳನ್ನು ಏರಿಸಬೇಕೆಂಬುದರ ಕುರಿತು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಮಾತ್ರವಲ್ಲ ರಿಜಿಸ್ಟರ್ಡ್ ಆದ ಆಟೊಮೊಬ್ಯಾಲ್ ವರ್ಕರ್ಸ್ ಯೂನಿಯನ್ನಿನವರು ಕೂಡ ಠರಾವು ಮಾಡಿ ಸರಕಾರಕ್ಕೆ ಕಳುಹಿಸಿದ್ದರು.

ಕಳೆದ ತಾ. ೨೬ನೇ ಸೋಮವಾರ ನಗರದ ಹಲವು ಔದ್ಯೋಗಿಕ ಕಾರ್ಖಾನೆಗಳ ಕೆಲಸಗಾರರು ಮೋಟಾರ್ ಕೆಲಸಗಾರರ ಮುಷ್ಕರದೊಡನೆ ಸಹಾನುಭೂತಿ ತೋರಿಸಲಿಕ್ಕಾಗಿ ಬಹುಸಂಖ್ಯೆಯಲ್ಲಿ ಕೆಲಸಕ್ಕೆ ಹೋಗದೆ ಇದ್ದ ನಿದರ್ಶನಗಳು ಗಮನಕ್ಕೆ ಬಂದಿವೆ. ಈಗ ಮುಷ್ಕರವನ್ನು ಹಿಂತೆಗೆಯಲಾಗಿದೆ.

ಕಲೆಕ್ಟರರ ಪತ್ರಿಕೋದ್ಯಮಿಗಳ ಸಭೆ

ಜಿಲ್ಲಾ ಕಲೆಕ್ಟರರು ಈಚೆಗೆ ಪತ್ರಿಕೋದ್ಯೋಮಿಗಳಿಗೆ ತಮ್ಮ ಕಚೇರಿಯಲ್ಲಿ ಕೊಟ್ಟ ಭೇಟಿಯ ಕಾಲದಲ್ಲಿ—ಆಂಧ್ರ ನೆರೆ ಬಿರುಗಾಳಿ ಅನಾಹುತಗಳ ಪರಿಹಾರ ನಿಧಿಗೆ ದ. ಕ. ಜಿಲ್ಲೆಯಲ್ಲಿ ಸುಮಾರುಗಿಷ್ಟ ಸಾವಿರ ರೂಪ್ಯಾ ಸಂಗ್ರಹವಾಗಿದೆಯೆಂದು ತಿಳಿಸಲ್ಪಟ್ಟಿತು. ಇಲ್ಲಿನ ಗ್ರಾಮಾಂತರಗಳ ೫ ವರ್ಷ ಯೋಜನೆಗಾಗಿ ೪೮ ಸಾವಿರ ರೂಪಾಯಿಗಳು ಮಂಜೂರಾಗಿದ್ದು ಅದರಲ್ಲಿ ೨೦ ಸಾವಿರ ರೂಪ್ಯಾಗಳಷ್ಟು ಕಾಮಗಾರಿ ಪೂರ್ತಿಸಿದೆ. ಈ ಇಲಾಖೆಯ ಸುಪರ್‌ವೈಜರರಾಗಿ ಶ್ರೀ ಎಸ್. ಜಗದ್ರಕ್ಷಕನ್ ಅವರು ಇಲ್ಲಿಗೆ ಬಂದು ಆವರ ಕಾರ್ಯಭಾರ ನೋಡಿಕೊಳ್ಳುತಿದ್ದಾರೆ. ಜಿಲ್ಲೆಗೆ ಪ್ರತಿ ತಿಂಗಳಲ್ಲಿ ೨೨೦೦ ಗೋಣಿ ಸಕ್ಕರೆ ಹೆಂಚುವ ಯೋಜನೆ ತಯಾರಾಗಿದೆ. ಜಿಲ್ಲೆಗೆ ಕೂಡಲೇ ೫ ಸಾವಿರ ಟಿನ್ ಅಕ್ಕಿ ಕಳುಹಿಸುವಂತೆ ಮೇಲಧಿಕಾರಿಗಳಿಗೆ ಬರಕೊಳ್ಳಲಾಗಿದೆ. ಎಂಬ ಸಂಗತಿ ಜಿಲ್ಲಾ ಕಲೆಕ್ಟರರು ತಿಳಿಸಿದರು.

ಹವಾಮಾನ

ಬೇಸಿಗೆಯಾರಂಭವಾದಂತೆಯೆ ಉಬ್ಬಿ ಬಿಸಿಲುಗಳು ಕಾಯುತ್ತಿವೆ. ರಾತ್ರೆ ಮತ್ತು ಬೆಳಗ್ಗಿನ ಉದಯಕಾಲದ ಹೊತ್ತುಗಳಲ್ಲಿ ಆಕಾಶವು ಮೋಡಬರಿತವಾಗಿರುವುದು ಕಂಡುಬರುವುದು. ಈ ವರ್ಷದ ಬೇಸಿಗೆಯಾರಂಭದ ಹವೆಯ ಒಂದು ವಿಶೇಷ ಲಕ್ಷಣವೆನ್ನಬಹುದು. ಮಧ್ಯಾಹ್ನದ, ರಾತ್ರೆ ಹೊತ್ತುಗಳಲ್ಲಿ ಸ್ವಲ್ಪ ಗಾಳಿಯ ಸಂಚಾರವೂ ಇರುವುದು. ಜಿಲ್ಲೆಯ ಹೆಚ್ಚಿನ ಕಡೆಗಳಲ್ಲಿ ಸುಗ್ಗಿ ಸೈರಿನ ಕಟ್ಟಾವು ಮುಗಿಯುತ್ತ ಬಂದಿರುತ್ತದೆ.

ಜಿಲ್ಲಾ ಆಹಾರ ಸಮಿತಿಯ ಸಭೆ

ಈಚೀಚೆಗೆ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಅವರ ಅಧ್ಯಕ್ಷತೆಯಲ್ಲಿ ನೆರೆದ ಜಿಲ್ಲಾ ಆಹಾರ ಸಮಿತಿಯ ಸಭೆಯಲ್ಲಿ ಈ ಕೆಳಗಿನ ವಿಷಯಗಳ ಕುರಿತು ಚರ್ಚೆ, ಇತ್ಯರ್ಥ, ವಿಚಾರಣೆಗಳು ನಡೆದುವು: ಜಿಲ್ಲಾ ಸರಬರಾಯಿ ಅಧಿಕಾರಿಯವರು ಅಕ್ಕಿ ಧಾನ್ಯಗಳ ದಾಸ್ತಾನಿನ ಪರಿಸ್ಥಿತಿಯನ್ನು ವಿವರಿಸಿದರು. "ಹೊಸದುರ್ಗದಲ್ಲಿ ೧ ಸಾವಿರ ಮಂದಿ ಅಕ್ಕಿಯಿಲ್ಲದೆ ಹಿಂದಿರುಗಿದರು ಎಂಬ ನಿರಾಧಾರ ವಾರ್ತೆಯೊಂದು ನುದ್ರಾಸಿನ ಆಂಗ್ಲ ಪತ್ರಿಕೆಯಲ್ಲಿ ಪ್ರಕಟವಾಗಿದ್ದು ಅದನ್ನು ತಕ್ಕ ಅಂಕೆ ಸಂಖ್ಯೆಗಳ ಆಧಾರದೊಡನೆ ತಿದ್ದುವಡಿ ಮಾಡಬೇಕೆಂದು ನಿರ್ಧಾರವಾಯಿತು. (ಅದೀಗ ತಿದ್ದುಪಡಿಯೊಡನೆ ಅತ್ತಕಳುಹಿಸಲ್ಪಟ್ಟಿದೆ) ಸಕ್ಕರೆಯನ್ನು ಮಾರ್ಚ್ ಮೂರನೆ ವಾರದಾರಂಭದಿಂದ (ರೇಶನ್ ಕ್ಷೇತ್ರದಲ್ಲಿ) ವಾರಕ್ಕೆ ತಲೆಯೊಂದಕ್ಕೆ ೫ ತೊಲೆಯಂತೆ ಎಲ್ಲ ಕಾರ್ಡುದಾರರಿಗೆ ಹಂಚಬೇಕು; ತಿಂಗಳಿಗೆ ರೂ. ೧೦೦ಕ್ಕಿಂತ ಹೆಚ್ಚಿನ ಉತ್ಪತ್ತಿಯುಳ್ಳವರಿಗೆ ಆ ಪ್ರಮಾಣ ವಾರಕ್ಕೆ ತಲೆಯೊಂದಕ್ಕೆ ೮ ತೊಲೆಯಂತೆ ಎಂಬ ಕಲೆಕ್ಟರರ ಶಿಫಾರಸು ಮಾನ್ಯವಾಯಿತು. ಹೋಟೇಲಿನವರಿಗೆ ಇಡಲ್ಲಿ ತಿಂಗಳಿಗೆ ೨೫೮ ಗೋಣಿ ಎಂದರೆ ಹಿಂದೆ ಕೊಡುತಿದ್ದ ೪೭೬ ಗೋಣಿಗಳ ಅರ್ಧಾಂಶ, ಅದನ್ನು ಸದ್ಯ ಹೆಚ್ಚಿಸಲು ಸಾಧ್ಯವಿಲ್ಲವೆಂದು ತಿಳಿಸಲಾಯಿತು. ಇಲ್ಲಿ ಈಗ ೮ ವಾರಗಳಿಗೆ ಸಾಕಾಗುವಷ್ಟು ಅಕ್ಕಿ ಮಾತ್ರದ ದಾಸ್ತಾನು ಇದೆ ಎಂದು ಪ್ರಕಟಿಸಲಾಯಿತು. ಮಲಬಾರಿಗೆ ಕಳುಹಬೇಕಾಗಿದ್ದ ೮ ಸಾವಿರ ಟನ್ ಅಕ್ಕಿಯಲ್ಲಿ ಸುಮಾರು ೪ ಸಾವಿರದ ೭೦೦ ಟನ್ ಅಕ್ಕಿ ಕಳುಹಿದ ಬಳಿಕ ಉಳಿದುದನ್ನು ಕಳುಹಬೇಕಿಲ್ಲವೆಂಬ ಅಪ್ಪಣೆಯಾಗಿರುವುದನ್ನು ಶುಕ್ರವಡಿ ಸಲಾಯಿತು. ಈ ಜಿಲ್ಲೆಗೆ ಈ ವರ್ಷ ಮುಂದಿನ ಬೆಳೆಯ ತನಕ ೨೯೫೬ ಟನ್ ಅಕ್ಕಿ ಕಡಿಮೆ ಬರಬಹುದೆಂದು ಅಂದಾಜಾಗಿದೆ.

ರಾಜಕೀಯ ಸಂಶ್ರಸ್ತರಿಗೆ ಉಂಬಳಿ

ಈ ಕೆಳಗಿನ ರಾಜಕೀಯ ಸಂಶ್ರಸ್ತರು ಸರಕಾರದವರಿಂದ ಭೂದಾನ ಪಡೆಯಲು ಶಿಫಾರಸು ಮಾಡಲ್ಪಟ್ಟಿರುವರು: ಶ್ರೀಗಳಾದ ನರಸಿಂಹ ಹೊಳ್ಳ; ಸಂಜೀವ ಶೆಟ್ಟಿ (ಉಡ್ಪಿ)—೪ ಎಕ್ರೆ ೧೧ ಸೆಂಟ್ಸ್; ಕಾರ್ಕಳ—ಸರಸಿಂಹ ರಾವ್, ಆನಂದರಾವ್, ಎಂ. ರಮಾನಾಥ ಶೆಣೈ; ಅಮ್ಮಣ್ಣಿ ಮೈಲಿ—೫ ಎ, ೪೧ ಸೆಂಟ್ಸ್; ಪಾಣೆಮಂಗಳೂರು—ಶ್ರೀ ಎನ್. ಕೇಶವ ಕೊಗ್ಗ ಕುಡ್ವರಿಗೆ ೭೩ ಸೆಂಟ್ಸ್; ಪುತ್ತೂರು-ಶ್ರೀ ಗೋವಿಂದ ಭಂಡಾರಿಗಳಿಗೆ ೫ ಎಕ್ರೆ ೨೩ ಸೆಂಟ್ಸ್; ಕಾಸರಗೋಡು ವರ್ತಮಾನದ ಶ್ರೀ ಪೊಕ್ಕನ್ ಕೃಷ್ಣನ್‌ಗೆ ೬ ಎಕ್ರೆ ೪೧ ಸೆಂಟ್ಸ್; ಕುಂಗಳೂರು—ಟಿ. ಟಿ. ಕೃಷ್ಣ ಮತ್ತು ಕೆ. ಪಿ. ಅಳ್ವ ಇವರೊಳಗೆ ೧೪ ಎಕ್ರೆ ೬೦ ಸೆಂಟ್ಸ್ ಸಮಪಾಲು.

ಅಸಭ್ಯ ವರ್ತನೆಯ ಆರೋಪಕ್ಕೆ

ಕಳೆದ ತಾ. ೨೫ರ ಬೆಳಿಗ್ಗೆ ಬೀಬಿ ಅಲಾಬಯ ಸಿ. ಪಿ. ಸಿ. ಗೇರೇಜ್ ಬಳಿ ಅಸಭ್ಯ ರೀತಿಯಲ್ಲಿ ವರ್ತಿಸಿದ ಆರೋಪದ ಸಂಬಂಧ ಕೈದು ಮಾಡಲ್ಪಟ್ಟ ಮರೋಳಿ ಜನಾರ್ಧನಾಚಾರಿ ಎಂಬಾತನಿಗೆ ಸೆ। ಡಿ। ಮೆಜಿಸ್ಟ್ರೇಟರು ಇದೇ ತಾ. ೩೦ ಕನಕ ರಿಮಾಂಡ್ ಕೊಟ್ಟಿದ್ದರು.

ಅದ್ಭುತವಾದ
ಪೆಪ್ಸ್
ಮಾತ್ರೆಗಳು
ಕೆಮ್ಮು, ಶೀತ, ನೆಗಡಿ
ಶೀತಜ್ವರಗಳನ್ನು
ನಿಲ್ಲಿಸುವುದು
PEPS
ನೀವು ಪೆಪ್ಸ್ ಮಾತ್ರೆಗಳನ್ನು ಹೀರುವಾಗ ಔಷಧೀಯ ಸತ್ವಗಳನ್ನು ನೀವು ಗಂಟಲು ಶ್ವಾಸಕೋಶಗಳಲ್ಲಿ ತುಂಬಿಸುತ್ತೀರಿ. ಪೆಪ್ಸ್‌ನ ಈ ಔಷಧೀಯ ಸತ್ವಗಳು ವಿಷಾಣುಗಳನ್ನು ಶೀಘ್ರ ಧ್ವಲ್ಪ ನಾಶಗೊಳಿಸುತ್ತವೆ, ನೇದನೆ ಊದುವಿಕೆಗಳನ್ನು ಶಮನಿಸುತ್ತವೆ, ಕೆಮ್ಮು, ಉಸಿರಾಟದ ತೊಂದರೆಗಳನ್ನು ಅಂತ್ಯಗೊಳಿಸುತ್ತವೆ. ಸೇವಿಸಲು ಅಹ್ಲಾದಕರವಾಗಿರುತ್ತವೆ.
ವಿಷನಿವಾರಕ ಗಂಟಲು
ಎದೆ ಮಾತ್ರೆಗಳು
ಎದೆಯ ಮತ್ತು ಶ್ವಾಸಕೋಶಗಳ ತೊಂದರೆಗಳಿಗೆ
ಅದ್ಭುತವಾದುವು.
ವಿತರಕರು: ದಾದಾ ಎಂಡ್ ಸನ್ಸ್, ಪಿ. ಬಿ. ಮದ್ರಾಸು

ಮಂಗಳೂರು

ಅನೀತಿ ವ್ಯವಹಾರಕ್ಕೆ ಮೈನರ್ ಹುಡುಗಿಗೆ ದಂಡನೆ

ಅನೀತಿ ವ್ಯವಹಾರದ ಕಾಯಿದೆಯನ್ವಯ ಮಂಗಳೂರಿನಸುಲೋಚನೆ ಎಂಬ ಮೈನರ್ ಹುಡುಗಿಗೆ ಸು ಡಿ: ಮೆಜಿಸ್ಟ್ರೇಟರು ೫ ನರ್ಷಗಳ ತನಕ ಮದ್ರಾಸಿನ ವಿಜಿಲೆನ್ಸ್ ಮಂದಿದಲ್ಲಿರುವಂತೆ ವಿಧಿಸಿರುವರು

ಅಮಲುಪದಾರ್ಥದ ಆರೋಪ

ಮೇಲಿನ ಆರೋಪಕ್ಕೊಳಗಾದ ಬಿಜೈ ಫ್ಲಾಟ್‌ಮೆಂಟ್ ವಾಸನಿಗೆ ರೂ. ೫೦, ಬೋಳಾದ ವೆಂಕಟೇಶನಿಗೆ ರೂ ೪೦ ಹೀಗೆ ಜುಲ್ಮಾನೆಗಳು ನಮ್ಮ ಸಬ್ ಮೆಜಿಸ್ಟ್ರೇಟ ಎಂದ ವಿಧಿಸಲಾಗಿದೆ

ರೈಲ್ವೆ ಲ್ಯಾನ್ ಡಾಟೆದ ಅಪರಾಧಕ್ಕೆ

ಮಂಗಳೂರು ರೈಲ್ವೆ ಸ್ಟೇಶನಿನ ಬಳಿಯ ಫ್ಲೈಲು ಕಂಬಿಗಳನ್ನು ರೈಲು ವೇಳೆಯ ಸಮಯದಲ್ಲಿ ದಾಟಿದರೆಂದು ಆರೋಪಕ್ಕೊಳಗಾದ ೧೧ ಮಂದಿಯಲ್ಲಿ ಸ್ರತಿಯೊಬ್ಬರಿಗೆ ರೂ. ೧೫ರಂತೆ ನಮ್ಮ I ಕ್ಲಾಸ್ ಬೆಂಜಾ ಕೋರ್ಟಿನಲ್ಲಿ ಜುಲ್ಮಾನೆ ವಿಧಿಸಲಾಗಿದೆ

ಕಳ್ಳಸಂತೆ ವ್ಯವಹಾರಕ್ಕೆ ದಂಡನೆ

ಸಿಮೆಂಟ್ ಗೋಣಿಯೊಂದನ್ನು ಅದರ ಕಂಟ್ರೋಲ್ ಬೆಲೆ ರೂ ೪-೯-೪ ಇರುವಾಗ ರೂ ೧೩ಕ್ಕೆ ಮಾರಿದರೆಂಬ ಆರೋಪಕ್ಕೆ ಗುರಿಯಾದ ಅತ್ತಾವರ ಕೃಷ್ಣಪ್ಪ ಪೂಜಾರಿ ಮತ್ತು ವರದ ಪೂಜಾರಿ ಎಂಬವರಿಗೆ ಕ್ರಮವಾಗಿ ೬ ಮತ್ತು ೩ ತಿಂಗಳ ಕಠಿಣ ಸಜೆಯನ್ನು ನಮ್ಮ ಸಬ್ ಡಿವಿಜನಲ್ ಮೆಜಿಸ್ಟ್ರೇಟರು ವಿಧಿಸಿರುತ್ತಾರೆ.

ನಗರ ಸಭೆಯ ಅಧಿವೇಶನ

ಕಳೆದ ತಾ. ೨೫ರಂದು ನಮ್ಮ ಮುನಿಸಿಪಲ್ ಕೌನ್ಸಿಲ್ ಮೀಟಿಂಗು ಅದರ ಚೆಯರ್‌ಮೇನರ ಅಧ್ಯಕ್ಷತೆಯಲ್ಲಿ ಜರಗಿತು ಆಗ ಕೌನ್ಸಿಲರ್ ಶ್ರೀ ಜಿ ಎಸ್. ನಗರ್‌ಕಾರರು ಕೌನ್ಸಿಲಿನ ವಕೀಲರಾದ ಶ್ರೀ ಎಂ ಪಿ ಕಿಣಿಯವರ ಕುರಿತು ಕೆಲವು ಪ್ರಶ್ನೆಗಳನ್ನು ಕೇಳಿದರು ಶ್ರೀ ಕಿಣಿಯವರು ಮಂಗಳೂರು ಮುನಿಸಿಪಲ್ ಕೌನ್ಸಿಲಿನ ವಕೀಲರಾಗಿ ತಾ ೧—೩—೫೦ರಂದು ನೇಮಕವಾಗಿದ್ದರು; ಅವರ ಹುದ್ದೆಯ ಅವಧಿ ಮೂರು ವರ್ಷ, ಸಂಭಾವನೆ ತಿಂಗಳಿಗೆ ರೂ ೧೦೦, ನೇಮಕದ ತಾರೀಕಿನಿಂದ ಅವರು ಕ್ರಿಮಿನಲ್ ಕಟ್ಟೆಗಳ ಸಂಬಂಧದಲ್ಲೇ ವ್ಯವಹರಿಸುತ್ತಿದ್ದರು, ೧೯೪೯ರ ಜುಲ್ಯಾಯಿಂದ ಅವರ ಸಂಬಳ ಬಾಕಿಯಾಗದೆ ಈ ವಿಷಯಗಳ ಕುರಿತು ಕೇಳಲಾಯಿತು ಅವರು ಇನ್ನೂ ಕರಾರು ಬರೆದು ಕೊಡಲಿಲ್ಲ ಎಂದು ಮೇಲ್ಕಂಡ ಪ್ರಶ್ನೆಗಳಿಗೆ ಉತ್ತರ ಕೊಡಲಾಯಿತು ರೆಂಟ್ ಕಂಟ್ರೋಲ್ ಕೆಲಸದ ಸಂಬಂಧ ವಕೀಲ್ ಕಿಣಿಯವರಿಗೆ ಏನೂ ಸಂದಿಲ್ಲವೆಂದೂ ತಿಳಿಸಲಾಯಿತು. ಬಾವುಟಗುಡ್ಡೆಯ ಒಂದು ಭಾಗವನ್ನು ಸೈ: ಎ: ಕಾಲೇಜ್ ಅಥವಾ ಈದ್ಗಾ ಸಮಿತಿಗೆ ಕೊಡದೆ ಅದನ್ನು ವಿಹಾರದ ಉದ್ದೇಶಕ್ಕಾಗಿ ಕೌನ್ಸಿಲಿಗೇ ಕೊಡಿಸುವಂತೆ ಅರಿಕೆ ಮಾಡಿಕೊಳ್ಳುವ ನಿರ್ಣಯ ಮಂಜೂರಾಯಿತು. ಕೌನ್ಸಿಲಿನ ವಕೀಲರಿಗೆ ತಾ. ೩೧-೧೨-೪೯ರ ವರೆಗಿನ ಸಂಭಾವನೆ ಕೊಡಲು ನಿರ್ಧರಿಸಲಾಯಿತು. ಕದ್ರಿಯ ಪಾಚನಾಲಯದ ಕಟ್ಟಡದ ಸಂಬಂಧವಾದ ರೂ.೧೯೯೬-೪-೦ ಟೆಂಡರನ್ನು ಸ್ವೀಕರಿಸಲಾಯಿತು. ಮಂಗಳೂರಿನ ನೀರಿನ ಸರಬರಾಯಿಯ ಯೋಜನೆ ಸಂಬಂಧ ಈ ಕೌನ್ಸಿಲಿನ ವೆಚ್ಚದ ಭಾಗವಾದ ರೂ. ೩೦೦೦ ಸಾಲಕ್ಕಾಗಿ ಕಮಿಶನರರು ಮೊದಲೇ ಬರೆದು ಕೊಂಡದನ್ನು ಕೌನ್ಸಿಲು ಒಪ್ಪಿತು

ಮಣ್ಣಗುಡ್ಡೆಯಲ್ಲಿ ಒಂದು ವಾಚನಾಲಯವನ್ನು ತೆರೆಯುವ ಸವಿಸ್ತಾರ ಯೋಜನೆಯೊಂದನ್ನು ತಯಾರಿಸುವಂತೆ ಕಮಿಶನರರನ್ನು ಕೇಳಿಕೊಳ್ಳಲಾಯಿತು. ಮೂಡು ಶೆಡ್ಡೆಯ ಮಲ್ಲಿಹುಗಿಯ ವ ಸ್ಥಳದಲ್ಲಿ ಒಂದು ಬಾವಿ ತೆಗೆಯುವರೆ ರೂ ೧೬೦೦ ಮಂಜೂರಾಯಿತು ಜೆಪ್ಪಿನ ಮೊಗ್ರು ಗ್ರಾಮದ ಕೆಲಭಾಗಗಳನ್ನು ಮಹಾತ್ಮಾ ಗ್ರಾಮ ಸೇವಾ ಸಂಘ ಇಲ್ಲವೆ ಶಿವಾಜಿ ವ್ಯಾಯಾಮ ಶಾಲೆ ಇವುಗಳಿಗಾಗಿ ಕೊಡಬಾರದೆಂದೂ, ಅದನ್ನು "ಸಾರ್ವಜನಿಕ ವಿಹಾರಕ್ಕಾಗಿ ಕೌನ್ಸಿಲೀಗೇ ಕೊಡಿಸುವ ಈ ಅರಿಕೆಯನ್ನು ಕಲೆಕ್ಟರಿಗೆ ತಿಳಿಸಬೇಕೆಂದಾಯಿತು

ಮುನ್ಸಿಪಲ್ ಆರೋಗ್ಯ ಶಾಖೆಯ ಕೆಳತರಗತಿಯ ನೌಕರ ಶುಚಿತ್ವದ ಶಿಬಂದಿಯವರ ಕೇಳಿಕೆಗಳ ವಿಮರ್ಶೆಗಾಗಿ ಏರ್ಪಟ್ಟಿದ್ದ ಕೌನ್ಸಿಲಿನಿಂದ ನಿಯೋಜಿತವಾದ ಆ ಸಮಿತಿಯ ಶಿಫಾರಸುಗಳನ್ನು ಸರಕಾರದ ಒಪ್ಪಿಗೆಯ ಶರ್ತದಲ್ಲಿ ಕೌನ್ಸಿಲು ಸ್ವೀಕರಿಸಿತು. ಆ ಶಿಫಾರಸುಗಳ ವಿವರ ಹೀಗಿದೆ. ಹೆಚ್ಚಿನ ಬೆಲೆ ಖದ್ದರಿನ ಬದಲಿಗೆ (ಅವರಿಗೆ ಧರಿಸಲು ಸಮನಸ್ತ್ರಗಳಿಗಾಗಿ) ಕೈಮಗ್ಗದ ಅಥವಾ ಮಿಲ್ ಬಟ್ಟೆಯನ್ನು ಉಪಯೋಗಿಸಲು ಸರಕಾರದಿಂದ ಅಪ್ಪಣೆ ಕೇಳುವುದು, ಈ ಸಿಬಂದಿಯವರಿಗೆ ತಿಂಗಳಿಗೆ ರೂ. ೩ ಹೆಚ್ಚು ಕೊಡಬೇಕು, ಹೆಂಗಸಿಗೆ ೨ ಸೀರೆ, ೨ ಕುಪ್ಪಸ, ಗಂಡಸಿಗೆ ೨ ಶರ್ಟ್, ೨ ನಿಕ್ಕರ್ – ಎಲ್ಲರಿಗೂ ಒಂದೊಂದು ಜತೆ ಪಾದರಕ್ಷೆ, ಮನೆಬಾಡಿಗೆ ತಿಂಗಳಿಗೆ ರೂ ೩ (ಇದು ಅವರಿಗೆ ವಸತಿಗಳನ್ನು ಒದಗಿಸುವವರೆಗೆ), ಲಾರಿ ಕೂಲಿಗಳಿಗೆ ೧ ಜತೆ ಕೆನ್ವಾಸ್ ರಬ್ಬರಿನ ಶೂಗಳು, ದಿನಕ್ಕೆ ಟಿ ಕೆಲಸದ ಕೂಲಿಗಳಿಗೆ ಒಂದು ಗೊಗಲ್ಸ್ ಕನ್ನಡಕ

ಮುನಿಸಿಪಲ್ ಕೌನ್ಸಿಲ್ ಮೀಟಿಂಗು ತಮ್ಮ ಕೆಲಸಗಳನ್ನು ತಿಂಗಳಿಗೆ ೨ನೇ ಮತ್ತು ಕೊನೆ ಶನಿವಾರ ನಡೆಸಬೇಕೆಂಬ ಒಪ್ಪಂದಕ್ಕೆ ವಿರೋಧವಾಗಿ ಕಳೆದ ಫೆಬ್ರುವರಿ ತಾ. ೨ನೇ ಬುಧವಾರ ಇಟ್ಟ ಮೀಟಿಂಗಿನ ವಿರುದ್ಧವಾಗಿ ೧೪ ಮಂದಿ ಕೌನ್ಸಿಲರರು ಸಹಿಹಾಕಿ ನಿಲ್ಲಿಸಿದ ಪ್ರತಿನಿಧ್ಯ ಪತ್ರವನ್ನು "ರಿಕಾರ್ಡ್" ಮಾಡಲಾಯಿತು.

ಮದ್ಯವಿಧಿಗಳ ಮೊಕದ್ದಮೆಗಳು

ಮರಕಡ ತ್ಯಾಂಪ. ಕೊಟ್ಟಾರಿ ವಶ ೧೦ ಗ್ಯಾಲನ್ ೨೦ ಡ್ರಾಂ ಕಬ್ಬಿನ ಬ್ಲೆಡ್ಡ ವಾಶ್ ಇತ್ತೆಂದು ರೂ. ೨೦೦ ಜುಲ್ಮಾನೆ, ಕದ್ರಿ ಕೆಥರಿನ್ ಪಿಂಟೊ ಬ್ಯಾ ವಶ ೬ ಗ್ಯಾಲನ್ ಕಬ್ಬಿನ ವಾಶ್ ಇತ್ತೆಂದು ೧೦೦ ರೂ ಜುಲ್ಮಾನೆ ಕಣ್ಣನ್ ಎಂಬಾತನ ವಶ ಶರಾಬು ಇತ್ತೆಂದು ರೂ. ೨೦೦, ಮುತ್ತಯ್ಯ ಪೂಜಾರಿ, ತಿಮ್ಮಪ್ಪ ಶೆಟ್ಟಿ ಇವರುಗಳ ವಶ ಶರಾಬು ಇತ್ತೆಂಬುದಕ್ಕೆ ರೂ ೬೫, ಕದ್ರಿ ಕ್ರಿಶ್ಚಿಯನ್ ರೇಗೊ ಬ್ಯಾಯ ವಶ ಶರಾಬು ಇತ್ತೆಂದು ರೂ ೧೦೦, ಜಾನ್ ಬ್ಯಾಪ್ಟಿಸ್ಟ್ ಮೆಂಡೋಸನ ಬಳಿ ಶರಾಬು ಇತ್ತೆಂದು ರೂ ೧೫೦, ಅಮಲುಪದಾರ್ಥ ನದ ಆರೋಪಕ್ಕಾಗಿ ಕುಂಬಳೆ ರಾಮನಿಗೆ ರೂ ೫೦, ಇಂತ್ರು ಸೋಜ, ಪೆದ್ರು ಸೋಜಾ ಇವರಿಗೆ ರೂ ೪೫,ಹೀಗೆ ಜುಲ್ಮಾನೆಗಳನ್ನು ನಮ್ಮ ಸ್ಪೇಶನರಿ ಮೆಜಿಸ್ಟ್ರೇಟರು ವಿಧಿಸಿದ್ದಾರೆ

ಸೋಶಲಿಸ್ಟರ ಸತ್ಯಾಗ್ರಹ

ಸೋಶಲಿಸ್ಟ್ ಪಕ್ಷವು ಬ್ಯಾರಿತದ ಮೇಲೆ ಹೊರಗಿನವರಿಂದಾಗುವ ಅಭಿಕ್ರಮಣ ಸಂದರ್ಭದಲ್ಲಿ ಸರಕಾರದೊಡನೆ ಸಂಪೂರ್ಣ ಸಹಕರಿಸುವುದೆಂದು ಈ ಪಕ್ಷದ ಒರ್ವ ದುರೀಣರು ಹೇಳುತ್ತಾರೆ ಮತ್ತೊಬ್ಬರು ಸದ್ಯದಲ್ಲೇ ಸೋಶಲಿಸ್ಟರು ಸತ್ಯಾಗ್ರಹ ಹೂಡುವ ಪ್ರಸಂಗವುಂಟಾಗಬಹುದೆಂದು ಸಾರಿದ್ದಾರೆ

ಕಡಿತ ಘಾಯ ಚರ್ಮ ಘಾತಗಳಿಗೆ

ಕುಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮಿನಿಂದ ಲೇಪಿಸಿರಿ ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನರ್ನಿರ್ಮಿಸುತ್ತದೆ ಊದುರಿಕೆ ನೋವನ್ನು ಕಡಿಮೆ ಮಾಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ಬರೇ 3 ಘಂಟೆಗಳ ಸಮಯದಲ್ಲಿ 57 ಮೈಲುಗಳ ಬಸ್ಸು ಪ್ರಯಾಣ

ಇದೇ ತಿಂಗಳ ತಾರೀಕು ೩ನೇ ಸೋಮವಾರ ಲಾಗ್ಯಾತು (೩—೧೦—'೪೯) ಮದ್ರಾಸು ಅತ್ಯಕಡೆಯಿಂದ ಮಂಗಳೂರಿಗೆ ಸಂಜೆ ಘಂಟೆ ೫-೧೫ಕ್ಕೆ ಬಂದು ತಲ್ಪುವ ಮೈಲು ಟ್ರೈನ್ ಪ್ರೇಸಂಜರರ ಮುಂದಿನ ಪ್ರಯಾಣಕ್ಕೆ ಕಾರ್ಕಳ ಮತ್ತು ಉಡುಪಿಗೆ ಪ್ರಯಾಣಿಸುವವರ ಅನುಕೂಲಕ್ಕೆ ಸರಿಯಾಗಿ ಸಂಜೆ ಘಂಟೆ ೬ಕ್ಕೆ ಮಂಗಳೂರು-ಕಾರ್ಕಳ-ಉಡುಪಿ ಎಕ್ಸ್‌ಪ್ರೆಸ್ (Express)ಎಂಬ ಸರ್ವೀಸನ್ನು ಜರೂರಿಂದ ಉಡುಪಿಗೆ ರಾತ್ರೆ ಘಂಟೆ ೯-೧೫ರೊಳಗೆ ತಲಪುವಂತೆ ಪ್ರಾರಂಭಿಸುತ್ತೇವೆ. ಈ ಸರ್ವೀಸಿನಲ್ಲಿ ಮಂಗಳೂರಿನಿಂದ ಸಹಾ ಕಾರ್ಕಳಕ್ಕೂ ಮತ್ತು ಉಡುಪಿಗೂ ಮಾತ್ರ ಪ್ರಯಾಣಿಸಬಹುದಲ್ಲದೆ ಅಲ್ಲಲ್ಲಿ ನಿಲ್ಲಿಸಿ ಪ್ಯಾಸೆಂಜರರನ್ನು ಹತ್ತಿಸುವ, ವ, ಇಳಿಸುವ ವಿಪ್ಪಾಡು ಇರುವುದಿಲ್ಲ.

				ರೂ. ಆ. ಪೈ
ಚಾರ್ಜು:—	ಮಂಗಳೂರು—ಕಾರ್ಕಳ	...	...	1—10—0
	ಮಂಗಳೂರು—ಉಡುಪಿ	...	...	2—14—0
	ಕಾರ್ಕಳ —ಉಡುಪಿ	...	...	1— 4—0

ವಿ. ಸೂಚನೆ:—ಜಿಲ್ಲೆಯ ಎಲ್ಲಾ ಸರ್ವೀಸುಗಳಿಗೂ ಒಂದು ದಿವಸ ಮುಂಚಿತವಾಗಿಯೂ ಜಿಲ್ಲೆಯ ಹೊರಗೆ ಕಡೂರು—ಮೈಸೂರು—ಹರಿಹರ ಇತ್ಯಾದಿ ಸ್ಥಳಗಳಿಗೆ ಹೋಗುವವರಿಗೆ ಎರಡು ದಿವಸಗಳ ಮುಂಚಿತವಾಗಿಯೂ ಟಿಕೇಟು ಆಗುವಂತೆ ರಿಜರ್ವೇಶನ್ ವಿಪ್ಪಾಡು ಕೂಡಾ ಉಂಟು.

ಮಂಗಳೂರು
14—10—49

ಜಿ.ಎಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿಸ್, ಮಂಗಳೂರು.

THE CANARA BANKING CORPORATION LTD

(Incorporated in India with limited liability)

Estd: 1906.

ANNOUNCEMENT

A Branch of the Bank will shortly be opened at PONAMPET (South Coorg)

ಬ್ಯಾಂಕಿನ ಒಂದು ಶಾಖೆಯು ಸದ್ಯದಲ್ಲಿಯೇ

ಪೊನ್ನಂಪೇಟೆ (ದಕ್ಷಿಣ ಕೊಡಗು)ಯಲ್ಲಿ ತೆರೆಯಲಾಗುವುದು

ವಿಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906

(Regd)

ಅಮೃತಾಂಜನ

ತಲೆನೋವನ್ನೆ, ಶಿರೋನೋವನ್ನೆ, ಉಳುಕು, ಉತ್ತಗೆ, ಭುಜ, ಹಲ್ಲುನೋವನ್ನೆಗಳಿಗೂ ಎದೆನೋವು, ಗಾಯುಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಪೊಡಿಮೆ ಮೊದಲಾದ ಎಲ್ಲಾ ರೋಗ ಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ವಿರಾಮಕಾಲದ ನಿಶ್ಚಿಂತ ಜೀವನಕ್ಕೆ — ಕುಟುಂಬದ ಸುಖ ಸೌಕರ್ಯಕ್ಕೆ

ಅತ್ಯಮೂಲ್ಯ ಅಕರ್ಷಕ ವಿಮಾಯೋಜನೆ:

ಮಾಸಿಕ ಕೇವಲ ರೂ. 55/-ರ ವಿನಿಯೋಗದಿಂದ ರೂ. 30,080/- ನಿಧಿ ನಿಮ್ಮದಾಗುವುದು

ಅಥವಾ ವರ್ಷಂಪ್ರತಿ ರೂ. 1,995ರಂತೆ ಕಾಯಂ ಆಗಿ ದೊರೆಯುವ ಅಚಿಂತ ವರ್ಷಾಸನ (ವರ್ಷದಲ್ಲಿ ನೀವು ತೆತ್ತ ಹಣ ರೂ. 660/ ಮಾತ್ರ.)

ಅಥವಾ ನಿಶ್ಚಿತ ಅವಧಿಯಲ್ಲಿ ರೂ. 17830/- ನಗದು

ಅಥವಾ ನಿರ್ದಿಷ್ಟ ಅವಧಿಯಲ್ಲಿ ರೂ. 22,500/- ಮತ್ತು ಮರಣಾನಂತರ ಇನ್ನೂಮ್ಮೆ ರೂ. 10,000/-

ಮೇಲೆ ನಮೂದಿಸಿದುದು ಮಾತ್ರವಲ್ಲದೆ ಕ್ಷುಲ್ಲಕ ಅವಧಿಯ ಮೊದಲು, ಯಾವ ಸಮಯದಲ್ಲೇ ಆಗಲಿ, ಮರಣ ಹೊಂದಿದರೆ, ವರ್ಷಕ್ಕೆ ರೂ. 1000/-ಕ್ಕೆ ರೂ. 30/-ರಂತೆ ಖಾತ್ರಿಯಾಗಿ ಬೋನಸ್ಸು ದೊರೆಯುವ ರೂ. 10,000/-ದ ಪೂರ್ಣ ವಿಮಾಕರ್ತ್ರಾ ಕವಚ ಸಹಾ.

ವಿಮಾ ಕ್ಷೇತ್ರದಲ್ಲಿ 40 ವರ್ಷಕ್ಕೆ ಮಿಕ್ಕಿ ದುಡಿದು ಉತ್ತಮ ಅನುಭವ ಗಳಿಸಿದ ನಿಮ್ಮ ವಿಮೆಯ ಉತ್ಕೃಷ್ಟ ಸಲಹೆಗಾರರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಚೀಫ್ ಏಜೆಂಟ್ಸ್:

ದಿ ಬೊಂಬ್ಬಾ ಲ್ಯೂಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಬೊಂಬಾಯಿ ಲ್ಯಾಫ್ ಬಿಲ್ಡಿಂಗ್, ಉಡುಪಿ (ದ. ಭಾರತ)

M/s. KOCHIKAR BROTHERS, LTD.,

Chief Agents:

The Bombay Life Assurance Co. Ltd.,

(Bombay Life Building Udipi S. India)

With Offices at:—Mangalore, Calicut, Coimbatore, Madura, Bangalore City, Trivandrum, Madras, Bombay.

ಕೆನರಾ ಬ್ಯಾಂಕು, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಸಗಾರಿಕೆ ಪರಿಮಿತಿಸಲ್ಪಟ್ಟಿ ಭಾರತದಲ್ಲಿ ಸಾಂಘೀಕರಿಸಿದ್ದು)

ನುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ; ೧,೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು ..... ನೂರಕ್ಕೆ ವರ್ಷಕ್ಕೆ ೨।
ಆರಿಂದ ೫ ತಿಂಗಳು ..... ,, ,, ೨॥
೬ರಿಂದ ೯ ತಿಂಗಳು ..... ,, ,, ೩॥

ರೂ. ೧,೦೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸವಿಪವರಿಯುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಮಂಗಳೂರು ಶಾಖೆಗಳು:

(1) ಬಂದರ ರೋಡ (2) ಡೊಂಗರಕೇರಿ

ಇತರ ಶಾಖೆಗಳು:—ಕಾರ್ಕಳ, ಬಂಳವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಪರಗೋಡು, ಬೊಂಬಾಯಿ, ಇತ್ಯಾದಿ, ಇತ್ಯಾದಿ.

CANARA BANK, LIMITED.

ESTD: 1906

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharta Galli, Hubli.

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಕುಂದಾ ನುರಿತ ಅನುಭವಜ್ಞರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಪ್ರಸವ ಪಿನ್ನ ವಿಷಧಿ. ಗರ್ಭಕೋಶದ ಕಾಯಿಲೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಶಮನಗೊಳಿಸುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮದರಾಸಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್‌ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತಪ್ಪ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮುಕರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 44] ತಾರೀಕು 18—8—1950 [ಸಂಚಿಕೆ 33]

ರಾಷ್ಟ್ರಾಧ್ಯಕ್ಷರ ಸ್ವಾತಂತ್ರ್ಯೋತ್ಸವ ಸಂದೇಶ

ಡಾ. ರಾಜೇಂದ್ರ ಪ್ರಸಾದರು ರಾಷ್ಟ್ರಕ್ಕೆ ನೀಡಿದ ಸಂದೇಶದ ಪೂರ್ತಿ ಪಾಠವಿಂತಿದೆ–

ನಮ್ಮ ಸ್ವಾತಂತ್ರದ ದ್ವಿತೀಯ ವಾರ್ಷಿಕೋತ್ಸವವನ್ನು ನಾವು ಆಚರಿಸುವಾಗ ಅದು ತನ್ನೊಡನೆ ತಂದ ಹೊಣೆಗಾರಿಕೆಗಳನ್ನು ಪೂರೈಸಬೇಕಾದರೆ ನಾವಿನ್ನೂ ಬಹಳ ದೂರ ಮಾರ್ಗ ಕ್ರಮಣ ಮಾಡಬೇಕಾಗಿದೆಯೆಂಬುದನ್ನು ನೆನಪಿಡಬೇಕು. ಇವನ್ನು ನೆರವೇರಿಸುವ ಹೊಣೆ ಸರಕಾರದ ಮೇಲೆ ಮಾತ್ರವಿರದೆ ಜನತೆಯು ತನ್ನ ಮೇಲೆಯೂ ಇದೆಯೆಂದು ಭಾವಿಸಿದರೆ ಇದನ್ನು ಸಾಧಿಸುವದು ಸುಲಭಸಾಧ್ಯ. ಅನೇಕ ಶತಮಾನಗಳಿಂದ ವಿದೇಶಿ ಸರಕಾರವು ನಮ್ಮಲ್ಲಿದ್ದದ್ದರಿಂದ ಜನತೆ ಸರಕಾರಗಳಲ್ಲಿ ಅಂತರವು ಬಹಳಿತ್ತು. ಆದ್ದರಿಂದ ಸರಕಾರವೆಂದರೆ ನಾವು ಸಹಿಸಬೇಕಾದ ಕಷ್ಟವೆಂದು ಭಾವಿಸಿದ್ದೆವೆಯೇ ಹೊರತು ಅದಕ್ಕೆ ಬೆಂಬಲ ಕೊಡಬೇಕೆಂದು ಭಾವಿಸಲಿಲ್ಲ. ಈ ಭಾವನೆಯು ಇನ್ನೂ ಕೆಲ ಭಾಗಗಳಲ್ಲಿ ಉಳಿದುಕೊಂಡಿದೆ. ನಾವು ಬೆಗಡಿ ಹೊಂದಬೇಕಾದರೆ ಈ ಭಾವನೆ ಬದಲಾಗಬೇಕು ಇಂದು ಸರಕಾರವು ರಾಷ್ಟ್ರೀಯವಿದ್ದು ರಾಷ್ಟ್ರಕ್ಕಾಗಿ ಇದೆ. ಇವೆರಡರಲ್ಲಿ ಬೇದವನ್ನು ಕಲ್ಪಿಸುತ್ತಿದ್ದ ನಮ್ಮ ಮನೋ ಭಾವವು ಕೂಡಲೇ ಅಳಿಯಬೇಕು. ಜನತೆಯು ತಾನೇ ಸ್ಥಾಪಿಸಿದ ಪ್ರಜಾತ್ಮಭುತ್ವ ಗಣರಾಜ್ಯದ ಬಗ್ಗೆ ಹೆಮ್ಮೆ ತಾಳಬೇಕಲ್ಲವೆ ಭಾರತದ ಹಿತಸಾಧನೆಗಾಗಿ ಯಾರೇ ಯೋಜಿಸುವ ಕಾರ್ಯಕ್ರಮಗಳಿಗೆ ತೊಡರೆಯೊಡ್ಡುವ ಕೃತ್ಯವನ್ನು ದ್ರೋಹವೆಂದು ಬಗೆಯಬೇಕು. ಫ್ರಾಢ ಮತದಾನ ಪದ್ಧತಿಯು ಮೂಲಕ ಸರಕಾರದ ಆಡಳಿತ ಧೋರಣೆ ಮತ್ತು ಅದರ ಭವಿಷ್ಯವನ್ನು ರೂಪಿಸುವದರಲ್ಲಿ ಸಮಾನಾವಕಾಶಗಳನ್ನು ಕಲ್ಪಿಸುವ ಘಟನೆಯಿರಲು ಎಂತಹ ಸಂಘರ್ಷಗಳನ್ನೂ ಘಟನಾತ್ಮಕ ಪದ್ಧತಿಯಿಂದ ನಿವಾರಿಸಿಕೊಳ್ಳುವದು ಪ್ರತಿಯೊಬ್ಬರಿಗೂ ಸಾಧ್ಯವಿದೆ. ಈ ಸೌಕರ್ಯದ ಲಾಭವನ್ನು ಪ್ರತಿಯೊಬ್ಬರು ಪಡೆಯಬೇಕು ಮತ್ತು ಗಣರಾಜ್ಯದ ಅಥವಾ ಅದರ ಪ್ರಜೆಗಳ ಯಾವದೇ ವಿಶ್ವಾಸ ಗುಂಪಿನ ವಿರುದ್ಧ ಕೈಕೊಳ್ಳಬಹುದಾದ ಶಕ್ತಿಪ್ರಯೋಗವನ್ನು ಖಂಡಿಸಿ ಜನತೆಯು ಅದನ್ನು ಪ್ರತಿಭಟಿಸಬೇಕು. ಸರಕಾರವು ದಕ್ಷತೆಯಿಂದ ಮತ್ತು ಸರಿಣಾಮಕಾರಕನಾಗಿ ಕೆಲಸ ಮಾಡಲನುವಾಗುವಂತೆ ರಾಷ್ಟ್ರವು ಅದಕ್ಕೆ ತನ್ನ ಸಂಪೂರ್ಣ ಬೆಂಬಲಸೀಡಬೇಕು. ಸರಕಾರಕ್ಕಾಗಿ ತಾವು ಮಾಡಬೇಕಾದ ಕರ್ತವ್ಯವನ್ನರಿತುಕೊಂಡು ಅನಂದದಿಂದ ಅದನ್ನು ನೆರವೇರಿಸುವನಾಗ ನಾಗರಿಕರ ಸಕ್ರಿಯ ಸದಾವನೆಯು ಸರಕಾರಕ್ಕೆ ಬೇಕಾಗಿದೆ.

ಇಂದು ನಾವು ಮಹತ್ವಕೊಡಬೇಕಾದ ಇನ್ನೊಂದು ವಿಷಯವೆಂದರೆ ಸತ್ಯ ಪಥಕ್ಕೆ ಗಟ್ಟಿಯಾಗಿ ಅಂಟಿಕೊಂಡು ನೈತಿಕ ಪ್ರಮಾಣಗಳನ್ವಯ ನಡೆದರೇ ನಮ್ಮ ರಾಷ್ಟ್ರವು ಪ್ರಗತಿಹೊಂದಬಲ್ಲದು. ಕೀಳು ಸ್ವಾರ್ಥ ಸಾಧಕ ತನವು ನಮ್ಮ ಸಮಾಜದಲ್ಲಿಯ ಅನೇಕ ಅನಿಷ್ಟಗಳಿಗೆ ಕಾರಣವಾಗಿದ್ದು ಅದು ವಿಫ ವಿಧರೂಪಗಳಲ್ಲಿ ವ್ಯಕ್ತನಾಗುತ್ತದೆ. ಅದನ್ನು ನಾವು ವಿರೋಧಿಸಿ ಹೊಡೆದೋಡಿಸಿ ಉತ್ತಮ ಚಾರಿತ್ರ್ಯನಿಷ್ಟವನ್ನು ಸ್ಥಾಪಿಸಿ ಅವುಗಳನ್ನು ಪಾಲಿಸಿಕೊಂಡು ಹೋಗಬೇಕಾಗಿದೆ. ಸುಲಭವಾಗಿ ಗುರು ತಿಸಲಾರದಂಥ ಸುಲಿಗೆಯ ಸ್ವರೂಪದಲ್ಲಿಯೇ ಅದು ವ್ಯಕ್ತವಾಗಲಿ, ಇಲ್ಲವೇ ಕಳ್ಳ ನೇಟೆ, ಲಂಚಗುಳಿತನ, ಜಾತೀಯ ಅಥವಾ ಪ್ರಾಂತೀಯ ಮಾತ್ಸರ್ಯ ಮೊದಲಾದ ರೂಪದಲ್ಲಿಯೇ ವ್ಯಕ್ತವಾಗಲಿ ಅದು ಕ್ಷುಲ್ಲಕ ಸ್ವಾರ್ಥಸಾಧಕತೆಯೆಂಬದನ್ನು ಗುರುತಿಸಿ ಅದನ್ನು ನಿವಾರಿಸಬೇಕು. ಉಜ್ವಲ ಸಂಸ್ಕೃತಿ ಪರಂಪರೆಯುಳ್ಳವರೂ ಅವಾರ್ಯನೈತಿಕ ಮತ್ತು ಆಧ್ಯಾತ್ಮಿಕ ಶಕ್ತಿಯುಳ್ಳವರೂ ಆದ ನಮ್ಮ ಜನರು ಈ ವೈರಿಯನ್ನೂ ಸುಲಭದಲ್ಲಿ ಗೆದ್ದು ಎಲ್ಲರ ಅಭಿಮಾನಾಸ್ಪದವಾದ ಭಾರತವನ್ನು ಕಟ್ಟುವರೆಂಬದರಲ್ಲಿ ನನಗೆ ಸಂಶಯವಿಲ್ಲ.

ಸ್ವದೇಶವಾರ್ತಾಸಾರ

ಈಶಾನ್ಯ ಭಾರತದಲ್ಲಿ ಭೂಕಂಪ

ಕಳೆದ ತಾ. ೧೬ರಂದು ಸಾಯಂಕಾಲ ಈಶಾನ್ಯ ಭಾರತದಲ್ಲಿ ಸಂಭವಿಸಿದ ಭೂಕಂಪವು ೧೫೩ಳರ ಆಸಾಮ ಭೂಕಂಪಕ್ಕೆ ಹೋಲುವದೆಂದು ಪುಣೆಯ ವೇಧಶಾಲೆಯಲ್ಲಿಯ ಕಾಗದಪತ್ರಗಳಿಂದ ತಿಳಿಯುತ್ತದೆ. ೧೮೯೭ರಲ್ಲಿ ೧೦ಲಕ್ಷ ಚೌರಸಮೈಲು ಪ್ರದೇಶದಲ್ಲಿ ಭೂಕಂಪವಾಗಿತ್ತು.

ಪುಣೆಯು ಭೂಕಂಪದ ಸ್ಥಳದಿಂದ ಮೊರವಿದ್ದರೂ ಇಲ್ಲಿಯ ಲೇಖನ ಶಾಲೆಯ ಯಂತ್ರವು ಭೂಕಂಪದ ಪ್ರಾಸ್ಥಾಪಕ ಘಟ್ಟವನ್ನು ಗುರುತಿಸಿ ಕೂಡಲೆ ಕೆಲಸ ಮಾಡಲಾರದೆ ನಿಂತುಹೋಯಿತು.

ಆಸಾಮದ ಡಿಬ್ರುಗಡದಲ್ಲಿ ಭೂಕಂಪದ ಪರಿಣಾಮವಾಗಿ ಒಂದು ಮನೆಯು ಬಿದ್ದು ಒಬ್ಬನು ಸತ್ತನಲ್ಲದೆ ೨೦ ಜನರು ಗಾಯಗೊಂಡರು. ಇಲ್ಲಿ ಮೊದಲನೆ ಸಂಜೆ ೭–೪೫ಕ್ಕೆ ಭೂಕಂಪವಾಗಿ ೫ ನಿಮಿಷಗಳ ವರೆಗೆ ಭೂಮಿಯು ನಡುಗಿತು. ಇಂದು ಮುಂಜಾನೆ ೧೦ ಗಂಟೆಯ ವರೆಗೆ ಆಗಾಗ್ಗೆ ಭೂಮಿಯು ನಡುಗುತ್ತಿತ್ತು.

ನಿನ್ನೆಯ ಭೂಕಂಪದಿಂದ ಗೌಹಾತಿ ಮತ್ತು ಶಿಲಾಂಗಗಳಲ್ಲಿ ಕಟ್ಟಾಗಿದ್ದ ಕೆಂತಿ ಸಂಪರ್ಕವನ್ನು ಇಂದು ಸರಿಗೊಳಿಸಲಾಗಿಲ್ಲ. ಶಿಲಾಂಗದಲ್ಲಿ ಆರು ಸಲ ಭೂಮಿಯು ನಡುಗಿತು. ಜನತೆಯಲ್ಲಿ ಕೂಡಲೆ ಹಾಹಾಕಾರವೆದ್ದಿತು. ಮಳೆಯು ಬೀಳುತ್ತಿದ್ದರೂ ಅನೇಕರು ಮನೆ ಬಿಟ್ಟು ಹೊರಬಂದು ಬಯಲಿನಲ್ಲಿ ಕುಳಿತು ಕೊಂಡಿದ್ದರು. ಇಂದು ಮಧ್ಯಾಹ್ನದ ವರೆಗೂ ಮಳೆ ಬಿಟ್ಟಿಲ್ಲ.

ಗೌಹಾತಿಯಲ್ಲಿ ಕೆಲ ಮನೆಗಳ ಗೋಡೆಗಳು ಬಿರುಕು ಬಿಟ್ಟಿವೆ. ಆದರೆ ವಿಶೇಷ ಹಾನಿಯಾದ ವರದಿಯಾಗಿಲ್ಲ. ಇಲ್ಲಿ ಭೂಮಿಯು ಐದು ಸಲ ನಡುಗಿತು. ಮೂರು ಸಲವಂತೂ ನಡುಕವು ಉಗ್ರಸ್ವರೂಪದ್ದಿತ್ತು. ಅನೇಕರು ಹೆದರಿ ಮನೆ ಬಿಟ್ಟು ಬಯಲಿಗೆ ಬಂದರು.

ನಿನ್ನೆ ರಾತ್ರಿಯೆಲ್ಲ ಗವರ್ನರರಾದ ಶ್ರೀ ಜಯರಾಮದಾಸ ದೌಲತರಾಮ, ತಾತ್ಕಾಲಿಕ ಮುಖ್ಯಮಂತ್ರಿ ಶ್ರೀ ವಿಷ್ಣುರಾಮ ಮೇಧಿ ಮತ್ತು ಉಪಮಂತ್ರಿಗಳು ಇನ್ನಿತರ ಸಾವಿರಾರು ಜನರೊಡನೆ ಕಣ್ಣಿಗೆಣ್ಣು ಹಚ್ಚದೆ ಕುಳಿತಿದ್ದರು. ಪಿ. ಗೋಪಿನಾಥ ದಿ. ಬಾರ್ಡಲೋಯರ ಶ್ರಾದ್ಧಕ್ಕಾಗಿ ಶ್ರೀ ದೌಲತರಾಮ ಮತ್ತು ಶ್ರೀ ಮೇಧಿಯವರು ಶಿಲಾಂಗದಿಂದ ನಿನ್ನೆ ಗೌಹಾತಿಗೆ ಬಂದಿದ್ದರು.

ಆಸಾಮದ ಉತ್ತರ ಬಾಗದಲ್ಲಿ ಭೂಕಂಪದಿಂದ ಹೆಚ್ಚು ಹಾನಿಯಾಗಿರಬಹುದಾಗಿದ್ದು ತಂತಿ ಟೆಲಿಫೋನ ಸಂಪರ್ಕ ಕಟ್ಟಾಗಿರುವದರಿಂದ ಅಲ್ಲಿಂದ ಸುದ್ದಿಗಳೇ ಬಂದಿರುವದಿಲ್ಲ.

ಕೋಪಿನಂಥ ಗರ್ಜನೆ

ಕಳೆದ ತಾ. ೧೬ರಂದು ಭೂಕಂಪವು ಪೂರ್ವ ತಿಬೇತಿನ ಸಮೀಪದಲ್ಲಿ ಜರುಗಿದೆಂದೂ ಅಲ್ಲಿಂದ ೧೭೦೦ ಮೈಲು ದೂರದ ವರೆಗೆ ಅದು ಹರಡಿತೆಂದೂ ಇಲ್ಲಿಯ ವೇಧ ಶಾಲೆ ಶಾಖೆಯ ನಿರ್ದೇಶಕರಾದ ಶ್ರೀ ಎಸ್. ಕೆ. ಬ್ಯಾನರ್ಜಿಯವರು ತಿಳಿಸಿದರು. ಆಸಾಮದ ತೇಜಪುರದಲ್ಲಿ ಕೆಲವರಿಗೆ ಸ್ವಲ್ಪ ಗಾಯವಾಗಿದೆಂದು ವರದಿಯಾಗಿದೆ.

ತೇಜಪುರದಲ್ಲಿ ನಿನ್ನೆ ರಾತ್ರಿ ಭೂಕಂಪವಾದ ಕೆಲ ನಿಮಿಷಗಳಲ್ಲಿಯೇ ಈಶಾನ್ಯದಿಕ್ಕಿನಿಂದ ತೋಪಿನ ಗರ್ಜನೆಯನ್ನು ಹೋಲುವ ಶಬ್ದವು ಅರುಸಲ ಅಲ್ಲಿಯ ಜನತೆಗೆ ಕೇಳಿಸಿತು.

ಶಿಲಾಂಗದಲ್ಲಿ ಇಂದು ಮುಂಜಾನೆ ೬ ಮತ್ತು ಮಧ್ಯಾಹ್ನ ೧೫–೧೫ಕ್ಕೆ ಹೀಗೆ ಎರಡು ಸಲ ಪುನಃ ಭೂಕಂಪನವಾಯಿತು.

ಭೂಕಂಪದಿಂದ ಅನೇಕ ಮನೆಗಳು ಬಿದ್ದಿದ್ದು ಪ್ರಾಣಹಾನಿಯೇನೂ ಆಗಿಲ್ಲೆಂದು ಗುಡ್ಡಗಾಡು ಜಿಲ್ಲೆಗಳಿಂದ ವಾರ್ತೆ ಬಂದಿದೆ.

ಗೋಲಸಾರಾ ಜಿಲ್ಲೆಯ ಧುಬ್ರಿಯಲ್ಲಿ ನಾಲ್ಕು ಸಲ ಭೂಕಂಪವಾಯಿತು.

೨೦೦೦ ಮನೆಗಳು ಬಿದ್ದವು

ಕಳೆದ ತಾ. ೧೭ರಂದು ದಿಬ್ರುಗಡ, ಉತ್ತರ ಲಕ್ಷ್ಮಿಪುರ, ಜೋರಹಾಟ ಮತ್ತು ಟಿನಸೂಕಿಯಾ ಎಂಬ ಆಸಾಮದ ನಗರಗಳಲ್ಲಿ ಭೂಕಂಪದ ಪರಿಣಾಮವಾಗಿ ನಾಲ್ವರು ಸತ್ತರು. ಮನೆಗಳು ಬಿದ್ದು ಅನೇಕರು ಗಾಯಗೊಂಡಿರುವರು. ಆಸಾಮ ಒಂದರಲ್ಲಿಯೇ ೨೦೦೦ಕ್ಕೆ ಮೇಲ್ಪಟ್ಟು ಮನೆಗಳು, ಮಸೀದಿಗಳು, ಚರ್ಚುಗಳು ಸಂಪೂರ್ಣ ನಾಶವಾಗಿದ್ದು ಇನ್ನೂ ನೂರಾರು ಕಟ್ಟಡಗಳಿಗೆ ಧಕ್ಕೆ ತಗಲಿದೆ.

ಗೌಹಾತಿಯಿಂದ ೨೪೦ ಮೈಲುಗಳಲ್ಲಿ

ರುವಷ್ಟರ ಲಕ್ಷವೇರ ಎಂಬ ೫೦೦೦ ಜನಸಂಖ್ಯೆಯ ಗ್ರಾಮಕ್ಕೆ ಬೆಳಿಗ್ಗೆ ಭಕ್ಷ್ಯ ತಗಲಿದೆ. ಆದರೆ ಒಟ್ಟಿನಲ್ಲಿ ಮೊತ್ತ ಸತ್ತವರದಿಯಾಗಿದೆ. ಮನೆಗಳು ಬಿದ್ದು ಬಿದ್ದಿದ್ದು ರಸ್ತೆಗಳು ಕಟ್ಟಿರುವುದೆಂದು ವಾಯುರಿಸ್ ಸುದ್ದಿ ಬಂದಿದೆ.

ಮುಜಫರ್ ಪುರದಲ್ಲಿ (ಬಿಹಾರ) ೨೦ ಸೆಕೆಂಡುಗಳ ವರೆಗೆ ನಿನ್ನೆ ರಾತ್ರಿ ಭೂಕಂಪ ವಾಯಿತು. ಒಂದು ಮೋಟ್ರ್‌ಕಾರು ದೀಪದ ಕಂಬಕ್ಕೆ ಢಿಕ್ಕಿ ಹೊಡೆಯಿತು. ದ ಭೂಕಂಪದಲ್ಲಿಯೂ ಭೂಕಂಪವಾದ ವರದಿ ಬಂದಿದೆ.

ಲಾಯಕ್ ಅಲಿಯ ಬಂಧನ ಅಕ್ರಮವೆಂದು ಹೈಕೋರ್ಟು ತೀರ್ಪು

ಹೈದರಾಬಾದ ಸರಕಾರದ ಸಾರ್ವಜನಿಕ ರಕ್ಷಣಾ ಕಾನೂನಿನ, ಸಾರ್ವಜನಿಕ ಹಿತದ ಕಾನೂನಿನ ಮತ್ತು ಸಾರ್ವಜನಿಕ ಹಿತರಕ್ಷಣೆಯ ಕಾನೂನನ್ವಯ ಗಣ್ಯರಾದ ಜನವರಿ ೨೬ರ ಮೇಲೆಯೂ ಹೈದರಾಬಾದಿನ ಮಾಜಿ ಮುಖ್ಯ ಮಂತ್ರಿ ಲಾಯಕ್‌ಅಲಿಯನ್ನು ಬಂದನದಲ್ಲಿಟ್ಟಿದ್ದು ಭಾರತ ರಾಜ್ಯಾಂಗಕ್ಕೆ ವಿರೋಧವಾಗಿರುವುದರಿಂದ ಲಾಯಕ್ ಅಲಿಯ ಬಂಧನವು ಅಕ್ರಮವೆಂದು ಹೈದರಾಬಾದಿನ ಹೈಕೋರ್ಟು ತೀರ್ಪು ಕೊಟ್ಟಿದೆ.

ಲಾಯಕ್ ಅಲಿ ಪರಾರಿಯ ಮೊಕದ್ದಮೆಯಲ್ಲಿ ಅಪಾದಿತರಾದ ೧೯ ಮಂದಿ ತಮ್ಮ ಮೇಲಿನ ಮೊಕದ್ದಮೆ ವಿರುದ್ಧ ಹೈಕೋರ್ಟಿನಲ್ಲಿ ಅರ್ಜಿ ಮಾಡಿಕೊಂಡಾಗ ಈ ತೀರ್ಪು ಕೊಡಲಾಯಿತು.

ಲಾಯಕ ಅಲಿಯವರು ತಪ್ಪಿಸುವುದಕ್ಕೆ ಸಹಾಯ ಮಾಡಿದವರು ಅಪರಾಧಿಗಳೆಲ್ಲವೆಂದು ಈ ಹೈಕೋರ್ಟು ತೀರ್ಪು ಕೊಟ್ಟಿತು.

ತುಫಾನ್ ಎಕ್ಸ್‌ಪ್ರೆಸ್ಸ್ ಅಪಘಾತ

೨೩ ಜನರ ಮರಣ

೨೦೦ಕ್ಕಿಂತಲೂ ಹೆಚ್ಚಿನವರಿಗೆ ಗಾಯಗಳು

ಬನಾರಸ್, ತಾ. ೧೫—ಬೊಗಲ್ ಸರಾಯಿಂದ ಪೂರ್ವಕ್ಕೆ ೨೦ ಮೈಲು ದೂರದಲ್ಲಿ ಹಾಗೂ ದುರ್ಗಾಟಿ ಮತ್ತು ಕರಮನಾಸಾ ಮಧ್ಯೆ ಓಡುತ್ತಿದ್ದಾಗ ಹಳಿ ತಪ್ಪಿ ಬಿದ್ದ ಒಂದು ಗೂಡ್ಸ್ ಗಾಡಿ ಢಿಕ್ಕಿ ಬಡಿದು ರೈಲು ಮಾರ್ಗದ ಬಳಿಯ ೨೦ ಮೈಲು ಆಳದ ಹೊಂಡಕ್ಕೆ ಬಿತ್ತು. ಡ್ರೈವರನು ಮರಣದಿಂದ ಪಾರಾಗಿರುವನು. ಅಪಘಾತದ ಸುದ್ದಿ ಕೇಳಿದ ಕೂಡಲೇ ಬನಾರಸ್‌ನಿಂದ ಜಿಲ್ಲಾ ಅಧಿಕಾರಿಗಳು ಅಲ್ಲಿಗೆ ದಾವಿಸಿದರು. ನೀರಿನಲ್ಲಿ ನಡೆದು ಪುಡಿಪುಡಿಯಾದ ಬಂಡಿಗಳ ಎಡೆಯಲ್ಲಿ ಸಿಕ್ಕಿ ಬಿದ್ದವರನ್ನು ರಕ್ಷಿಸಿದರು. ಆ ಮೇಲೆ ಪೋಲೀಸರೂ ವೈದ್ಯ ಇಲಾಖೆಯ ದಳದವರೂ ಅಪಘಾತ ನಡೆದಲ್ಲಿಗೆ ಧಾವಿಸಿ ನೆರವಾದರು.

ವಸ್ತುಗಳ ಬೆಲೆಗಳು ಏರದಂತೆ ಸರಕಾರದ ಕ್ರಮ

ವಸ್ತುಗಳ ಬೆಲೆ ಏರದಂತೆ ಪ್ರತಿಬಂಧಿಸುವ ಸಲುವಾಗಿ ಹಾಗೂ ಜೀವನಾವಶ್ಯಕ ವಸ್ತುಗಳ ಕಳ್ಳ ಸಂಗ್ರಹವನ್ನು ಹತ್ತಿಕ್ಕುವ ಬಗೆ ಸರಕಾರವು ಪಾರ್ಲಿಮೆಂಟಿನಲ್ಲಿ ಅವಶ್ಯಕ ಪೂರೈಕೆಗಳ ಕಾಯಿದೆಯಲ್ಲಿ ತಿದ್ದುಪಡಿಯನ್ನು ಮಾಡಿತು.

ಈ ಮಸೂದೆಯಲ್ಲಿ ಕಳ್ಳ ಸಂಗ್ರಹ ಮಾಡುವವರನ್ನು ಉಗ್ರದಂಡನೆಗೆ ಒಳಪಡಿಸುವ ಮತ್ತು ಅಂಥಾ ತಕರಾರುಗಳನ್ನು ತೀರ್ಪಿದಲ್ಲಿ ವ್ಯವಹರಿಸುವ ಕಲಮುಗಳಿವೆ. ಆಹಾರ ವಸ್ತುಗಳಲ್ಲದೆ ಬಟ್ಟೆ ಮೊದಲಾದ ಅವಶ್ಯಕ ವಸ್ತುಗಳು ಈ ಮಸೂದೆಯಲ್ಲಿ ಸೇರಿಸಿಕೊಳ್ಳಲಾಗಿದೆ.

ಸ್ವಾತಂತ್ರ್ಯ ವರ್ಧಂತಿಯ ಸಂಭ್ರಮದ ಉತ್ಸವ

ರಾಜಘಾಟಿನಲ್ಲಿಯ ಸಮಾರಂಭ ಮುಗಿಸಿಕೊಂಡ ನಂತರ ಮುಖ್ಯ ಮಂತ್ರಿ ಪಂಡಿತ ನೆಹರೂರವರು ಎಡೆಯ ತಾಸಿನ ಮೇಲೆ ಕೆಂಪು ವರ್ಣ ಕೋಟೆಗೆ ಧ್ವಜಾರೋಹಣ ಸಮಾರಂಭ ನಡೆದರು.

ಮುಖ್ಯ ಮಂತ್ರಿಗಳು ಆಗಮಿಸಿದ ಕೂಡಲೇ ಅವರನ್ನು ಸಂರಕ್ಷಣಾ ಮಂತ್ರಿಗಳಾದ ಸರದಾರ ಬಲದೇವಸಿಂಗರೂ ಸೈನ್ಯದ ಅಧಿಕಾರಿಗಳೂ ಸ್ವಾಗತಿಸಿದರು. ಭೂ-ಜಲ-ವಾಯು ಪಡೆಗಳಿಂದ ಆರಿಸಿದ ಸುಮಾರು ೨೦೦ ಸೈನ್ಯಕರು ಹಾಗೂ ಪೋಲೀಸರು ಗೌರವ ರಕ್ಷಣೆಯನ್ನರ್ಪಿಸಿದರು. ರಜಪುತಾನಾ ರಾಯಫಲಾ ಕೇಂದ್ರದ ಬ್ಯಾಂಡಿನವರು "ಜನಗಣಮನ" ರಾಷ್ಟ್ರಗೀತವನ್ನು ಬ್ಯಾಂಡಿನಲ್ಲಿ ಹಾಡಿದರು.

ಸೈನಿಕರ ಮತ್ತು ಪೋಲೀಸರ ಪರೇಡನ್ನು ನೋಡಿಕೊಂಡು ಮುಖ್ಯ ಮಂತ್ರಿಗಳು ಕೆಂಪು ಕೋಟೆಯ ಗೋಡೆಯ ಸಾವಟಿಗೆಗಳನ್ನೆ ಹತ್ತಿದರು. ಕೆಂಪು ಕೋಟೆಯ ಕೊತ್ತಳದ ಮೇಲೆ ಭವ್ಯವಾದ ಧ್ವಜಸ್ತಂಭವನ್ನು ಫಿಟ್ಟಿಸಲಾಗಿತ್ತು. ಅದರ ಎರಡೂ ಬದಿಗೆ ಭಾರತ ಸರಕಾರದ ಮಂತ್ರಿಗಳೂ ವಿದೇಶ ಸರಕಾರದ ರಾಯಭಾರಿ ಕಚೇರಿಯ ಸದಸ್ಯರೂ ನಿಲ್ಲಿಸಿದ ಸಂತಿದ್ದರು. ಮುಖ್ಯ ಮಂತ್ರಿಗಳು ಧ್ವಜವನ್ನು ಏರಿಸಿದ ಕೂಡಲೇ ಸೈನಿಕರು "ಜನಗಣಮನ"ರಾಷ್ಟ್ರಗೀತವನ್ನು ಹಾಡಿದರು. ತೋಪುಗಳ ಸಲಾಮು ಧ್ವಜವಂದನೆಯಾನಂತರ ಮುಖ್ಯ ಮಂತ್ರಿಗಳು ಭಾಷಣ ಮಾಡಿದರು.

ಈ ಸಮಾರಂಭವನ್ನು ನೋಡಲು ಜನರು ಕಿಕ್ಕಿರಿದು ನೆರೆದಿದ್ದರು. ಮನೆಗಳ ಮಾಳಿಗೆ, ಗಿಡಗಳು, ಎಲ್ಲಿ ನೋಡಿದಲ್ಲಿ ಜನರು ಹತ್ತಿ ಕುಳಿತಿದ್ದರು. ಜನರ ಭಾರದಿಂದ ಒಂದು ಗಿಡದಂಟೊಗೆ ಮುರಿದು ೧೦ ಜನರು ಬಿದ್ದು ಗಾಯಗೊಂಡರು. ಇವರಲ್ಲಿ ೮ ಜನರ ಎಲುವುಗಳು ಮುರಿದಿದ್ದು ಅವರನ್ನು ಆಸ್ಪತ್ರೆಯಲ್ಲಿ ಉಪಚರಿಸಲಾಗುತ್ತಿದೆ. ಇನ್ನುಳಿದ ಇಬ್ಬರಿಗೆ ಅಲ್ಪಸ್ವಲ್ಪ ಗಾಯಗಳಾಗಿದ್ದು ಉಪಚಾರ ಮಾಡಿ ಮನೆಗೆ ಕಳಿಸಲಾಯಿತು.

ಮುಖ್ಯ ಮಂತ್ರಿಗಳ ಹಸ್ತದಿಂದ ಕೆಂಪು ಕೋಟೆಯಲ್ಲಿ ಧ್ವಜಾರೋಹಣ ಸಮಾರಂಭವು ಜರುಗಿದ ನಂತರ ಹಳೇ ದಿಲ್ಲಿ ಮತ್ತು ಹೊಸದಿಲ್ಲಿಯಲ್ಲಿ ಅಲ್ಲಲ್ಲಿ ಸಾರ್ವಜನಿಕ ಧ್ವಜಾರೋಹಣ ಸಮಾರಂಭಗಳೂ ನೆರವೇರಿಸಲ್ಪಟ್ಟವು. ಭಾರತ ಸರಕಾರದ ಗಣಿ—ವಿದ್ಯುತ್ ಶಕ್ತಿ ಮತ್ತು ಲೋಕೋಪಯೋಗಿ ಖಾಖೆಯ ಮಂತ್ರಿಗಳಾದ ಶ್ರೀ ಎನ್. ವಿ. ಗಾಡಗೀಳರು ಸರಕಾರಿ ವಿದ್ಯಾರ್ಥಿ ಪಸಕಿ ಗೃಹದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು. ಜಗತ್ಪ್ರಸಿದ್ಧ ಶಾಂತಿ ನಿವಾಸಿಯಾದ ಹೊರೇಸ ಅಲೆಗ್ಸಾಂಡರರು ಸಾಯಂ. ೫. ೫. ೫ ಕ್ಕೆ ಧ್ವಜಾರೋಹಣ ನೆರವೇರಿಸಿ ಮಹಾತ್ಮಾ ಗಾಂಧೀಜಿಯವರ ತತ್ವಗಳಂತೆ ಶಾಂತಿಯುತವಾದ ಜಗತ್ಯವನ್ನು ಏರಿಸಿ ಭಾಷಣ ಮಾಡಿದರು.

ಪಂ. ನೆಹರೂರ ವಿನಂತಿ

ಸ್ವಾತಂತ್ರ್ಯವು ತನ್ನೊಡನೆ ತಂದ ಹೊಣೆಗಾರಿಕೆಯನ್ನು ಅರಿತುಕೊಂಡು ಪ್ರತಿಯೊಬ್ಬ ಹಿಂದೀಯನು ಅದಕ್ಕೆ ತಕ್ಕಂತೆ ವರ್ತಿಸಬೇಕೆಂದು ಭಾರತದ ಪ್ರಧಾನ ಮಂತ್ರಿಯಾದ ಪಂ. ಜವಾಹರಲಾಲ ನೆಹರೂರವರು ಕೆಂಪು ಕೋಟೆಯ ಎತ್ತರದ ಕೊತ್ತಳದ ಮೇಲೆ ನಿಂತು ಕೆಳಗೆ ನೆರೆದ ಪ್ರಚಂಡ ಜನ ಸಮರ್ಥನೆನ್ನು ದೃಷ್ಟಿಸಿ ಮಾತನಾಡುತ್ತ ಹೇಳಿದರು. ಸ್ವಾತಂತ್ರ್ಯದ ತೃತೀಯ ವಾರ್ಷಿಕೋತ್ಸವದ ನಿಮಿತ್ತ ಪಂ. ನೆಹರೂರವರು ಇದಕ್ಕೂ ಮೊದಲು ಅದೇ ಸ್ಥಳದಲ್ಲಿ ಧ್ವಜಾರೋಹಣ ಮಾಡಿದರು.

ಪಂ. ನೆಹರೂರವರು ತಮ್ಮ ಭಾಷಣ ಮುಂದುವರಿಸುತ್ತ "ಜನರು ಈ ಹೊಣೆಗಾರಿಕೆಯನ್ನು ಅರಿತುಕೊಳ್ಳದಿದ್ದರೆ ಅವರಿಗೆ ಸ್ವಾತಂತ್ರ್ಯದ ಅರ್ಥ ತಿಳಿಯಲಾರದು ಮತ್ತು ಅದಕ್ಕೆ ಬದ್ಧವಾಗುವ ಆಂತರಿಕ ಅಥವಾ ಬಾಹ್ಯ ಗಂಡಾಂತರಗಳಿಂದ ಅವನ್ನು ರಕ್ಷಿಸಲಾರರು. ದೇಶವನ್ನೆದುರಿಸುವ ಪ್ರಶ್ನೆಗಳನ್ನು ಬಿಡಿಸುವವರೆಲ್ಲ ಜನತೆಯು ತನ್ನ ಪಾತ್ರವನ್ನು ತಾನು ಮಹಿಸಬೇಕು ಅವೆಲ್ಲವುಗಳನ್ನೂ ಸರಕಾರವು ಏಕ್ಕಿಕವಾಗಿ ಬಿಡಿಸಬೇಕೆಂದು ಅಪೇಕ್ಷಿಸುವದು ತಪ್ಪು. ಜನತೆಯ ಸಕ್ರಿಯ ಸಹಾಯವಿಲ್ಲದೆ ಜಗತ್ಪ್ರಸಿದ್ಧ ಯಾವ ಸರಕಾರವೂ ಹಾಗೆ ಮಾಡಲು ಸಾಧ್ಯವಿಲ್ಲ. ನೀವು ಈ ಪ್ರಶ್ನೆಗಳನ್ನು ಧೈರ್ಯದಿಂದ ಎದುರಿಸಬೇಕು.

ಮುಂಬರುವ ವರುಷದಲ್ಲಿ ನಾವು ಈ ಎಲ್ಲಾ ಪ್ರಶ್ನೆಗಳನ್ನು ಒಳ್ಳೇದ್ದಕ್ಕಾಗಿ ಎದುರಿಸುವವು. ಅವುಗಳಿಗೆ ನಮ್ಮ ಸ್ವಾಗತವು ಇದೆ. ಅಂತ್ಯದಲ್ಲಿ ನಾವು ಅವುಗಳನ್ನು ನಾಶ ಮಾಡುವೆವು.




ಅದ್ಭುತವಾದ ಪೆಪ್ಸ್ ಮಾತ್ರೆಗಳು
PEPS
ಶ್ವಾಸನಾಳ ತೊಂದರೆ, ಕೆಮ್ಮು, ಶೀತ ಮತ್ತು ಶೀತಜ್ವರವನ್ನು ಗುಣಪಡಿಸುತ್ತವೆ
ಪೆಪ್ಸ್ ಮಾತ್ರೆಗಳನ್ನು ಹೀರಿರಿ-ಆಗ ಸುಖಕರವಾದ ಔಷಧೀಯ ಸತ್ವಗಳು ಶ್ವಾಸಕೋಶದ ಎಲ್ಲಾ ಕಡೆಗಳಿಗೂ ಪಸರಿಸಲ್ಪಡುವವು. ಈ ವಿಧಾನದಿಂದಲೇ ಪೆಪ್ಸ್ ಶೀಘ್ರದಲ್ಲಿ ಕೆಮ್ಮನ್ನು ನಿಲ್ಲಿಸುತ್ತದೆ. ಅಪಾಯಕಾರಕ ಅಣುಗಳನ್ನು ನಾಶಪಡಿಸುತ್ತವೆ. ಗಂಟಲು ಮತ್ತೆ ಎದೆ ನೋವುಗಳನ್ನು ಶಮನಿಸಿ ಎಲ್ಲಾ ಶ್ವಾಸನಾಳ ತೊಂದರೆಗಳನ್ನು ಜಯಿಸುತ್ತದೆ.
PEPS
ವಿಷಾಣುನಾಶಕ, ಎದೆ, ಗಂಟಲು ಮಾತ್ರೆಗಳು
ಎದೆ ಮತ್ತು ಶ್ವಾಸಕೋಶದ ತೊಂದರೆಗಳ ಅತ್ಯದ್ಭುತ ಗುಣಕಾರಿ.
ಏಜೆಂಟರು: ದಾದಾ ಎಂಡ್ ಸನ್, ಪಿ. ಟಿ. ಮದ್ರಾಸು.

ನಾವು ಕಳೆದ ಮೂರು ವರುಷಗಳಲ್ಲಿ ಅನೇಕ ಸಲ ಎಡವಿದ್ದೇವೆ, ಬಿದ್ದಿದ್ದೇವೆ. ಮತ್ತೆ ಎದ್ದು ಮುಂದೆ ಸಾಗಿದ್ದೇವೆ. ರಾಷ್ಟ್ರದ ಚರಿತ್ರೆಯಲ್ಲಿ ಯಶಾಪಯಶಗಳು ಸ್ವಾಭಾವಿಕ. ಆದರೆ ಕಷ್ಟಗಳಿಂದ ನಿರಾಶ್ರಿತರಾದರೆ ಮಾತ್ರ ಆ ರಾಷ್ಟ್ರದ ವಿನಾಶ ಕಟ್ಟಿಟ್ಟದ್ದು. ನೇತಾರನ್ನು ಧಾರ್ಷ್ಟ್ಯಗೊಳಿಸುವ ಹೊಡಿಕೆನ, ಕ್ಷುಲ್ಲಕ ಮನೋವೃತ್ತಿ, ಪಕ್ಷ ಪಂಗಡಗಳ ತಿಕ್ಕಾಟಗಳಿಗೆ ನಮ್ಮಲ್ಲಿ ಎಡೆ ಬೇಡ" ಎಂದು ಮುಂತಾಗಿ ಹೇಳಿದರು.

ವಂ. ನೆಹರುರವರು. ತಮ್ಮ ಹಿಂದಿನ ಪರಂಪರೆಯನ್ನುಲ್ಲಂಘಿಸಿ ಇಂದು ತಮ್ಮ ಭಾಷಣದ ಪ್ರಾರಂಭಕ್ಕೇ "ಜಯ್ ಹಿಂದ್" ಕೇಳುವದು ವಂ. ನೆಹರೂರ ರೂಢಿಯಾಗಿತ್ತು.

ಕೊರಿಯದ ಯುದ್ಧ

ತೇಗೂದ ಮೇಲೆ ಭೀಕರ ದಾಳಿ

ಕಮ್ಯುನಿಸ್ಟರು ಸ್ವಯಂಚಲಿತ ತೋಪುಗಳು ಹಾಗೂ ಟ್ಯಾಂಕುಗಳೊಂದಿಗೆ ದಕ್ಷಿಣ ಕೊರಿಯನ್ನರಕೇಂದ್ರವ್ಯೂಹವನ್ನು ಒಂದು ಮೈಲಿನಷ್ಟು ಭೇದಿಸಿ ದಕ್ಷಿಣ ಕೊರಿಯಾದಲ್ಲಿ ಅಮೇರಿಕೆಯ ಸಂರಕ್ಷಣ ಕೇಂದ್ರ ತೇಗೂದ ಮೇಲಿನ ಭೀಕರ ದಾಳಿಯನ್ನು ಪ್ರಾರಂಭಿಸಿರುವರು.

ವೇಗವಾನ-ಕಾಸ್ಯೂಹವು ಈಗ ಗಂಡಾಂತರದಲ್ಲಿದೆಯೆಂದು ಅನೇ ಸೈನ್ಯದ ಕೇಂದ್ರದಿಂದ ತಿಳಿದು ಬಂದಿದೆ. ಕಮ್ಯುನಿಸ್ಟರು ವೇಗವಾನವನ್ನು ಅಗಸ್ಟ ೧೫ಕ್ಕೆ ವಶಪಡಿಸಿಕೊಂಡಿರುವದಾಗಿ ಪಿಯಾಂಗ್ ಯಾಂಗ್ ಆಕಾಶವಾಣಿಯು ಬಿತ್ತರಿಸಿರುವೆದು.

ದಕ್ಷಿಣ ಕರಾವಳಿಯಿಂದ ೨೪೯ದೆಡೆದ ಸಹಾಯಕ್ಕೆ ಬಂದ ನೌಕಾ ಸೇನೆಯು ಎಷ್ಟೇರಭಸದಿಂದ ಕಾದಿದರೂ ಎರಡು ಸಲ ಹಿಮ್ಮೆಟ್ಟಬೇಕಾಯಿತು. ವಿಮಾನ ವಾಹಕದಲ್ಲಿದ್ದ ವಿಮಾನಗಳು ರಾಕೆಟ್ಟುಗಳ ದಾಳಿ ಮಾಡಿದವು.

ಕಮ್ಯುನಿಸ್ಟರು ಹೆಚ್ಚಿನ ಬಲದೊಂದಿಗೆ ಹಾಗೂ ಟ್ಯಾಂಕುಗಳೊಂದಿಗೆ ಈ ಭಾಗದ ಮೇಲೆ ಭೀಕರ ದಾಳಿ ಮಾಡಿರುವರು. ಇದಕ್ಕೂ ಪೂರ್ವದಲ್ಲಿ ಅಮೇರಿಕೆಯ ೨೪ನೆ ದಲ ಹಾಗೂ ನೌಕಾ ಸೇನೆಗಳು ನಾಕಟಾಂಗ ರಂಗದ ಪಶ್ಚಿಮ ಭಾಗದಲ್ಲಿ ಮಸಾನದಿಂದ ಉತ್ತರಕ್ಕೆ ೨೦ ಮೈಲುಗಳ ತೀವ್ರ ದಾಳಿ ಮಾಡಿರುವವು. ಅಮೇರಿಕನ್ನರ ಪ್ರತಿದಾಳಿಯು ಶತ್ರುಗಳ ಬಲವಾದ ವಿರೋಧವಿರುವದರಿಂದ ಹೆಚ್ಚು ಪ್ರಗತಿಗೊಂಡಿರುವದಿಲ್ಲ. ನೌಕಾ ಸೇನೆಯು ದಕ್ಷಿಣ ಕರಾವಳಿಯಿಂದ ಹಿಂದೆಗೆದು ಇತ್ತ ಅಮೇರಿಕನ್ನರ ಸಹಾಯಕ್ಕೆ ಬಂದಿರುವದು.

ಕಮ್ಯುನಿಸ್ಟರ ಸೈನ್ಯವು ೧,೮,೧೩,೧೫ನೆ ದಲಗಳಿಂದ ಯುಕ್ತವಾಗಿದ್ದು ವೇಗವಾನದ ಉತ್ತರಕ್ಕೆ ೨೦ಮೈಲುಗಳ ಮೇಲೆ ಇವರು ನಾಕಟಾಂಗ ನದಿಯನ್ನು ದಾಟಿದರೆಂದು ನಂಬಲಾಗಿದೆ.

ನಾಕಟಾಂಗ ನದಿಯ ರಂಗದಲ್ಲಿ ಕಮ್ಯುನಿಸ್ಟರ ಮೇಲೆ ಭಾರತ ವಿಮಾನಗಳು ಇಂದು ರಾಕೆಟ್ಟುಗಳ ಮಳೆಗರೆದವು.

ದಕ್ಷಿಣ ಕೊರಿಯಾದ ಮೊದಲನೆ ಪಲವ್ಯ ನಾಕಟಾಂಗ ನದಿಯ ರಂಗದಲ್ಲಿ ವೇಗವಾನ ಪ್ರದೇಶದಲ್ಲಿ ಇಂದು ಒಂದೂವರೆ ಮೈಲು ಭೂಮಿಯನ್ನು ನಾಶಪಡಿಸಿದೆ. ಮುನ್ನುಗ್ಗಿರುವದು.

ಪೂರ್ವ ಕರಾವಳಿಯಲ್ಲಿ ಕಮ್ಯುನಿಸ್ಟರು ಪೋಹಾಂಗ ಆಕ್ರಮಿಸಿದನಂತರ ವ್ಯತ್ಯೆಕಿಸಲ್ಪಟ್ಟಿದ್ದ ಎರಡು ದಕ್ಷಿಣ ಕೊರಿಯಾ ಪಡೆಗಳನ್ನು ಕಳೆದ ರಾತ್ರಿ ಯಾಂಗಡಾಕ ಹಾಗೂ ಪೋಹಾಂಗಗಳ ಮಧ್ಯದಲ್ಲಿಂದ ಸಮುದ್ರ ಮಾರ್ಗವಾಗಿ ಪಾರುಮಾಡಿಕೊಂಡು ಬರಲಾಗಿದೆ.. ಕಳೆದೊಂದು ವಾರದಿಂದ ಅವರಿಗೆ ಸಮುದ್ರ ಮತ್ತು ವಾಯುಮಾರ್ಗವಾಗಿ ಸಹಾಯ ನೀಡಲಾಗುತ್ತಿತ್ತು. ಪೋಹಾಂಗದ ಸೈರುಕ್ಷತೆಗೆ ಅಮೇರಿಕನ ಪಡೆಯ ಸಹಾಯದಿಂದ ದಕ್ಷಿಣ ಕೊರಿಯಾ ಸೈನ್ಯವು ಒಂದು ಮೈಲು ನುನ್ನುಗ್ಗಿದೆ. ಆದರೆ ಉತ್ತರ ಭಾಗದಲ್ಲಿ ದಕ್ಷಿಣ ಕೊರಿಯನ್ನರು ಮತ್ತೆ ಹಿಂದೆ ಸರಿದಿರುವರು.

ಮೊದಲನೆ ಅಶ್ವಬಲವು ೧ ಟ್ಯಾಂಕನ್ನು ನಾಶಗೊಳಿಸಿದ್ದು, ದಕ್ಷಿಣ ಕೊರಿಯನ್ನರು ಒಂದೂವರೆ ಮೈಲಿನ ಮುನ್ನಡೆಯಲ್ಲಿ ಮೂರು ಟ್ಯಾಂಕುಗಳನ್ನು ನಾಶಗೊಳಿಸಿದ್ದು ೧೫೦ ಸೈನಿಕರನ್ನು ಕೊಂದಿರುವರು.

ತೇಗೂದ ಸೈರುಕ್ಷದ ನಾಕಟಾಂಗ ನದಿತೀರ ಅಮೇರಿಕನ್ನರ ವ್ಯೂಹವನ್ನು ಸಿಸ್ಟೆ ಭೇದಿಸಿಕೊಂಡು ಬಂದ ೧೫೦೦ ಕಮ್ಯುನಿಸ್ಟರನ್ನು ಅಮೇರಿಕನ್ನರು ಎದುರಿಸಿರುವರು. ದಕ್ಷಿಣ ಕರಾವಳಿಯಲ್ಲಿದ್ದ ನೌಕಾ ಸೇನೆಯನ್ನು ಹಿಂತೆಗೆದುಕೊಂಡಿದ್ದರೂ ಅಮೇರಿಕೆಯ ೨೪ನೆಯ ಪಡೆಯು ಅಲ್ಲಿ ನಾಮನದಿಯ ವ್ಯೂಹವನ್ನು ಹಿಡಿದಿರುವದು.

ವಿಮಾನ ವಾಹಕದಲ್ಲಿಯ ವಿಮಾನಗಳು ಪೋಹಾಂಗದ ಮೇಲ್ಭಾಗದಲ್ಲಿಯ ಪೂರ್ವ ನಳಿಯಲ್ಲಿ ಉತ್ತರ ಕೊರಿಯಾ ಗಡಿಯವರೆಗೆ ಬಾಂಬದಾಳಿ ನಡಾಪಿದವು. ಬ್ರಿಟಿಶ ಯುದ್ಧ ಹಡಗವೊಂದು ಪಶ್ಚಿಮ ಕರಾವಳಿಯಲ್ಲಿ ಕುನಸಾನದಲ್ಲಿಯ ಕಾರಖಾನೆ ಕೆಯ್ಯು ಕೂಡಲೆ ನಿಲ್ಲುವದಲ್ಲದೆ ಅವುಗಳ ಮಟ್ಟವು ಕೂಡ ಕ್ರಮೇಣ ತಗ್ಗುವದೆಂದು ತಿಳಿಯುತ್ತದೆ.

ಈ ಸೂಚನೆಗಳು ಯುದ್ಧಕಾಲದ ಕಳ್ಳ ಸಂಗ್ರಹ, ಲಾಭಬಡಕತನ ವಿರುದ್ಧ ಹೊರಡಿಸಲ್ಪಟ್ಟ ಸುಗ್ರೀವಾಜ್ಞೆಗಳ ತಿರುಳನ್ನು ಒಳಗೊಂಡಿವೆಂದು ತಿಳಿಯುತ್ತದೆ. ಕೆಲವೊಂದು ಸರಕುಗಳ ಬೆಲೆಯನ್ನು ಗೊತ್ತುಪಡಿಸುವ, ಪ್ರತಿಯೊಂದು ಗಿರಾಕಿಗೆ ಪಾವತಿಯನ್ನು ಕೊಡಬೇಕೆಂದು ವ್ಯಾಪಾರಸ್ಥರಿಗೆ ಒತ್ತಾಯಮಾಡುವ, ಕೆಲವೊಂದು ಸರಕುಗಳ ಹಾಗು ನಿತ್ಯಪಯುಕ್ತ ವಸ್ತುಗಳ ಸಂಗ್ರಹದ ಮಿತಿಯನ್ನು ನಿರ್ಧಿಷ್ಟಪಡಿಸುವ ಅಧಿಕಾರವನ್ನು ಸರಕಾರವು ವಹಿಸುವದು.

ಮುಖ್ಯ ಮಂತ್ರಿಗಳೊಡನೆ ವಿಚಾರವಿನಿಮಯ ಮಾಡಿದ ನಂತರ ಈ ಸೂಚನೆಗಳೊಳಗೊಂಡು ಒಂದು ಸುಗ್ರೀವಾಜ್ಞೆಯು ಹೊರಡಿಸಲ್ಪಡುವದೆಂದು ನಿರೀಕ್ಷಿಸಲಾಗಿದೆ.

ಬೆಲೆಗಳ ಏರಿಕೆಯನ್ನು ತಡೆಗಟ್ಟುವಿಕೆ

ಕೇಂದ್ರದ ಸುಗ್ರೀವಾಜ್ಞೆ ಹೊರಡುವದು

ಕೇಂದ್ರ ಸರಕಾರವು ಈಗ ಅನೇಕ ಸೂಚನೆಗಳನ್ನು ಸವಿಶೀಲಿಸುತ್ತಲಿದ್ದು ಅವು ಕಾರ್ಯರೂಪದಲ್ಲಿ ಬಂದರೆ ಬೆಲೆಗಳ ಏರಿ

ಚರ್ಮ ವ್ಯಾಧಿಗಳಿಂದ ಶೀಘ್ರ ಗುಣಹೊಂದಲಿಕ್ಕೆ ತ್ವರೆಯ ಮುಲಾಮು

ವಿಷಹಾರಿ ಕುಟಿಕೂರಾ ಮುಲಾಮು ಶೀಘ್ರವಾಗಿ ಚರ್ಮ ಆರೋಗ್ಯದ ಪುನರ್ಸ್ಥಿತಿಸ್ಥಿ ಚಿಕ್ಕ ಪುಟ್ಟ ಎಲ್ಲಾ ಚರ್ಮ ತೊಂದರೆಗಳಚೇಷೆಯನ್ನು ಡಗಸುತ್ತದೆ. ಚರ್ಮ ಸ್ವಚ್ಛವಿರಿಸಿ ಗುಣಪಡಿಸುತ್ತದೆ

ಕಡಿತ, ಘಾತ, ಕುರುಗಳಿಗೆ

ಕುಟಿಕೂರಾ ಮುಲಾಮು
CUTICURA OINTMENT

ಬಸ್ಸು ಪ್ರಯಾಣಿಕರಿಗೆ ಸೂಚನೆ

ಇತ್ತೀಚೆಗೆ ಬಸ್ಸು ಟಿಕೇಟು ಮುಂದಾಗಿ ಪಡಕೊಂಡು ಪ್ರಯಾಣ ಬೆಳಸದೆ ಅದರ ಮೊಬಲಗು ರಿಫಂಡ್ ಕೇಳುವಂಥಾ ಪದ್ಧತಿ ದಿನೇ ದಿನೇ ಪ್ರಬಲವಾಗಿ—ಬಂದಿದೆ. ಕಾರಣ ಕೆಲವರು ಪ್ರಯಾಣದ ಅತ್ಯಾವಶ್ಯಕತೆ ಗಮನಿಸದೆ ಟಿಕೇಟು ಮೌಲ್ಯ ಪಾಸ್ಸು ದೊರೆಯುವುದಾಗಿ ಕೂಡಾ ತಿಳುವಳಿಕೆಯಿಂದ ಟಿಕೇಟು ಪಡಕೊಂಡು ಆ ಟಿಕೇಟಿನಲ್ಲಿ ನಮೂದಿಸಿರುವ ಸಮಯವನ್ನು ಲಕ್ಷಿಸದೆ, ಸಮಯ ತಪ್ಪಿಸಿ ಬರುವುದು. ಇದರಿಂದ ಸೀಟುಗಳು ಖಾಲಿಯಾಗಿ ಇರಗೊಡಿಸಿ ಸರ್ವಿಸು ಬಿಡಲ್ಪಟ್ಟು ಅತೀ ಅಗತ್ಯದಿಂದ ಪ್ರಯಾಣಿಸುವವರಿಗೆ ಕೂಡಾ ತೊಂದ್ರೆಗೊಳಿಸುವಂತಾಗುತ್ತಾ ಬರುವುದಲ್ಲದೆ ಸೀಟು ಇರುತ್ತಾ ಟಿಕೇಟು ಕೊಡುವುದಿಲ್ಲವಾಗಿ ಇತ್ಯಾದಿ ಆರೋಪ ಹೊರಿಸಿ ಬರುವ ಕಂಪ್ಲೇಂಟಿಗೂ ಆಸ್ಪದ ಕೊಡುತ್ತಾರೆ. ಬಸ್ಸು ಟಿಕೇಟು, ಪ್ರಯಾಣಿಸುವವರೇ ಪಡೆದು ಅವರೇ ಉಪಯೋಗಿಸ ಬೇಕಾಗಿ ತಿವ್ಯಾ ಇತರ ಯಾರಿಗೂ ವಿಕ್ರಯಿಸುವುದಾಗಲೀ ಪ್ರಯಾಣ ಬೆಳಸುವರೇ ಕೊಡುವುದಾಗಲೀ ಕೊಡದಾಗಿ ಸರಕಾರದ ಕಠಿಣ ಕಾನೂನು ಕೂಡಾ ಇದ್ದರೂ ಪ್ಯಾಸೆಂಜರರು ಇದಕ್ಕೇ ವಿರುದ್ಧವಾಗಿ ನಡೆಯುವುದು ನಮ್ಮ ತಿಳುವಳಿಕೆಗೆ ಬಂದಿದೆ. ಇನ್ನು ಮುಂದೆ ಅದಷ್ಟು ತಮ್ಮ ಪ್ರಯಾಣದ ಅವಶ್ಯಾವಶ್ಯಕತೆ ತಿಳಕೊಂಡು ಟಿಕೇಟು ಮುಂದಾಗಿ ಪಡಕೊಂಡು ತಪ್ಪದೆ ಪ್ರಯಾಣ ಮಾಡಬೇಕಾಗಿಯೂ, ಈ ಮೇಲಿನ ಅನ್ಯವಸ್ಥೆಗೆ ಎಡೆಕೊಡಬಾರದಾಗಿ ನಾವು ನಿನಂತಿಸುವುದಲ್ಲದೆ ಪ್ರಯಾಣ ಬೆಳಸದೆ ತರುವ ಟಿಕೇಟುಗಳ ಮೊಬಲಗನ್ನು ವಾಪ್ಸು ಕೊಡುವ ಕ್ರಮವಿಲ್ಲವೆಂಬುದನ್ನು ಮುಂದ್ದಾಗಿ ತಿಳಿಸಲು ಇಚ್ಛಿಸುತ್ತೇವೆ.

ಜ್ಯೊಂಟ್ ಮೆನೇಜರ್ಸ್,

ಮಂಗಳೂರು 10-4-49

ದಿ ಕೆಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ, ಮಂಗಳೂರು.
ದಿ ಜ್ಯೊಂಟ್ ಬುಕ್ಕಿಂಗ್ ಆಫೀಸ್, ಕೊಡಿಯಾಲಬೈಲು.

THE CANARA BANKING CORPORATION LTD.
Estd: 1906.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಹೆಡ್ ಆಫೀಸು—ಉಡುಪಿ

ಮೂಲ ಧನ:

ಅಧಿಕೃತ	ರೂ. 25,00,000
ಚಂದಾ ಅರ್ಪಿಸಿದ್ದು ಮತ್ತು ವಸೂಲಾದ್ದು	ರೂ. 20,00,000
ಕ್ಷೇಮ ನಿಧಿಗಳು	ರೂ. 10,21,747
ಒಟ್ಟು ಚಲಾವಣೆ ಭಂಡವಾಳ	ರೂ. 303,02,976

ಗಿರಾಕಿಗಳ ತೃಪ್ತಿಯೇ ನಮ್ಮ ಗುರಿ!
ಸಕಲ ತರದ ಬ್ಯಾಂಕಿಂಗ್ ಮಹಿವಾಟುಗಳನ್ನು ಕೈಕೊಳ್ಳಲಾಗುವುದು

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ' ಹೆಲ್ಲುವೇದನೆಗಳಿಗೂ ಎದನೋವು, ಗಾಯಗಳು' ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ' ಪಕ್ಷವಾತ, ನೊಡಿಮೆ ಮೊದಲಾದ ಎಲ್ಲಾ ರೋಗ ಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬ್ಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ವಿರಾಮಕಾಲದ ನಿಶ್ಚಿಂತ ಜೀವನಕ್ಕೆ—ಕುಟುಂಬದ ಸುಖ ಸೌಕರ್ಯಕ್ಕೆ
ಅತ್ಯಮೂಲ್ಯ ಆಕರ್ಷಕ ವಿಮಾಯೋಜನೆ:
ಮಾಸವಹಿ ಕೇವಲ ರೂ. 55/-ರ ವಿನಿಯೋಗದಿಂದ ರೂ. 30,080/- ನಿಧಿ ನಿಮ್ಮದಾಗುವುದು
ಅಥವಾ ವರ್ಷಂಪ್ರತಿ ರೂ. 1,995ರಂತೆ ಕಾಯಂ ಫಲ-ದೊರೆಯುವ ಆಜೀವ ವರ್ಷಾಸನ (ವರ್ಷದಲ್ಲಿ ನೀವು ತೆತ್ತ ಹಣ ರೂ. 660/ ಮಾತ್ರ)
ಅಥವಾ ನಿಶ್ಚಿತ ಅವಧಿಯಲ್ಲಿ ರೂ. 17830/- ನಗದು
ಅಥವಾ ನಿರ್ದಿಷ್ಟ ಅವಧಿಯಲ್ಲಿ ರೂ. 22,600/- ಮತ್ತು ಮರಣಾನಂತರ ಇನ್ನೂ ಮೆ ರೂ. 10,000/-
ಮೇಲೆ ನಮೂದಿಸಿದುದು ಮಾತ್ರವಲ್ಲದೆ ಕ್ಲುಪ್ತ ಅವಧಿಯ ಮೊದಲು, ಯಾವ ಸಮಯದಲ್ಲೇ ಆಗಲಿ, ಮರಣ ಹೊಂದಿದರೆ, ವರ್ಷಕ್ಕೆ ರೂ. 1000/-ಕ್ಕೆ ರೂ. 30/-ರಂತೆ ಖಾತ್ರಿಯಾಗಿ ಬೋನಸ್ಸು ದೊರೆಯುವ ರೂ. 10,000/-ದ ಪೂರ್ಣ ವಿಮಾರಕ್ಷಾ ಕವಚ ಸಹಾ.
ವಿಮಾ ಕ್ಷೇತ್ರದಲ್ಲಿ '40 ವರ್ಷಕ್ಕೆ ಮಿಕ್ಕಿ ದುಡಿದು ಉತ್ತಮ ಅನುಭವ ಗಳಿಸಿದ ನಿಮ್ಮ ವಿಮೆಯ ಉತ್ಕೃಷ್ಟ ಸಲಹೆಗಾರರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.
ಚೀಫ್ ಏಜೆಂಟ್ಸ್:
ದಿ ಬೊಂಬ್ಬಾ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಬೊಂಟಾಯಿ ಲ್ಯಾಫ್ ಬಿಲ್ಡಿಂಗ್, ಉಡುಪಿ (ದ. ಭಾರತ)
M/s. KOCHIKAR BROTHERS, LTD.,
Chief Agents:
The Bombay Life Assurance Co. Ltd.,
(Bombay Life Building Udipi S. India)
With Offices at:—Mangalore, Calicut, Coimbatore, Madura, Bangalore City, Trivandrum, Madras, Bombay.

ಕೆನರಾ ಬ್ಯಾಂಕು, ಲಿಮಿಟೆಡ್.
(ಸ್ಥಾಪನೆ: ೧೯೦೬)
(ಹೊಸೆಗಾರಿಕೆ ಪರಿಮಿತಿಸಲ್ಪಟ್ಟು ಭಾರತದಲ್ಲಿ ಸಾಂಘೀಕರಿಸಿದ್ದು)
ನುದ್ದತಿ ಠೇವುಗಳು
ರೂ. ೧೨,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧,೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.
೩ ತಿಂಗಳು ..... ನೂರಕ್ಕೆ ವರ್ಷಕ್ಕೆ ೨।
ಆರಿಂದ ೫ ತಿಂಗಳು ..... ,, ,, ೨॥
ರೂ. ೧,೦೦೦ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸವಿವವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.
ಮಂಗಳೂರು ಶಾಖೆಗಳು:
(1) ಬಂದರ ರೋಡ್ (2) ಡೊಂಗರಕೇರಿ
ಇತರ ಶಾಖೆಗಳು:—ಕಾರ್ಕಳ, ಬಂಟವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ, ಇತ್ಯಾದಿ
CANARA BANK, LIMITED.
ESTD: 1906

Bhuvanendra Products Limited,
KATAPADI S. Kanara.
Pleasant shade, Free flow and quick drying have commanded good popularity
"BHUVANENDRA" REAL INK "BHUVANENDRA"
USEFUL FOR ALL FOUNTAIN PENS
"ಭುವನೇಂದ್ರ"
ರೀಯಲ್ ಶಾಯಿ
ಬರವಣಿಗೆಯ ಎಲ್ಲಾ ಕೆಲಸಗಳಿಗೂ, ಫೌಂಟನ್ ಪೆನ್ನುಗಳಿಗೂ, ಅತ್ಯುಪಯುಕ್ತ
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕನ್ನಡ

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 44] ಕಾರೀಕು 25—8—1950 [ಸಂಚಿಕೆ 34]

ಆಹಾರ ಕೂಡಿಡುವವರಿಗೆ ಮತ್ತು ಲಾಭಬಡಕರ ಮೇಲೆ ಉಗ್ರಕ್ರಮ

ಯುದ್ಧ ಕಾಲದಲ್ಲಿಯಂತೆ ಆಹಾರಧಾನ್ಯ ಎತ್ತುನಳಿ ಮತ್ತು ಉತ್ಪಾದನೆ; ಆಹಾರ ಧೋರಣದ ವಿಚಾರದಲ್ಲಿ ಕೇಂದ್ರದ ನಿರ್ದೇಶನ; ಸ್ವಯಂ ಪರಿಪೂರ್ಣತೆಯ ಸಾಧನೆಗಾಗಿ ಉತ್ಪಾಹದ ವ್ಯಯತ್ನ; ಉಳಿಕೆಯ ದಿರಲಿ ಅಥವಾ ಕಿಸಿರತೆಯಿದಿರಲಿ ಎಲ್ಲ ಪ್ರಾಂತಗಳಲ್ಲಿ ನಿಯಂತ್ರಿತ ಧಾನ್ಯಗಳ ಎತ್ತುವಳಿಯನ್ನು ಬಲಪಡಿಸುವದು; ಎಲ್ಲ ಪ್ರಾಂತಗಳಲ್ಲಿಯೂ ಧಾನ್ಯ ಸಂಗ್ರಾಹಕರ ಮೇಲೆ ಉಗ್ರ ಕ್ರಮಕೈಕೊಳ್ಳುವಿಕೆ ಮತ್ತು ಆಹಾರ ಕಾಯದೆಗಳನ್ನು ನಿರಾನುಕಂಪಕ ರೀತಿಯಲ್ಲಿ ಆಚರಣೆಗೆ ತರುವದು; ಎಲ್ಲ ಪ್ರಾಂತಗಳಲ್ಲಿಯು ಆಹಾರ ಧಾನ್ಯಗಳ ಬೆಲೆಯಲ್ಲಿ ಸಮತೋಲವನ್ನು ಸ್ಥಾಪಿಸುವದು; ಪ್ರಾದೇಶಿಕ ತಳಹದಿಯ ನೀತಿ ನಿರಣಗಳಿಗೆ ಕಟ್ಟುನ್ನು ಪೂರೈಸುವದು ಇವೇ ಇಂದಿನ ನಿರ್ಣಯದ ಮುಖ್ಯಾಂಶಗಳಾಗಿವೆ.

ಆಹಾರ ಧೋರಣದ ವಿಚಾರದಲ್ಲಿ ಕೇಂದ್ರ ಮತ್ತು ಪ್ರಾಂತ್ಯಗಳಲ್ಲಿ ಒಂದೇ ವಿಧವಾದ ನಿರ್ದೇಶಕ ತತ್ವನಿರಬೇಕೆಂದು ಪರಿಷತ್ತು ಭಾವಿಸಿತು. ಪ್ರಾಂತಗಳಲ್ಲಿರುವ ನಿರ್ಬಂಧಗಳು ಆ ಪ್ರಾಂತಗಳ ಜನರಿಗಷ್ಟೇ ಆಹಾರ ಒದಗಿಸುವ ಸಾಧನಗಳೆಂದು ಬಗೆಯಲ್ಪಡದೆ ದೇಶದ ಸಕಲರಿಗೂ ಆಹಾರ ಪೂರೈಸುವ ಪ್ರಯತ್ನದಲ್ಲಿ ಪ್ರಾಂತವು ಮಾಡುವ ವರನಾವಧಿ ಪ್ರಯತ್ನಗಳೆಂದು ಭಾವಿಸಲ್ಪಡಬೇಕು.

ಇದುವರೆಗೂ ಉಳಿಕೆಯ ಪ್ರಾಂತಗಳು ತಮ್ಮ ಆವಶ್ಯಕತೆಗಳಿಗೆ ಬೊದಲು ಪ್ರಾಧಾನ್ಯವಿತ್ತು ಅನಂತರವೇ ತಮ್ಮ ಸ್ವಯಂನಿರ್ಣಯದಂತೆ ಪ್ರಕಟಿಸುತ್ತಿದ್ದುವು ಎಂಬುದು ಕಂಡು ಬಂದಿದ್ದರಿಂದಲೇ ನೀತಿನಿರ ವಿಚಾರ ಮಾಡಬೇಕಾದ ಆನಶ್ಯಕತೆಯುಂಟಾಯಿತೆಂದು ತಿಳಿದದೆ. ಇಂಥ ಪ್ರಾಂತಗಳಲ್ಲಿ ಧಾನ್ಯ ಎತ್ತುನಳಿ ವರನಾವಾನುಕಾರಿಯೂ ಗಿಯೇ ಇಲ್ಲ. ಉಳಿಕೆಯಿದಿರಲಿ, ಕೊರತೆಯಿದಿರಲಿ, ಎಲ್ಲ ಪ್ರಾಂತಗಳಲ್ಲಿ ಎತ್ತುವಳಿಯಿಂದ ದೊರೆಯುವ ಧಾನ್ಯವನ್ನು ಕೂಡಿಸಿ, ಎಲ್ಲ ಪ್ರಾಂತ್ಯಗಳಲ್ಲಿ ಸಮ ಪ್ರಮಾಣದಲ್ಲಿ ಜನಚಲ್ಲಡುವದನ್ನು ನೋಡಿಕೊಳ್ಳಬೇಕೆಂದು ಸೂಚಿಸಲಾಗಿದೆ. ಇದರಿಂದ ಆಹಾರ ವಿಚಾರದಲ್ಲಿ ಅವಿಲ ಭಾರತ ದೃಷ್ಟಿಯುಂಟಾಗಲು ಸಹಾಯವಾಗಿ ಆಹಾರ ವಿಚಾರದಲ್ಲಿ ಕೇಂದ್ರದಿಂದ ಹೆಚ್ಚು ಪ್ರಭಾವ ಕಾಲಿಯೂ ಸಂಘಟಿತವೂ ಆದ ನಿಯಂತ್ರಣ ನಡೆಸಲು ಅನುಕೂಲವಾಗುವದೆಂದು ಮೇಅನ ನಿರ್ಣಯಕ್ಕೆ ಬಂದದ್ದಾಗಿದೆ.

ಸ್ವಾವಲಂಬನ

ಪ್ರತಿ ಪ್ರಾಂತವೂ ಆಹಾರ ಸ್ವಾವಲಂಬನ ನದಕಕ್ಕಾಗಿ ಮುನ್ನುನ್ನು ಸಾಧಿಸಲೇಬೇಕೆಂದು ಪರಿಷತ್ತು ಸೂಚಿಸಿದೆಯೆಂದು ತಿಳಿದಿದೆ. ಪ್ರಧಾನ ಮಂತ್ರಿ ಪಂಡಿತ ನೆಹರುರವರು ರ್ಗಿಗಿರ ಅಂತ್ಯಮೊಳಗಾಗಿ ಪ್ರತಿಪ್ರಾಂತವೂ ಆಹಾರ ವಿಚಾರದಲ್ಲಿ ಸ್ವಾವಲಂಬಿಯಾಗ ಬೇಕು ಎಂದು ಹೇಳಿದ್ದಾರೆ. ಕೊರಿಯದ ಯುದ್ಧ ಪ್ರಾರಂಭವಾದುದರಿಂದ ಭಾರತವು ತನ್ನ ಆಹಾರ ಪೂರ್ಕೆಗಾಗಿ ತನ್ನನ್ನೇ ಅವಲಂಬಿಸಿಕೊಳ್ಳುವ ಅಗತ್ಯ ಇನ್ನೂ ಹೆಚ್ಚಾಗಿನೆಯೆಂದು ಪರಿಷತ್ತು ಭಾವಿಸಿತೆಂದು ತಿಳಿದಿದೆ.

ಆಹಾರ ಉತ್ಪಾದನೆ ಮತ್ತು ಎತ್ತುವಳಿ ಕಾರ್ಯಗಳು ಯುದ್ಧಕಾಲದ ಅನಸರ ಅಗತ್ಯಗಳೆಂದು ಭಾವಿಸಲ್ಪಟ್ಟು ಆ ದೃಷ್ಟಿಯಿಂದ ನಡೆಸಲ್ಪಡಬೇಕೆಂದೂ ಅದಕ್ಕೆ ಅತಿ ಹೆಚ್ಚಿನ ಪ್ರಾಶಸ್ತ್ಯ ದೊರೆಯಬೇಕೆಂದೂ ಪರಿಷತ್ತು ಒಪ್ಪಿದೆ. ಅವಶ್ಯವಿದ್ದಲ್ಲೆಲ್ಲ ಈ ಕಾರ್ಯ ನಿರ್ವಹಣಕ್ಕಾಗಿ ಆಡಳಿತ ಯಂತ್ರವನ್ನು ಬಲಪಡಿಸಬೇಕೆಂದು ನಿಶ್ಚಯಿಸಲಾಗಿದೆ.

ಎತ್ತುವಳಿ ಕಾರ್ಯ

ಉಳಿಕೆಯದಿರಲಿ ಅಥವಾ ಕೊರತೆಯದಿರಲಿ ಎಲ್ಲ ಪ್ರಾಂತ್ಯಗಳಲ್ಲೂ ಆಹಾರಧಾನ್ಯ ಎತ್ತುವಳಿ ಕಾರ್ಯವನ್ನು ಬಲಪಡಿಸಬೇಕು ಎಂದು ಪರಿಷತ್ತು ನಿರ್ಣಯಿಸಿತು. ತಿರುಮಲರಾವ ಸಮಿತಿಯ ಸೂಚನೆಗಳಿಗೆ ಮಹತ್ವವನ್ನು ಕೊಡಲಾಗಿದ್ದು ಎತ್ತುವಳಿ ವಿಚಾರದಲ್ಲಿ ಆ ಸೂಚನೆಗಳನ್ನು ಅನುಸರಿಸಬಹುದೆಂದು ತಿಳಿಯುತ್ತದೆ.

ಉಗ್ರಕ್ರಮ

ಆಹಾರ ಧಾನ್ಯ ಎತ್ತುವಳಿ ಕಾರ್ಯವನ್ನು ಬಲವಡಿಸುವದರ ಜೊತೆಗೆ ಕಳ್ಳತನದಿಂದ ಧಾನ್ಯ ಸಂಗ್ರಹ ಮಾಡುವವರ ಮೇಲೆ ಅತ್ಯುಗ್ರಕ್ರಮ ತೆಗೆದುಕೊಳ್ಳಬೇಕೆಂಬ ಸೂಚನೆ ಮಾಡಲ್ಪಟ್ಟಿದೆ.

ಪ್ರತಿ ಎಕರೆಗೆ ಉತ್ಪಾದನೆ ಹೆಚ್ಚಿಸುವದು ಹೆಚ್ಚು ವರಿಣಾಮಕಾರಕವೂ ವ್ಯಾವಹಾರಿಕವೂ ಆಗುದು. ಇದು ಹೆಚ್ಚು ಭೂಮಿಯನ್ನು ಸಾಗುವಳಿಗೆ ತರುವದಕ್ಕಿಂತ ಅಥವಾ ನೀರಾವರಿ ಸೌಕರ್ಯಗಳನ್ನು ಹೆಚ್ಚಿಸುವದಕ್ಕಿಂತ ಹೆಚ್ಚು ಸುಲಭವಾದುದೂ ಆಗಿದೆ.

ರೈತರಲ್ಲಿ, ಸರಕಾರೀ ಅಧಿಕಾರಿಗಳಲ್ಲಿ ಹೆಚ್ಚು ಬೆಳೆ ಬೆಳೆಸುವ ಬಗ್ಗೆ ಉತ್ಸಾಹವಿಲ್ಲದಿರುವದು ಬಹಳ ವಿಷಾದಕರವಾದುದು. ಇಂಥ ನಿರುತ್ಸಾಹವಿದ್ದರೆ ನಾವು ಆಹಾರ ಸಮಸ್ಯೆಯನ್ನು ಬಿಡಿಸಲು ಸಮರ್ಥರಾಗಲಾರೆವು. ಆಹಾರ ಮತ್ತು ಇತರ ಜೀವನಾವಶ್ಯಕ ವಸ್ತುಗಳ ಕೊರತೆ ಬೇರೆ ದೇಶಗಳಲ್ಲಿಯೂ ಇದೆ. ಆದರೆ ಅಲ್ಲಿಯ ಜನರು ಗಾಬರಿಯಾಗದೆ ಉತ್ಪಾದನೆ ಹೆಚ್ಚಿಸಿ ಕೊರತೆ ನಿವಾರಿಸಿಕೊಳ್ಳಲು ಸಾಹಸಪಡುತ್ತಿರುವರು. ಇಲ್ಲಿ–ಸಕ್ಕರೆಯ ಬಗ್ಗೆ ಜನರು ದೂರಿಕೊಳ್ಳುತ್ತಿರುವರು. ಆದರೆ ಬ್ರಿಟನದಲ್ಲಿ ಕೆಲ ಕಾಲದ ಹಿಂದೆ ನಮ್ಮಲ್ಲಿಯ ಅರ್ಧದಷ್ಟೂ ಸಕ್ಕರೆಯು ಅಲ್ಲಿಯ ಜನರಿಗೆ ದೊರೆಯುತ್ತಿರಲಿಲ್ಲ. ಆದರೆ ಅಲ್ಲಿಯ ಜನರು ಆ ಬಗ್ಗೆ ದೂರಿಕೊಳ್ಳುತ್ತಿರಲಿಲ್ಲ. ನಮ್ಮಲ್ಲಿ ಇತ್ತೀಚೆಗೆ ದೂರಿಕೊಳ್ಳುವದೊಂದು ಚಟವೆ ಆಗಿದೆ. ಇದರಿಂದ ಏನೂ ಮಾಡಲಾರದ ನಿರ್ಬೋಧಾವನೆ ಹೆಚ್ಚುವುದು, ಇದು ಶೂರರಾದ ಸ್ವತಂತ್ರ ಜನತೆ ವೃತ್ತಿಯಲ್ಲ. ಇಂದು ಪಾರಿತೋಷಕ ಪಡೆದ ರೈತರ ದಾರಿ ನಿಜವಾಗಿಯೂ ಆಹಾರ ಕೊರತೆಯನ್ನು ತಡೆದು ಹಾಕುವ ದಾರಿ. ಎಲ್ಲರೂ ಇವರ ಅನುಕರಣ ಮಾಡಬೇಕು.

ಎಲ್ಲಾ ವಿಶ್ವವಿದ್ಯಾನಿಲಯುಗಳಲ್ಲೂ ಒಂದೇ ಶಿಕ್ಷಣ ಭಾಷೆ

ವಿಶ್ವವಿದ್ಯಾಸಿಲಯಗಳ ಕನ್ವೊಶನ್ನು ಈ ಮೊದಲು ಒಪ್ಪಿಸಿದ ವರದಿಯಲ್ಲಿ ಹಲವಾರು ವಿಚಾರಗಳನ್ನು ದಿನಾಂಕ ೨೪ರಂದು ಮತ್ತು ಮರುದಿನ ಸೇರಿದ ಅಖಿಲಭಾರತ ವಿಶ್ವವಿದ್ಯಾಸಿಲಯಗಳ ಬೋರ್ಡು ಒಪ್ಪಿರುತ್ತದೆ.

ಈ ಎರಡು ದಿನಗಳ ಸಭೆಗೆ ನಾಗಪುರ ವಿಶ್ವವಿದ್ಯಾಸಿಲಯದ ಉಪಕುಲಪತಿಗಳಾದ ಪಂಡಿತ ಕುಂಜಿಲಾಲ ದುಬೆಯವರು ಅಧ್ಯಕ್ಷರಾಗಿದ್ದರು.

ಬೋರ್ಡು ಒಪ್ಪಿದ ಸೂಚನೆಗಳಲ್ಲಿ ಅಖಿಲ ಭಾರತದ ಎಲ್ಲಾ ವಿಶ್ವವಿದ್ಯಾಸಿಲಯಗಳಲ್ಲೂ ಒಂದೇ ಭಾಷೆಯು ಶಿಕ್ಷಣ ಮಾಧ್ಯಮವಾಗಿರಬೇಕೆಂದು ಅತ್ಯಂತ ಪ್ರಮುಖವಾಗಿದೆ. ಇದಲ್ಲದೆ, ವಿಶ್ವವಿದ್ಯಾನಿಲಯಗಳಿಗಿರತಕ್ಕ ವೈಯಕ್ತಿಕ ಸ್ವಾತಂತ್ರ್ಯ, ಧಾರ್ಮಿಕ ವಿಚಾರಗಳ ಪಾಠ, ಎಂ. ಎ. ದಿಗ್ರಿ–ಇತ್ಯಾದಿ ವಿಚಾರಗಳಲ್ಲೂ ಸಭೆಯು ಚರ್ಚಿಸಿತು.

ಹಿಂದಿ ರೇಲ್ವೆಗಳ ವಾರ್ಷಿಕ ವರದಿ

೧೯೪೦ನೇ ಮಾರ್ಚ್ ಕೊನೆ ವರೆಗೆ ಮುಗಿಯುವ ವರ್ಷದಲ್ಲಿ ಹಿಂದಿ ರೇಲ್ವೆಗಳಲ್ಲಿ ಒಟ್ಟು ೧೧೬ ಅಪಘಾತಗಳು ಸಂಭವಿಸಿದವು ಈ ೧೬ ಅಪಘಾತಗಳಲ್ಲಿ ೧೪ ಅಪಘಾತಗಳು ಪ್ರಯಾಣಿಕರ ಉಗಿಬಂಡಿಗಳಿಗೂ ೨ ಅಪಘಾತಗಳು ಗೂಡ್ಸುಗಾಡಿ

Zam-Buk

ಜಾಂಬಕು ಕಾಲಿನ ಗಳ್ಳೆ, ಬೊಕ್ಕೆ ಮುಂತಾದುವುಗಳನ್ನು ಗುಣಪಡಿಸುತ್ತದೆ



ನೋವು, ಖಾತುವಿಕೆಗಳನ್ನು ನಿವಾರಿಸುತ್ತದೆ.

ಜ್ಹಾಂಬಕಿನಲ್ಲಿರುವ ಅತ್ಯುತ್ಕೃಷ್ಟ ಔಷಧೀಯ ಎಣ್ಣೆಯು ಯಾವತ್ತೂ ನೋವು, ಬೊಕ್ಕೆ ಗಳನ್ನು ಗುಣವಡಿಸುತ್ತದೆ. ಜ್ಹಾಂಬಕನ್ನು ಕಾಲಿಗೆ ಪ್ರತಿರಾತ್ರಿ ಮಲಗುವಾಗ ತಿಕ್ಕಿರಿ. ಯಾವತ್ತೂ ಕಾಲು ಭೀನೆಯು ಗುಣವಾಗುವದು. ಇದಲ್ಲದೆ ಜ್ಹಾಂಬಕ್ಕೂ ಯಾವತ್ತೂ ಗಾಯ, ಕಡಿತ, ಕೆಟ್ಟು ಮುಂತಾದವುಗಳಿಗೆ ಉತ್ತಮ ಔಷಧಿಯಾಗಿರುತ್ತದೆ. ಕ್ಯಾಡೆ ಕೊಬ್ಬುಗಳಿಂದ ವಿಹಿತವೆಂದು ಖಾತ್ರಿ ಹೇಳುವೆವು.

ಜಾಂಬಕು—ಜಗತ್ತಿನ ಅತೀ ಶ್ರೇಷ್ಠ ಚರ್ಮವ್ಯಾಧಿ ಮುಲಾಮು

ಏಜೆಂಟರು: ದಾದಾ ಎಂಡ್ ಕೊ, ಪಿ. ಟಿ. ಮದ್ರಾಸು.

ಗೆಗೂ ಸಂಬಂಧಿಸಿದ್ದವು ಎಂದು ರೇಲ್ವೆಗಳ ಮುಖ್ಯ ಇನಸ್ಪೆಕ್ಟರರ ವರದಿಯಿಂದ ತಿಳಿದು ಬರುತ್ತದೆ. ವರದಿಯಲ್ಲಿ ಅವರು ಈ ರೀತಿ ಉಲ್ಲೇಖಿಸಿರುವರು:

೪ ಅಪಘಾತಗಳು ತಾಕಲಾಟದಿಂದ ಸಂಭವಿಸಿದ್ದು ೧೦ ಅಪಘಾತಗಳು ಗಾಡಿಗಳು ಹಳಿಬಿಟ್ಟು ಸರಿದಿದ್ದರಿಂದ ಆಗಿರುವವು. ಉಳಿದ ಎರಡು ಅಪಘಾತಗಳಲ್ಲಿ ಒಂದು ಫಾಯರಮನ್ನನು ಎಂಜಿನದ ಸೈಡ್‌ಲೇಟಿಂದ ಗಾಯಗೊಂಡಿದ್ದರಿಂದ ಸಂಭವಿಸಿತು. ಮತ್ತೊಂದು ವ್ಯಯಾಣಿಕನೊಬ್ಬನು ಕಾಲು ಮಣೆಯ ಮೇಲೆ ಪ್ರವಾಸ ಮಾಡುತ್ತಿದ್ದಾಗ ಭೋರ್ ಘಟ್ಟದಲ್ಲಿ ಎದುರಿನಿಂದ ಬರುವ ಗಾಡಿಯು ತಿಕ್ಕಿ ಹೊಡೆದಿದ್ದರಿಂದ ಆಯಿತು.

ತಾಕಲಾಟದ ೪ ಅಪಘಾತಗಳಲ್ಲಿ ಮೂರು ಅಪಘಾತಗಳಿಗೆ ಸ್ಟೇಶನ ಅಧಿಕಾರಿಗಳ ಇಲ್ಲವೆ ಎಂಜಿನದವರ ಅಲಕ್ಷ್ಯವೇ ಕಾರಣವಿದ್ದು ಇನ್ನೊಂದು ವಾಗಿನ ಅಪಕರಣಗಳ ದೋಷದಿಂದ ಆಗಿರುವದು.

ಹಳಿ ಬಿಟ್ಟು ಸರಿದಿದ್ದರಿಂದ ಆದ ೧೦ ಅಪಘಾತಗಳಲ್ಲಿ ೫ ಅಪಘಾತಗಳು ಕಿಡಿಗೇಡಿಗಳ ವಿಘಾತಕ ಕೃತಿ ಮೂಲಕ ಸಂಭವಿಸಿದವು. ಉಳಿದ ೫ರಲ್ಲಿ ಎರಡು ಸ್ಟೇಶನ್ ಅಧಿಕಾರಿಗಳು, ಎಂಜಿನದವರು ಮೊದಲಾದವರ ದುರ್ಲಕ್ಷ್ಯದಿಂದ ಆಗಿದ್ದು ೨ ಅಪಘಾತಗಳು ಮಾರ್ಗದಲ್ಲಿಯ ದೋಷದಿಂದ ಆಗಿರುವವು. ಇನ್ನೊಂದು ಸಂಕೀರ್ಣ ಸ್ವರೂಪದ್ದೆತ್ತು.

ವರದಿಯ ವರ್ಷದಲ್ಲಿ ೨೩೩ ಮೈಲು ಹೊಸ ರೇಲ್ವೆಗಳನ್ನು ಹಾಕಲಾಗಿರುವದು ಹಾಗು ೨೧೭೪ ಮೈಲು ರೇಲ್ವೆ ಮಾರ್ಗವನ್ನು ಪರಿತೀಲಿಸಲಾಗಿರುವದು, ಸರಕಾರಿ ಇನಸ್ಪೆಕ್ಟರರು ಆಗಾಗ್ಗೆ ರೇಲ್ವೆ ಮಾರ್ಗಗಳ ಪರಿತೀಲನೆ ನಡೆಸಿ ತಪ್ಪುಗೆ ಕಂಡು ಬಂದ ದೋಷಗಳನ್ನು ತಿಳಿಸುತ್ತಿರುವರು. ಆದರೆ ಅವರು ಮಾಡಿದ ಸೂಚನೆಗಳನ್ನು ಜಾರಿಯಲ್ಲಿ ತರುವದು ಆಯಾ ರೇಲ್ವೆಯ ವರಿಗೆ ಸಂಬಂಧಿಸಿದ್ದಾಗಿದೆ.

ಮದ್ರಾಸ ಪ್ರಾಥಮಿಕ ಶಿಕ್ಷಣ ಮಸೂದೆ

ಪ್ರಾಥಮಿಕ ಶಿಕ್ಷಣದ ಬಗ್ಗೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಜನರ ಆದಾಯದ ಮೇಲೆ ಶಿಕ್ಷಣ ಕರವನ್ನು ಹೇರುವ ಅಧಿಕಾರ ಕೊಡುವ ಮಸೂದೆಯು ಇಂದು ಮದ್ರಾಸ ಶಾಸನ ಸಭೆಯಲ್ಲಿ ಪಾಸಾಯಿತು.

ಮದ್ರಾಸ ಪ್ರಾಥಮಿಕ ಶಿಕ್ಷಣ ಕಾನೂನಿನ ತಿದ್ದುಪಡಿ ಮಾಡುವ ಈ ಮಸೂದೆಯಲ್ಲಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಆಸ್ತಿಯ ವಾರ್ಷಿಕ ಉತ್ಪನ್ನದ ಮೇಲೆ ನೂರಕ್ಕೆ ೫ ರಷ್ಟು ಸರ ಟ್ಯಾಕ್ಸ ಹಾಕಬಹುದೆಂದೂ ಜಮೀನಿನ ಲಾವಣಿ ಹಣದ ಮೇಲೆ ರೂಪಾಯಿಗೆ ೩ ಆಣೆಯಷ್ಟು ಶಿಕ್ಷಣ ಕರ ಹೇರಬಹುದೆಂದೂ ಈ ಮಸೂದೆಯಲ್ಲಿ ಹೇಳಲಾಗಿದೆ.

ಶಿಕ್ಷಣ ಮಂತ್ರಿಗಳು ಈ ಮಸೂದೆಯ ಮೇಲೆ ಭಾಷಣ ಮಾಡುತ್ತ ಮದ್ರಾಸ ಸರಕಾರವು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ೫೫ ಲಕ್ಷ ರೂ. ಗಳನ್ನು ಕೊಡುವದೆಂದು ಹೇಳಿದರು.

ರಾಜಕಾರಣದಿಂದ ದೂರ ಉಳಿಯಿರಿ

ವಿದ್ಯಾರ್ಥಿಗಳಿಗೆ ಕಾರ್ಯಪ್ಪನವರ ಉಪದೇಶ

ಹಿಂದೀ ವಿದ್ಯಾರ್ಥಿಗಳು ರಾಜಕಾರಣದಿಂದ ದೂರ ಉಳಿಯಬೇಕೆಂದೂ ತಮ್ಮ ಜೀವನವನ್ನೆದುರಿಸುವದಕ್ಕಾಗಿ ಮತ್ತು ದೇಶ ಸೇವೆಗಾಗಿ ಬೇಕಾದ ಸಲಕರಣೆಗಳಿಂದ ಸಂಪನ್ನರಾಗಬೇಕೆಂದೂ ಭಾರತದ ಮುಖ್ಯ ಸೇನಾಸೇತಿಗಳಾದ ಜನರಲ್ ಕೆ. ಯಂ. ಕಾರ್ಯಪ್ಪನವರು ಪುಣೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತ ಹೇಳಿದರು.

ಅವರಿನ್ನೂ ಮುಂದುವರಿಯುತ್ತ "ವಿದ್ಯಾರ್ಥಿಗಳು ಪುಸ್ತಕಗಳನ್ನು ಮುಚ್ಚಿಟ್ಟು ರಾಜಕಾರಣದಲ್ಲಿ ಮಗ್ನರಾಗುವದು ಮತ್ತು ಅನೇಕ ವಿದ್ಯಾರ್ಥಿಗಳು ಶಿಸ್ತುರಾಹಿತ್ಯದಿಂದ ವರ್ತಿಸುವದು ಬಹಳ ವಿಷಾದಕರ ಸಂಗತಿಯಾಗಿದೆ. ವಿದ್ಯಾರ್ಜನೆಯನ್ನು ಮಾಡಿಕೊಂಡು ತಮ್ಮನ್ನು ಭವಿಷ್ಯ ಕಾಲದಲ್ಲಿ ಎದುರಿಸಬಹುದಾದ ಗಂಭೀರ ಪ್ರಶ್ನೆಗಳನ್ನೆಹುರಿಸುವ ಯೋಗ್ಯತೆಯನ್ನು ಪಡೆಯುವದೇ ನಿಮ್ಮ ಆದ್ಯಕರ್ತವ್ಯ. ವಿದ್ಯಾರ್ಥಿಗಳು ರಾಜಕಾರಣದಲ್ಲಿ ತಲ್ಲೀನರಾದರೆ ಅದರಿಂದ ಅವರಿಗಷ್ಟೇ ಅಲ್ಲದೆ ಇಡೀ ದೇಶಕ್ಕೇ ಹಾನಿಯುಂಟು.

ಹಿಂದೀ ತರುಣರು ಬುದ್ಧಿಮತ್ತೆಯಲ್ಲಿ ಯಾರಿಗೂ ಕಡಿಮೆಯವರಲ್ಲ. ಆದರೆ ಅತಿ ನೇರವಾಗಿ ಸಂಬಂಧಿಸಿರದ ವಿಷಯಗಳಲ್ಲಿ ತೊಡಗುವ ಚಟವು ಮಾತ್ರ ನಮ್ಮ ವಿದ್ಯಾರ್ಥಿಗಳಲ್ಲಿ ಕಡಿಮೆಯಾಗಬೇಕಾಗಿದೆ. ಕಾಲೇಜಿನಿಂದ ಪದವಿಯನ್ನುಪಡೆದು ಹೊರಬಿದ್ದನಂತರ ಅವಶ್ಯ ಕಂಡರೆ ನೀವು ರಾಜಕಾರಣವನ್ನೇ ನಿಮ್ಮ ಜೀವನದ ರಂಗವನ್ನಾಗಿ ಆರಿಸಿಕೊಳ್ಳಬಹುದು. ಆದರೆ ವಿಶ್ವವಿದ್ಯಾಲಯ ಜೀವನದಲ್ಲಿಯೇ ಅದನ್ನು ತರುವದು ಯೋಗ್ಯವಲ್ಲ.

ಸೈನ್ಯದ ಬಗ್ಗೆ ನೀವು ವಿಶೇಷ ಲಕ್ಷ್ಯ ಕೊಡಬೇಕು. ಆದರೆ ಅದರಲ್ಲಿ ಉತ್ಸಾಹ ತರುಣರಿಗೆ ಮಾತ್ರ ಪ್ರವೇಶವಿದೆ. ನಾವಿಂದು ಜಗತ್ತಿನಲ್ಲಿಯೇ ಅತಿ ಶ್ರೇಷ್ಠವಾದ ಸೈನ್ಯವನ್ನು ಕಟ್ಟಬೇಕಾಗಿದೆ. ಇಂದಿನ ತರುಣರು ಸೈನ್ಯದ ಬಗ್ಗೆ ಸಾಕಷ್ಟು ಆಸ್ಥೆಯನ್ನು ತೋರಿಸಿದರೆ ಅದು ಸಾಧ್ಯವಿದೆ. ಇಂಜನಿಯರಿಂಗ ಮತ್ತು ಯಾಂತ್ರಿಕ ಶಿಕ್ಷಣ ತಜ್ಞರ ಅಭಾವದ ಮೂಲಕ ಹಿಂದೀ ಸೈನ್ಯದಲ್ಲಿಯ ಆ ವಿಭಾಗದ ೩೦೦ ಅಧಿಕಾರಗಳು ಖಾಲಿ ಉಳಿದಿವೆ.

ಯುದ್ಧಕಾಲದಲ್ಲಿ ಮಾತ್ರವಲ್ಲದೆ ಶಾಂತಿ ಕಾಲದಲ್ಲಿಯೂ ಸೇವೆ ಸಲ್ಲಿಸಬಹುದಾದ ಸೈನ್ಯವನ್ನು ನಾವು ನಿರ್ಮಿಸಲಿದ್ದೇವೆ. ಭಾರತವು ತನ್ನ ನೆರೆಹೊರೆ ರಾಷ್ಟ್ರಗಳೊಡನೆ ಹೆಗಲಿಗೆ ಹೆಗಲು ಹಚ್ಚಿ ನಿಲ್ಲುವಷ್ಟು ಸಾಮರ್ಥ್ಯ ಬಂದಿತೆಂದರೆ ರಸ್ತೆ ತಯಾರಿಸುವದು ಬಾವಿ ತೋಡುವದು, ವೈದ್ಯಕೀಯ ನೆರವು ನೀಡುವದು ಮೊದಲಾದ ಸಾರ್ವಜನಿಕ ಸೇವೆಯ ಕಾರ್ಯಗಳನ್ನು ಸೈನ್ಯವು ಕೈಕೊಳ್ಳುವದು ಎಂದು ಮುಂತಾಗಿ ಹೇಳಿದರು.

ಮತಪತ್ರಗಳಿಗಾಗಿ ಅಂಚೆಯ ಕೆಂಪು ಡಬ್ಬಿ!

ಖುರ್ಶಿದಲಾಲರಿಗೆ ಆಶ್ಚರ್ಯ

ಕಾಂಗ್ರೆಸ ಅಧ್ಯಕ್ಷರ ಚುನಾವಣೆಗೆ ಸಂಬಂಧಿಸಿದ ಮತ ಪೆಟ್ಟಿಗೆಗಳ ಪಾಸೇಲಗಳನ್ನುದಿಲ್ಲಿ ಅ. ಭಾ. ಕಾಂಗ್ರೆಸ ಕಚೇರಿಯಲ್ಲಿ ಒಡೆರಾಗ ಒಂದು ಮತಪೆಟ್ಟಿಗೆಯು ಅಂಚೆ ಶಾಖೆಯ ಕೆಂಪು ಅಂಚೆ ಪೆಟ್ಟಿಗೆ ಇಲ್ಲವೆ ಅದನ್ನು ಹೋಲುವಂತಹದು. ಇದುವದನ್ನು ಕಂಡು ಅಲ್ಲಿ ಹಾಜರಿದ್ದ ಸಂಪರ್ಕ ಶಾಖೆಯ ಉಪಮಂತ್ರಿಗಳಾದ ಮಾನ್ಯ ಖುರ್ಶಿದಲಾಲರು ದಿಗಿಲುಗೊಂಡರು. ಆ ಪಾರ್ಸಲನ್ನು ಒಡೆದ ಕೂಡಲೆ ಚುನಾವಣೆ ಅಧಿಕಾರಿಗಳಾದ ಶ್ರೀ. ಕಲಾವೆಂಕಟರಾಯರು "ಇಲ್ಲಿ ನಿಮಗೆ ಕಾಣಿಕೆ ಇದೆ" ಎಂದು ಅದನ್ನು ಅವರಿಗೆ ಕೊಡ ಹೋಗಲು, "ಅದನ್ನು ಅವರು ದೂರ ತಿಸಿದ್ದಾದರೂ ಎಂತು" ಎಂದು ಉಪಮಂತ್ರಿಗಳು ಉದ್ಗಾರ ತೆಗೆದರು. ಉಳಿದ ಮತಪೆಟ್ಟಿಗೆಗಳು ಸಿಗರೇಟ ಟಿನ್, ಚಿಮಣಿ ಎಣ್ಣೆ ಕ್ಯಾನ, ಸಣ್ಣ ಸೂಟಕೇಸ ಮೊದಲಾದವುಗಳಿಂದ ತಯಾರಿಸಲ್ಪಟ್ಟವಿದ್ದವು.

ಮಗುವಿನ ಮೃದು ಚರ್ಮಕ್ಕೆ ಹೆಚ್ಚು ರಕ್ಷಣೆಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದು ಚರ್ಮರಕ್ಷಣೆ ಮಾಡುತ್ತದೆ. ಅದನ್ನು ನಿಜ ಆರೋಗ್ಯದಲ್ಲಿರಿಸಿ ಅದರ ಸಹಜ ತೇಪನನ್ನು ಕಾಪಾಡುತ್ತದೆ. ಉಷ್ಣ ಪ್ರದೇಶಗಳಲ್ಲಿ ಇದು ಅವಶ್ಯ.

ಕುಟಿಕೂರಾ ಸಾಬೂನು

CUTICURA SOAP

ಬಸ್ಸು ಪ್ರಯಾಣಿಕರಿಗೆ ಸೂಚನೆ

ಇತ್ತೀಚೆಗೆ ಬಸ್ಸು ಟಿಕೇಟು ಮುಂದಾಗಿ ಪಡಕೊಂಡು ಪ್ರಯಾಣ ಬೆಳಸದೆ ಅದರ ಮೊಬಲಗು ರಿಫಂಡ್ ಕೇಳುವಂಥಾ ಪದ್ಧತಿ ದಿನೇ ದಿನೇ ಪ್ರಬಲವಾಗಿ—ಬಂದಿದೆ. ಕಾರಣ ಕೆಲವರು ಪ್ರಯಾಣದ ಅತ್ಯಾವಶ್ಯಕತೆ ಗಮನಿಸದೆ–ಟಿಕೇಟು ಮೌಲ್ಯ ಪಾಸ್ಸು ದೊರೆಯುವುದಾಗಿ ಕೂಡಾ ತಿಳುವಳಿಕೆಯಿಂದ ಟಿಕೇಟು ಪಡಕೊಂಡು ಆ ಟಿಕೇಟಿನಲ್ಲಿ ನಮೂದಿಸಿರುವ ಸಮಯವನ್ನು ಲಕ್ಷಿಸದೆ, ಸಮಯ ತಪ್ಪಿಸಿ ಬರುವುದು. ಇದರಿಂದ ಸೀಟುಗಳು ಖಾಲಿಯಾಗಿ ಇರಗೊಡಿಸಿ ಸರ್ವಿಸು ಬಿಡಲ್ಪಟ್ಟು ಅತೀ ಅಗತ್ಯದಿಂದ ಪ್ರಯಾಣಿಸುವವರಿಗೆ ಕೂಡಾ ತೊಂದ್ರೆಗೊಳಿಸುವಂತ್ಯಾಗುತ್ತಾ ಬರುವುದಲ್ಲದೆ ಸೀಟು ಇರುತ್ತಾ ಟಿಕೇಟು ಕೊಡುವುದಿಲ್ಲವಾಗಿ ಇತ್ಯಾದಿ ಆರೋಪ ಹೊರಿಸಿ ಬರುವ ಕಂಪ್ಲೈಂಟಿಗೂ ಅಸ್ಪದ ಕೊಡುತ್ತಾರೆ. ಬಸ್ಸು ಟಿಕೇಟು, ಪ್ರಯಾಣಿಸುವವರೇ ಪಡೆದು ಅವರೇ ಉಪಯೋಗಿಸ ಬೇಕಾಗಿ ಶಿವ್ಯಾ ಇತರ ಯಾರಿಗೂ ವಿಕ್ರಯಿಸುವುದಾಗಲೀ ಪ್ರಯಾಣ ಬೆಳಸುವರೇ ಕೊಡುವುದಾಗಲೀ ಕೂಡದಾಗಿ ಸರಕಾರದ ಕಠಿಣ ಕಾನೂನು ಕೂಡಾ ಇದ್ದರೂ ಪ್ಯಾಸೆಂಜರರು ಇದಕ್ಕೇ ವಿರುದ್ಧವಾಗಿ ನಡೆಯುವುದು ನಮ್ಮ ತಿಳುವಳಿಕೆಗೆ ಬಂದಿದೆ. ಇನ್ನು ಮುಂದೆ ಅದಷ್ಟು ತಮ್ಮ ಪ್ರಯಾಣಕ್ಕೆ ಅವಶ್ಯಾವಶ್ಯಕತೆ ತಿಳಕೊಂಡು ಟಿಕೇಟು ಮುಂದಾಗಿ ಪಡಕೊಂಡು ತಪ್ಪದೆ ಪ್ರಯಾಣ ಮಾಡಬೇಕಾಗಿಯೂ, ಈ ಮೇರಿನ ಅವ್ಯವಸ್ಥೆಗೆ ಎಡೆಕೊಡಬಾರದಾಗಿ ನಾವು ವಿನಂತಿಸುವುದಲ್ಲದೆ ಪ್ರಯಾಣ ಬೆಳಸದೆ ತರುವ ಟಿಕೇಟುಗಳ ಮೊಬಲಗನ್ನು ವಾಪ್ಸು ಕೊಡುವ ಕ್ರಮವಿಲ್ಲವೆಂಬುದನ್ನು ಮುಂದಾಗಿ ತಿಳಿಸಲು ಇಚ್ಛಿಸುತ್ತೇವೆ.

ಜ್ಯೊಂಟ್ ಮೆನೇಜರ್ಸ್,

ಮಂಗಳೂರು 10-4-49

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ, ಮಂಗಳೂರು.
ದಿ ಜ್ಯೊಂಟ್ ಬುಕ್ಕಿಂಗ್ ಆಫೀಸ್, ಕೊಡಿಯಾಲಬೈಲು.

THE CANARA BANKING CORPORATION LTD.

Estd: 1906.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಹೆಡ್ ಆಫೀಸು—ಉಡುಪಿ

ಮೂಲ ಧನ:

ಅಧಿಕೃತ	ರೂ. 25,00,000
ಚಂದಾ ಆರ್ಪಿಸಿದ್ದು ಮತ್ತು ವಸೂಲಾದ್ದು	ರೂ. 20,00,000
ಕ್ಷೇಮ ನಿಧಿಗಳು	ರೂ. 10,21,747
ಒಟ್ಟು ಚಲಾವಣೆ ಭಂಡವಾಳ	ರೂ. 303,02,976

ಗಿರಾಕಿಗಳ ತೃಪ್ತಿಯೇ ನಮ್ಮ ಗುರಿ!

ಸಕಲ ತರದ ಬ್ಯಾಂಕಿಂಗ್ ವ್ಯವಹಾರುಗಳನ್ನು ಕೈಕೊಳ್ಳಲಾಗುವುದು

ಹುಳಿತಕಜ್ಜಿ ಮುದ್ರಾ



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಿ ಕಡ್ಡಿ, ನಿತ್ಯ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದವೆಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ, ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಕಾಲದವಿರಾಮ ನಿಶ್ಚಿಂತ ಜೀವನಕ್ಕೆ – ಕುಟುಂಬದ ಸುಖ ಸೌಕರ್ಯಕ್ಕೆ

ಅತ್ಯಮೂಲ್ಯ ಆಕರ್ಷಕ ವಿಮಾಯೋಜನೆ:

ಮೊದಲು ಕೇವಲ ರೂ. 55/-ರ ವಿನಿಯೋಗದಿಂದ ರೂ. 30,000/- ನಿಧಿ ನಿಮ್ಮದಾಗುವುದು

ಅಥವಾ ವರ್ಷಂಪ್ರತಿ ರೂ. 1,995ರಂತೆ ಕಾಯಂ ಆಗಿ ದೊರೆಯುವ ಅಜೀವ ವರ್ಷಾಸನ (ವರ್ಷದಲ್ಲಿ ನೀವು ತೆತ್ತ ಹಣ ರೂ. 660/ ಮಾತ್ರ)

ಅಥವಾ ನಿಶ್ಚಿತ ಅವಧಿಯಲ್ಲಿ ರೂ. 17830/- ನಗದು

ಅಥವಾ ನಿರ್ದಿಷ್ಟ ಅವಧಿಯಲ್ಲಿ ರೂ. 22,500/- ಮತ್ತು ಮರಣಾನಂತರ ಇನ್ನೊಮ್ಮೆ ರೂ. 10,000/-

ಘೋಷಿಸಿದುದು ಮಾತ್ರವಲ್ಲದೆ ಕ್ಲುಪ್ತ ಅವಧಿಯ ನೊದಲು, ಯಾವ ಸಮಯದಲ್ಲೇ ಆಗಲಿ, ಮರಣ ಹೊಂದಿದರೆ, ವರ್ಷಕ್ಕೆ ರೂ. 1000/-ಕ್ಕೆ ರೂ. 30/-ರಂತೆ ಪಾತ್ರಿಯಾಗಿ ದೊರೆಯುವ ರೂ. 10,000/-ದ ಪೂರ್ಣ ವಿಮಾರಕ್ಷಾ ಕವಚ ಸಹಾ.

ವಿಮಾ ಕ್ಷೇತ್ರದಲ್ಲಿ 40 ವರ್ಷಕ್ಕೆ ಮಿಕ್ಕಿ ದುಡಿದು ಉತ್ತಮ ಅನುಭವ ಗಳಿಸಿದ ನಿಮ್ಮ ವಿಮೆಯ ಉತ್ಕೃಷ್ಟ ಸಲಹೆಗಾರರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಚೀಫ್ ಏಜೆಂಟ್ಸ್:

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಬೊಂಬಾಯಿ ಲೈಫ್ ಬಿಲ್ಡಿಂಗ್, ಉಡುಪಿ (ದ. ಕೆನರಾ)

M/s. KOCHIKAR BROTHERS, LTD.,

Chief Agents:

The Bombay Life Assurance Co. Ltd.,

(Bombay Life Building Udipi S. India)

With Offices at:—Mangalore, Calicut, Coimbatore, Madura, Bangalore City, Trivandrum, Madras, Bombay.

ಕೆನರಾ ಬ್ಯಾಂಕು, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಭಾರತದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯೂ ಅದಕ್ಕೆ ಮೇಲ್ಪಟ್ಟು ರೂ. ೧,೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು . . . . . ನೂರಕ್ಕೆ ವರ್ಷಕ್ಕೆ ೨।

ಅದರಿಂದ ಜ ತಿಂಗಳು . . . . . ,, ,, ೨॥

ರೂ. ೧,೦೦೦ದ ಗುಣಕದ ತೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸವಿವರವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಮಂಗಳೂರು ಶಾಖೆಗಳು:

(1) ಬಂದರ ರೋಡ (2) ಡೊಂಗರಕೇರಿ

ಇತರ ಶಾಖೆಗಳು:—ಕಾರ್ಕಳ, ಬಂಟ್ವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ, ಇತ್ಯಾದಿ.

CANARA BANK, LIMITED.

ESTD: 1906

Bhuvanendra Products Limited,

KATAPADI S. Kanara.

Pleasant shade, Free flow and quick drying have commanded good popularity

"BHUVANENDRA" **REAL INK** "BHUVANENDRA"

USEFUL FOR ALL FOUNTAIN PENS

"ಭುವನೇಂದ್ರ"

ರಿಯಲ್ ಶಾಯಿ

ಬರವಣಿಗೆಯ ಎಲ್ಲಾ ಕೆಲಸಗಳಿಗೂ, ಫೌಂಟನ್ ಪೆನ್ನುಗಳಿಗೂ, ಅತ್ಯುಪಯುಕ್ತ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕನ್ನಡ

ಡೊಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 44] ಶಾರೀಕಾ 15—9—1950 [ಸಂಚಿಕೆ 37]

ಜಾಗತಿಕ ಶಾಂತಿ

ಅಂತರ್ ರಾಷ್ಟ್ರೀಯ ಪಾರ್ಲಿಮೆಂಟರಿ ಸಂಘದಲ್ಲಿ ಶ್ರೀ. ಮಾವಳಣಕರರ ಭಾಷಣ

"ಕೆಲ ತಿಂಗಳ ಹಿಂದೆ ಈ ಸಂಘದ ಪ್ರಧಾನ ಕಾರ್ಯದರ್ಶಿಗಳಿಗೆ ವರದಿಯನ್ನೊಪ್ಪಿಸಿದಂದಿನಿಂದ ಜಿಕ್ಕೀಟೆಗೆ, ಯುದ್ಧ ಸಂಭವ ನಿವಾರಣೆ ಹಾಗೂ ಅಂತರ್‌ರಾಷ್ಟ್ರೀಯ ಶಾಂತಿಸಾಧನೆಗಳಲ್ಲಿ ಸಂಯುಕ್ತ ರಾಷ್ಟ್ರ ಸಂಘವು ಯಶಸ್ವಿಯಾಗಬಹುದಾದ ವರಿಸ್ಥಿತಿಯು ತುಂಬಾ ಕೆಟ್ಟಿದೆ" ಎಂದು ಭಾರತ ಪಾರ್ಲಿಮೆಂಟಿನ ಅಧ್ಯಕ್ಷರಾದ ಶ್ರೀ. ಜಿ. ವಿ. ಮಾವಳಣಕರರು ಡಚ್ಚಿನಲ್ಲಿ ಅಂತರ್ ರಾಷ್ಟ್ರೀಯ ಪಾರ್ಲಿಮೆಂಟರಿ ಸಂಘದ ಸಭೆಯಲ್ಲಿ ಭೂತನಾಡುತ್ತ ಹೇಳಿದರು.

ಅವರು ಹೇಳಿದ್ದೇನೆಂದರೆ:—ಚರ್ಚೆ, ತರ್ಕ ಮತ್ತು ತಿಳುವಳಿಕೆಯಿಂದ ಸಮಸ್ಯೆಗಳನ್ನು ನಿವಾರಿಸಲು ಸಂಯುಕ್ತ ರಾಷ್ಟ್ರ ಸಂಘವು ಪ್ರಯತ್ನಿಸುತ್ತಿದೆ. ಆದರಲ್ಲಿ ತಿನೇಕ ದೇಶಗಳ ಅಧಿಕಾರಿಗಳಿರುವುದರಿಂದ ತಿದಕ ನಿರ್ಣಯಗಳು ಈ ಪಾರ್ಲಿಮೆಂಟರಿ ಸಂಘದ ಚರ್ಚೆಗಳಿಗಿಂತ ಸಮ್ಮದಲ್ಲಿ ಹೆಚ್ಚು ವರಿಣಾಮಕಾರಿಯಾಗಬಹುದು.

ನಾವೀಗ ಹಿಂಸೆಯನ್ನು ಹಿಂಸೆಯಿಂದ ಕೊಡಿದು ಹಾಕಲು ಯತ್ನಿಸುತ್ತಿದ್ದೇವೆ. ತವಸರದ ಉಮಾಯಗಳಿಗೂ ಮಹತ್ವವಿರುವುದಾದರೂ ಏನಾಹುತದ ಕಾರಣವನ್ನು ತಳವಾಗಿ ವಿಚಾರಿಸಿಕೊಂಡು ವರಿಹಾರ ಮಾರ್ಗ ಕಂಡುಹಿಡಿಯಬೇಕಾಗುವುದು.

ಶಾಂತಿ ಸಾಧನೆಗಳು

ಶಾಂತಿಗಾಗಿ ಈ ಕೆಲ ಸಂಗತಿಗಳು ಅವಶ್ಯವಾಗಿವೆ: ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಅತಿ ಅಂತರವಿರುವ ವಿವಿಧ ಜೀವನ ನಟ್ಟುಗಳಿರಬಾರದು; ಒಂದೇ ಜಗತ್ತಿನಲ್ಲಿ ವಿಶ್ವಾಸವಿಟ್ಟು ನಾವು ಅದರಂತೆ ನಡೆಯಬೇಕು. ನಾವು ಕುಲದ ಅಭಿಮಾನವನ್ನು ಬಿಟ್ಟು ಮೇಲು ಕೀಳೆಂಬ ಭಾವನೆಯನ್ನು ಬಿಟ್ಟುಕೊಡಬೇಕು.

ಆದುದರಿಂದ ಶಾಂತಿಗಾಗಿ ಅವಶ್ಯವಿರುವ ಈ ವರಿಸ್ಥಿತಿಯ ನಿರ್ಮಾಣಕ್ಕಾಗಿ ನಾವು ಶ್ರಮಿಸಬೇಕು.

ಮಹತ್ವದ ಬದಲಾವಣೆ

ಕಳೆದ ಕೆಲ ವರ್ಷಗಳಲ್ಲಿ ಜಾಗತಿಕ ವರಿಸ್ಥಿತಿ ಬಹು ಬದಲಾಗಿದೆ. ಜಗತ್ತು ಕೇವಲ ಪಾಶ್ಚಾತ್ಯ ಖಂಡವೊಂದನ್ನೆ ವ್ಯಮುಖ ಅಭಿಪ್ರಾಯಗಟ್ಟಿಕೊಂಡು ಬದುಕ ದೆಂಬ ಮಾತನ್ನೀಗ ಓರ್ವ ಕುರುಡನು ಕೂಡ ಕಾಣಬಹುದು. ಜಗತ್ತಿನ ಪೂರ್ವ ಖಂಡದಲ್ಲಿ ಅದರದೇ ಆದ ಸಂಸ್ಕೃತಿ ಮತ್ತು ನಾಗರಿಕತೆಗಳಿವೆ. ಏತಿಯದ ವರಿಸ್ಥಿತಿಯನ್ನು ಗಮನಿಸದೆ ಮಾಡುವ ಶಾಂತಿ ಪ್ರಯತ್ನಗಳು ವ್ಯರ್ಥವಾಗುವವು. ಈ ಅಂತರ್ ಪಾರ್ಲಿಮೆಂಟರಿ ಸಂಘದ ಅಧ್ಯರ್ಯಗಳು ಈ ಮಾತನ್ನರಿತಿರುವದು ಸಂತೋಷದ ಸಂಗತಿ.

ಹಿಂಸೆ ಆಥವಾ ಬಲಾತ್ಕಾರದಿಂದ ಶಾಂತಿ ಸಾಧಿಸಬಹುದೆಂದು ತಿಳಿಯುವದು ತಪ್ಪು. ಬಲಪ್ರಯೋಗ ಅದರ ಉಪಾಯವಲ್ಲ. ಶಾಂತಿ ಸಾಧನೆಗೆ ಸತ್ಯ ಮತ್ತು ಅಹಿಂಸೆಗಳೇ ನಿಜ ಮಾರ್ಗಗಳು ಎಂದು ನಮ್ಮ ರಾಷ್ಟ್ರ ಪಿತ ಗಾಂಧೀಜಿ ಹೇಳಿರುವರು. ಈ ನಮ್ಮ ಅಭಿಪ್ರಾಯಕ್ಕೆ ಪ್ರತಿಯೋರ್ವನನ್ನು ಒಲಿಸಿಕೊಳ್ಳಲು ನಾವು ಆತುರರಾಗಿರುವೆವು."

ಶಾಂತಿ ಅವಿಭಾಜ್ಯವಿದೆ

ಪಾಕಿಸ್ತಾನ ಶಿಷ್ಟಮೆಂಡಳದ ಧುರೀಣ ಡಾ. ಕುರೇಶಿಯವರು ಮಾತನಾಡುತ್ತ ಹೇಳಿದ್ದೇನೆಂದರೆ:—"ಜಗತ್ತು ಇನ್ನೊಂದು ಮಹಾಯುದ್ಧದ ಅಂಚಿನಲ್ಲಿರಬಹುದು. ಸ್ವತಂತ್ರರಾಷ್ಟ್ರಗಳು ತಮ್ಮ ಹೊಣೆಗಾರಿಕೆಯನ್ನು ಅರಿಯಲು ತಪ್ಪಿದರೆ ಅವರು ಗಂಡಾಂತರವನ್ನೆದುರಿಸಬೇಕಾದೀತು.

ಶಾಂತಿಯು ಅವಿಭಾಜ್ಯವೆಂದು ಜಗತ್ತು ಅರಿಯಬೇಕಾದ ಕಾಲ ಒದಗಿದೆ. ಪೂರ್ವ ಜಗತ್ತಿನ ಜನರು ಪಶ್ಚಿಮದವರೊಡನೆ ಸಹಕರಿಸಲು ಸಿದ್ಧರಿದ್ದಾರೆ.

ವಾತಿಸ್ತ್ರನದ ಪ್ರಗತಿಗೆ ಶಾಂತಿ ಅವಶ್ಯವಿದೆ. ಆದರೆ ಕಾಶ್ಮೀರವನ್ನು ಅಸ್ತ್ರತ್ಯಕ್ಕೆ ಅತ್ಯಗತ್ಯವೆಂದು ಕಾಶ್ಮೀರದ ಜನರಿಗೆ ತಮ್ಮ ಅಭಿಪ್ರಾಯ ತಿಳಿಸುವ ಸ್ವಾತಂತ್ರ್ಯ ದೊರೆಯಬೇಕು."

ಸಮಾನತೆಯ ಮತ್ತು ಸ್ವಾವಲಂಬನದ ಜೀವನ

(ವರ್ಧಾದಲ್ಲಿ ೧೦-೭-೫೦ನೇ ದಿನ ಶ್ರೀ. ವಿನೋಬಾ ಇವರು ಗೋಸೇವಾ ಸಂಘದ ಸದಸ್ಯರನ್ನುದ್ದೇಶಿಸಿ ವ್ಯಕ್ತಪಡಿಸಿದ ಅಭಿಪ್ರಾಯದ ಸಾರಾ)

ಬಾಪೂನ ನಿಧನದ ಅನಂತರ ನಮ್ಮ ಸಂಸ್ಥೆಗಳು ತಮ್ಮ ಕಾರ್ಯಕ್ರಮಗಳನ್ನು ಮತ್ತು ಜೀವನ ವರಿಸ್ಥಿತಿಯನ್ನು ಸಮಾಜದ ವರಿಸ್ಥಿತಿಗೆ ಹೋಲಿಸಿ ನೋಡಹತ್ತಿರುವವು. ವ್ಯತಿಪಾದಿಸುತ್ತಿರುವ ಜೀವನ ಮಾರ್ಗವು ನಾವು ಸಮಾಜದಲ್ಲಿ ವ್ಯಸಾರವಾಗಿರಬಿದ್ದರೆ ಆ ಬಗ್ಗೆ ಎರಡನೆಯವರನ್ನು ದೋಷಕ್ಕೆ ಗುರಿಪಡಿಸಲು ಅವಕಾಶವಿಲ್ಲ. ಅದಕ್ಕೆಲ್ಲ ನಾವೇ ದೋಷಿಗಳು. ನಾವೇ ನಮ್ಮ ತತ್ವಗಳನ್ನು ಆಚರಣೆಯಲ್ಲಿ ತರುತ್ತಿರುವುದಿಲ್ಲ. ಅವರಿಗ್ರಹವು ನಮ್ಮ ಧ್ಯೇಯಗಳಲ್ಲೊಂದೆಂದು ನಾವು ಇಟ್ಟುಕೊಂಡಿದ್ದೇವೆ. ಆದರೆ ನಾವೆಂದೂ ಅದರಂತೆ ಆಚರಿಸುವುದಿಲ್ಲ. ಗಾಂಧೀವಾದವನ್ನು ಹೇಗೆ ಕಾರ್ಯಾಚರಣೆಯಲ್ಲಿ ತರತಕ್ಕದೆಂದು ಮೇಲಿಂದ ಮೇಲೆ ನನ್ನನ್ನು ಕೇಳಲಾಗುತ್ತದೆ. ಮೊತ್ತ ಮೊದಲು ನಮ್ಮ ಸಂಸ್ಥೆಗಳಲ್ಲಿಮೆ ಆ ತತ್ವಗಳನ್ನು ಆಚರಣೆಯಲ್ಲಿ ತಂದ ಹೊರತು ನಾವು ಗಾಂಧೀವಾದವನ್ನು ವಿವರಿಸಲಾರೆವು. ನಮ್ಮ ಆಶ್ರಮಗಳಲ್ಲಿ ಅವನ್ನು ಕಾರ್ಯರೂಪದಲ್ಲಿ ತಂದಬಲಿಕವೇ ಸಮಾಜದಲ್ಲಿ ಅವುಗಳ ಪ್ರಸಾರ ಮಾಡಬಹುದು.

ನಮ್ಮ ಎಲ್ಲ ಸಂಸ್ಥೆಗಳನ್ನು ಕೂಡಿಸಿದ್ದಾದರೆ ಒಟ್ಟಾರೆ ಸುಮಾರು ಒಂದು ಸಾವಿರ ಕಾರ್ಯಕರ್ತರಾಗುವರು. ನಾವೊಂದು ಹಳ್ಳಿಯೆಂದೇ ಭಾವಿಸಿಕೊಂಡು ಏಕೆ ಕಾರ್ಯವ್ಯಾರಂಭಿಸಬಾರದು? ಪೇಟೆಯ ಧಾರಣೆಗಳನ್ನು ಲಕ್ಷಿಸದೆ, ನಾವು ನಮಗೆ ಬೇಕಾದ ಎಲ್ಲ ವಸ್ತುಗಳನ್ನು ಉತ್ಪಾದಿಸಲಿಕ್ಕೆ ಬೇಕು. ಎಲ್ಲ ವಸ್ತುಗಳನ್ನೂ ನಾವೇ ಉತ್ಪಾದಿಸಿದ್ದಾದರೆ ಅಥವಾ ವಸ್ತುಗಳ ಬೆಲೆಯನ್ನು ನಾವು ಗೊತ್ತುಪಡಿಸಬಲ್ಲೆವು. ವರಸ್ಪರ ಸಂಬಂಧವಾದ ಆ ಧಾರಣೆಗಳು ಒಂದೇ ಮಟ್ಟದಲ್ಲಿ ಇರಿಯಬಲ್ಲವು. ಉತ್ಪಾದನೆಯು ಕಡಿಮೆಯಾದರೆ ನಾವು ಸಿದಾಪದ್ಧತಿಯನ್ನು ಅನುಸರಿಸುವಾ. ಆದರೆ ಧಾರಣೆಗಳಲ್ಲಿ ಯಾವುದೇ ಬಗೆಯ ಬದಲಾವಣೆಯಾಗಲಾರದು. ಆರೋಗ್ಯದ ದೃಷ್ಟಿಯಿಂದ ಸಮಾನ ಹಂಚುವಿಕೆಯಲ್ಲಿ ಏನಾದರೂ ವ್ಯತ್ಯಾಸ ಮಾಡುವದವಶ್ಯವೆನಿಸಿದರೆ ನಾವು ಹಾಗೆ ಮಾಡುವಾ—ಉತ್ಪಾದನೆಯು ಕಡಿಮೆಯಾದರೆ ಬೆಲೆಯು ಏರಿ ಹೆಚ್ಚು ಹಣವಿದ್ದವರಷ್ಟೇ ಆ ಸರಕನ್ನು ಕೊಳ್ಳಲು ಸಮರ್ಥರಾಗುವಂಥ ಸದ್ಯದ ಪದ್ಧತಿಯಿಂದ ಯಾರಿಗೆ ಹೆಚ್ಚು ಅಧ್ಯಶ್ಯವಿರುವದೋ ಅಂಥವರಿಗೇ ಆ ವಸ್ತು ಸಿಕ್ಕದಂತಾಗುವದು. ಈ ಪ್ರಯೋಗವನ್ನು ನಾವು ಮೊದಲು ನಮ್ಮ ಮೇಲೆಯೇ ಮಾಡಿಕೊಳ್ಳಬೇಕು. ಅವರಿಗ್ರಹ ಮತ್ತು ಸಂಪೂರ್ಣ ಸ್ವಾವಲಂಬನ ಜೀವನದ ಜತೆಯಲ್ಲಿಯೇ ಮೂರನೆಯ ಆವಶ್ಯಕತೆಯೆಂದರೆ ಸಮಾನತೆಯ ಪ್ರತಿಯೊಂದು ವ್ಯಕ್ತಿಗೂ ಸಮಾನವಾದ ರಕ್ಷಣೆ ಮತ್ತು ಶಿಕ್ಷಣ ಸಿಕ್ಕತಕ್ಕದ್ದು. ಆದರೆ ನಮ್ಮ ಎಲ್ಲ ಚಟುವಟಿಕೆಗಳು ಹಣದ ಮೂಢ್ಯನುದಿಂದಲೆ ನಡೆವದ್ದರಿಂದ ನಮ್ಮಲ್ಲಿ ಹಣದ ಅಸಮಾನತೆಯು ಬಹಳವಿದೆ. ೧೫-೨೦ ಜನರ ಗುಂಪೊಂದು ಈ ಬಗೆಯ ವ್ಯಯೋಗ ಮಾಡಿ ನೋಡಲು ಸ್ವವರ್ತಿಸಿದರೆ ಅದು ತವಸ್ಸನ್ನಾಚರಿಸುತಿರುವದೆಂದಾಗಲಿ ಹುಚ್ಚೆಂದಾಗಲಿ ಅದನ್ನು ಕರೆಯುವದುಂಟು. ನಾವು ನಮ್ಮ ಪ್ರಯೋಗದಲ್ಲಿ ಯಶಸ್ವಿಗಳಾದರೆ ತವಸ್ವಿಗಳೆಂದು ನಮ್ಮನ್ನು ಪೂಜಿಸುವರು. ಅಯಶಸ್ವಿಗಳಾದರೆ ನೂರ್ಮರೆಂದು ಕರೆಯುವರು. ಆದುದರಿಂದ ಏನಾದರೂ ಫಲನಿಷ್ಪತ್ತಿಯಾಗಬೇಕೆಂದು ನಮ್ಮ ಇಚ್ಛೆಯಿದ್ದರೆ, ದೊಡ್ಡ ಪ್ರಮಾಣದಲ್ಲಿ ನಾವು ಇದರ ಪ್ರಯೋಗ ಮಾಡಬೇಕಲ್ಲದೆ ನಮ್ಮ ಇಡೀ ಜೀವನಕ್ಕೆ ಇದು ಆನ್ವಯಿಸುವಂತೆ ಯೋಜಿಸಬೇಕು.

(ಗೋಸೇವಾ ಸಂಘದ ಎಲ್ಲ ಶಾಖೆಗಳ ಲೆಕ್ಕ ವತ್ರವನ್ನು ನೋಡಿ ಶ್ರೀ ವಿನೋಬಾ ಇವರು ಹೀಗೆ ಹೇಳಿದರು.)

ಸಮಗ್ರ ಸೇವೆಯಿಂದ ನಮ್ಮ ಮುಖ ಚಟುವಟಿಕೆಯಾಗಿರುವ ಗೋಸೇವೆಗೆ ಸ ಬಂಧಿಸಿದ ಸಮಗ್ರ ಜೀವನದ ವ್ಯತಕ ಯನ್ನು ನಾವು ತಿಳಿದುಕೊಳ್ಳಲಿಕ್ಕೆ ಬೇಕು

(ಹಿಂದಿಯಿಂದ ಅನುವಾದಿಸಲ್ಪಟ್ಟಿದೆ)

ದ. ಕ. ಜಿಲ್ಲೆಯಲ್ಲಿ ನಲ್ಲಿಯ ಬಾವಿಗಳು

ಮದ್ರಾಸು ಸರಕಾರವು ನೀರಾಭರಿಯ ಬಗ್ಗೆ ನಲ್ಲಿಯ ಬಾವಿಗಳನ್ನು ಪ್ರಾಂಕ್ಯದಲ್ಲಿ ಜಿಲ್ಲೆಗಳಲ್ಲಿ ತೋಡಿಸುವ ಯೋಜನೆಯೊಂದನ್ನು ತಯಾರಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯು ಈ ವೈಕಿ ಒಂದಾಗಿರುತ್ತದೆ. ಹೀಗಾಗಿ ಜಿಲ್ಲೆಯ ಜಿಲ್ಲಾ ಕೈಗಾರಿಕಾ ಅಧಿಕಾರಿ, ತಹಸಿಲ್ದಾರರು ಮತ್ತು ಡಿ। ತಹಸಿಲ್ದಾರರು ಇವರು ಜಿಲ್ಲೆಯಲ್ಲಿ ಎಲ್ಲೆಲ್ಲಿ ಇಂತಿಂಥ ಬಾವಿಗಳನ್ನು ತೋಡಲು ಅವಕಾಶವಿದೆ ಎಂದು ಸೂಚಿಸಬೇಕು. ಜನರು ಕೂಡಾ ತಮ್ಮತಮ್ಮ ಭಾಗಗಳಲ್ಲಿ ಎಲ್ಲೆಲ್ಲಿ ನೀರಾಶ್ರಯವಿದ್ದ ಸ್ಥಳ ಗಳಿವೆ ಎಂಬುದನ್ನು ಅಲ್ಲಲ್ಲಿಯ ತಹಸಿಲ್ದಾರ ರಿಗೆ ತಹಸಿಲ್ದಾರರಿಗೆ ತಿಳಿಸಬೇಕೆಂಬುದಾಗಿ ಜಿಲ್ಲಾ ಕಲೆಕ್ಟರರು ಕೇಳಿಕೊಳ್ಳುತ್ತಾರೆ.

ಗಂಜಾಂ-ಜಿಗರ ಬಾವಿ ತೋಡುವ ಸಹಾಯ ಯೋಜನೆಯಂತೆ ಈ ಜಿಲ್ಲೆಯಲ್ಲಿ ಇಪ್ಪತ್ತರ ವರೆಗೆ ರೂ. ೨೯,೧೦೦/-ಸಹಾಯ ಧನವಾಗಿ ಈ ವರ್ಷದಲ್ಲಿ ವಿತರಣೆ ಮಾಡಲಾಗಿದೆ. ಈ ವೈಕಿ ಪುತ್ತೂರು ತಾಲೂಕು ಇಡೀ ಗ್ರಾಮದ ಶ್ರೀ. ಕೆ. ಶಂಕರ ಭಟ್ಟರಿಗೆ ಆ ಗ್ರಾಮದ ಒಂದು ಹೆಳೇಕೆರೆ ರಿಪೇರಿಯ ಬಗ್ಗೆ ರೂ. ೧೦೦೦/-ಕೊಡಲಾಗಿತ್ತು. ಈ ಜಿಲ್ಲೆಗೆ ಈ ಮೊದಲು ಪ್ರತ್ಯೇಕಿಸಲಾಗಿದ್ದ ರೂ. ೭೫,೦೦೦/-ವಲ್ಲದೆ ಇದೀಗ ಈ ಬಗ್ಗೆ ಇನ್ನೂ ರೂ. ೩೬,೦೦೦/-ನ್ನು ಮಂಜೂರು ಮಾಡುವಂತೆ ಸರಕಾರಕ್ಕೆ ಬರೆದುಕೊಂಡಿದ್ದೇವೆ. ಅರ್ಜಿಗಳ ತನಿಖೆ ಮತ್ತು ಸಹಾಯ ಧನದ ವಿತರಣಾ ಕಾರ್ಯವು ಬಹು ಶ್ರದ್ಧೆಯಿಂದ ನಡೆಯುತ್ತಿದೆ.

ಕೃಷಿ ವಿಧಾನದಲ್ಲಿ ನವೀನ ಮತ್ತು ಸುಧಾರಿತ ಕ್ರಮಗಳ ಅನುಸರಣೆಯ ಬಗ್ಗೆ ಮಾಹಿತಿ ಕೊಡುವೇ ಗ್ರಾಮ ಉದ್ಯೋಗಸ್ಥರಿಗೂ ರೈತರಿಗೂ ಒಂದೊಂದು ವಾರದ ತರಬೇತಿ ಯನ್ನು ಕೃಷಿ ಇಲಾಖಾ ಡೆಮೊನ್ಸ್ಟ್ರೇಟರು ಗಳಿಂದ ಬೈದೂರು, ಪುತ್ತೂರು, ಮುಳಿಯಾರು, ಬಂಟ್ವಾಳ, ವಿಟ್ಲ, ಕಾಸರಗೋಡು, ಕೋಟೆಕಾರು, ಬೆಳ್ತಂಗಡಿ, ಸುರತ್ಕಲ್, ಮುಲ್ಕಿ, ಗುರುಪುರ, ಕುಂದಾಪುರ, ಉಪ್ಪಿನಂಗಡಿ ಕೇಂದ್ರಗಳಲ್ಲಿ ಈಗಾಗಲೇ ಕೊಡಲಾಗಿತ್ತು. ಈ ತರಬೇತಿ ಮುಗಿದು ಸಮರ್ಪಕವಾಗಿ ಪರೀಕ್ಷೆ ಕೊಟ್ಟವರಿಗೆ ಪ್ರಶಸ್ತಿ ಪತ್ರಗಳನ್ನು ಕೊಡಲಾಗಿದೆ.

ಆಹಾರ ಧಾನ್ಯಗಳ ಬೆಳೆಯು ಸೊಪ್ಪು ಮತ್ತು ಸೊಪ್ಪು ಗೊಬ್ಬರಗಳನ್ನು ಉಪಯೋಗಿಸಿದಲ್ಲಿ ಹೆಚ್ಚು ಫಸಲು ಕೊಡುತ್ತದೆ ಎಂಬುದು ಸರ್ವರಿಗೂ ತಿಳಿದ ವಿಷಯ. ಆದ್ದರಿಂದ ಹೆಚ್ಚು ಆಹಾರ ಬೆಳೆಸಬೇಕಾದ ಈಗಿನ ಪರಿಸ್ಥಿತಿಯಲ್ಲಿ ರೈತರೆಲ್ಲಾ ಆದಷ್ಟು ಹಸುರು ಎಲೆಯ ಗಿಡಗಳನ್ನು ಬೆಳೆಸುವುದೂ ಅವಶ್ಯ. ಹಾಗೆಯೇ ಕಂಪೋಸ್ಟು ಗೊಬ್ಬರ ತಯಾರಿಸುವುದು. ಮತ್ತು ಹಟ್ಟಿಗಳಲ್ಲಿ ತಯಾರಿಸುವ ಸೊಪ್ಪು ಗೊಬ್ಬರದ ನಾಶವನ್ನು ತಡೆಗಟ್ಟಿಕೊಳ್ಳುವ ವಿಷಯ ಸ್ವಲ್ಪ ವಿಶೇಷ ಲಕ್ಷ್ಯ ಕೊಡುವುದೂ ಅವಶ್ಯವಿದೆ ಎಂದೂ ಕಲೆಕ್ಟರು ತಿಳಿಸುತ್ತಾರೆ.

ಗಾಡಿಪಟ್ಟಿಗಳ ಕಳ್ಳಸಂತೆ

ಮೊಕದ್ದಮೆಗಳನ್ನು ವಿಚಾರಿಸುವುದ ಕ್ಕಾಗಿ ಈ ಜಿಲ್ಲೆಗೊಂದು ವಿಶೇಷ ನ್ಯಾಯಾಲಯವು ನೇಮಿಸಲ್ಪಟ್ಟಿದೆ. ಶ್ರೀ. ಬಿ. ನಾರಾಯಣ ಭಟ್ಟೆಯವರು ಈ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಂಡಿದ್ದಾರೆ. ಶ್ರೀ. ಬಿ. ಗಂಗಾಧರ ದಾಸರು ಈ ನ್ಯಾಯಾಲಯದ ಸರಕಾರಿ ವಕೀಲರಾಗಿದ್ದಾರೆ.

ಈ ನ್ಯಾಯಾಲಯದ ಮುಂದೆ ೨೬ ಮೊಕದ್ದಮೆಗಳು ಬಂದಿವೆ. ಅವುಗಳಲ್ಲಿ ಪುತ್ತೂರಿನ ಕೃಷಿಖಾತೆಯ (ಎಗ್ರಿಕಲ್ಚರಲ್ ಡಿಪೊ) ಆಫೀಸಿನಲ್ಲಾದ ಗಾಡಿ ಪಟ್ಟಿಗಳ ಕಳ್ಳಸಂತೆಯ ಮೊಕದ್ದಮೆಯೇ ಮೊದಲಿನದಾಗಿದೆ. ಇವರಲ್ಲಿ ೩೦ ಜನರ ಸಾಕ್ಷ್ಯಗಳಿವೆ; ಸುಮಾರು ೩೦ ಪುರಾವೆ ಪತ್ರಗಳೂ ಇವೆ. ಹೀಗಾಗಿ ಇದೊಂದು ಕಳ್ಳ ಸಂತೆಯ ವಿಶೇಷ ಮೊಕದ್ದಮೆಯೇ ಆಗಿದೆ.

ರಾಜಕೀಯ ಸಂತ್ರಸ್ತರಿಗೆ ಭೂದಾನಃ ಜಿಲ್ಲಾ ರಾಜಕೀಯ ಸಂತ್ರಸ್ತರಿಗೆ ಭೂದಾನ ನೀಡುವ ಸಮಿತಿಯ ಸಭೆಯು ಕಳೆದ ತಾ. ೩೧ರಂದು ಸೇರಿದಾಗ ಹಲವಾರು ಅರ್ಜಿಗಳನ್ನು ಪರಿಶೀಲಿಸಿ ಭೂದಾನ ಮಾಡಲಾಯಿತು. ೧೬ ಜನರಿಗೆ ಸುಮಾರು ೧೫೦ ಎಕ್ರೆಗಳಷ್ಟು ಭೂದಾನ ಮಾಡಲಾಗಿದೆ. ಈ ವರೆಗೆ ಬಂದ ಅರ್ಜಿಗಳಲ್ಲಿ ಹಲವನ್ನು ಅನಾನತು ಇಡಲಾಗಿದೆ. ಹೀಗೆ ಪ್ರತ್ಯೇಕಿಸಿದಲು ಮುಖ್ಯವಾಗಿ ಸಂತ್ರಸ್ತರು ಜೈಲಿಗೆ ಹೋದ ಪುರುವೆಗಳಲ್ಲಿ ಭಿದುವುದೂ ಅರಿಸಿದ ಸ್ಥಳಗಳು ಅಕ್ಷೇಪಾರ್ಹವಾದವುಗಳೂ ಆಗಿರುವುದೇ ಕಾರಣವಾಗಿದೆ. ಅವುಗಳಲ್ಲೂ ಕೆಲವನ್ನು ಪುನಃ ಪರಿಶೀಲಿಸುವ ನಿರ್ಣಯ ಮಾಡಲ್ಪಟ್ಟಿದೆ. ಇಂದಿನ ಸಭೆಗೆ ಸಮಿತಿ ಸದಸ್ಯರಾದ ಶ್ರೀಯುತರು ಎಚ್. ನಾರಾಯಣ ರಾವ್, ಕೆ. ಕೆ. ಶೆಟ್ಟಿ ಮತ್ತು ಕೆ. ತಿಮ್ಮಪ್ಪ ಶೆಟ್ಟಿ ಇವರು ಹಾಜರಿದ್ದರು.

ಆ ಮೇಲೆ ದಿನಾಂಕ ೭ರಲ್ಲಿ ಜರಗಿದ ಈ ಸಮಿತಿಯ ಸಭೆಯಲ್ಲಿ ೪೬ ಮಂದಿ ರಾಜಕೀಯ ಸಂತ್ರಸ್ತರಿಗೆ ಭೂದಾನ ಮಾಡಲಾಯಿತು. ಇವರಿಗೆ ಸುಮಾರು ೪೬೦ ಎಕ್ರೆಗಳಷ್ಟು ಭೂಮಿ ಕೊಡಲಾಗಿದೆ.

ಉಡುಪಿ

ಕರ್ನಾಟಕ ಸಂಘದ ಮಹಾಸಭೆಯು ಕಳೆದ ಆದಿತ್ಯವಾರ ಸಂಜೆ ಮೋದರ್ನ್ ಹೈ ಎ. ಶಾಲೆಯಲ್ಲಿ ಶ್ರೀ. ಕು. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ, ಲೆಕ್ಕಪತ್ರಗಳ ಪರಿಶೀಲನೆಯಾದ ಬಳಿಕ ಕಾರ್ಯಕಾರಿ ಸಮಿತಿಯ ಸದಸ್ಯರ ಚುನಾವಣೆ ನಡೆಯಿತು. ನೃದ್ಧಾಸ್ಯದ ಸಮಿತ್ ವಿಶಾಂತಿ ಯನ್ನಪೇಕ್ಷಿಸಿದೆ ಸಂಘದ ಅಧ್ಯಕ್ಷ ಉಪಾಧ್ಯಕ್ಷರು ಶ್ರೀಗಳಾದ ಎನ್. ರಾಜಗೋಪಾಲಕೃಷ್ಣ ರಾವ್ ಮತ್ತು ಪಿ. ಎನ್. ಪ್ರಭುಗಳು ಈ, ತನಕ ಸಂಘಕ್ಕೆ ಸಲ್ಲಿಸಿದ ಸೇವೆಗಾಗಿ ಅವರನ್ನು ಅಭಿನಂದಿಸುವ ನಿರ್ಣಯ ವಾಯಿತು. ದಿನಾಂಕ ೭ರಲ್ಲಿ ನೇರಿ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಡಾ। ಕೆ. ಎಲ್. ಐತಾಳರು ಅಧ್ಯಕ್ಷರಾಗಿಯೂ, ಶ್ರೀ. ಗಳಾದ ಪುಂಡಲೀಕ ಶೆಣೈಯರು ಉಪಾಧ್ಯಕ್ಷರಾಗಿಯೂ, ಕು. ಶಿ. ಹರಿದಾಸ ಭಟ್ಟರು ಪ್ರಧಾನ ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು.

ತಮ್ಮ ದೃಢ ವಿಶ್ವಾಸ ಪಾತ್ರ

ಕೆನರಾ ಬ್ಯಾಂಕ್ ಲಿಮಿಟೆಡ್

ಸ್ಥಾಪಿತ 1906

ಐವತ್ತು ಸಹಸ್ರಕ್ಕೆ ಕುಟುಂಬದ ಬ್ಯಾಂಕರರು

ಎಂಟು ಕೋಟಿಗೂ ಮಿಗಿಲಾದ ನಿಧಿಗಳು.



ಈ ಆಶ್ಚರ್ಯಕರ

ಪೆಪ್ಸ್

ಕೆಮ್ಮು, ನೆಗಡಿ, ಕಂಠಬೇನೆ ಮತ್ತು ಇನ್‌ಫ್ಲುಯೆಂಜಾವನ್ನು ಗುಣಪಡಿಸುತ್ತದೆ.

ಪೆಪ್ಸು ಮಾತ್ರೆಗಳು ನಿಮ್ಮ ಬಾಯಲ್ಲಿ ಕರಗುತ್ತಿರುವಾಗ ಆದರಿಂದ ಹೊರಡುವ ಔಷಧಿಯು ಎಸೆನು ಶ್ಯಾಸಕೋಶಗಳನ್ನು ಸೇರಿ ರೋಗಾಣುಗಳನ್ನು ನಾಶಪಡಿಸುತ್ತದೆ. ಕಂಠಬೇನೆಯನ್ನು ಸಮಾಧಾನಪಡಿಸುತ್ತದೆ. ಗುಣಪಡಿಸುತ್ತದೆ. ಕೆಮ್ಮನ್ನು ಇಡೀ ಶ್ವಾಸಕೋಶಗಳನ್ನೇ ಸರಿಪಡಿಸುತ್ತದೆ. ಸೇವಿಸಲು ರುಚಿಕರ.

PEPS

ವಿಷಹಾರಿ ಶ್ವಾಸನೀಯ ಮಾತ್ರೆಗಳು. ಕೆಮ್ಮು, ಶೀತ, ಧುಂಡಾದ ಎಲಾ ಶ್ವಾಸಕೋಶ ಬಾಧೆಗಳಿಗೆ ರಾಮಬಾಣ

ಪ್ರಿಪೆಂಟರು: ದಾದಾ ಎಂಡ್ ಸನ್, ಪಿ. ಟಿ. ಮದ್ರಾಸು

ಪತ್ರಿಕೋದ್ಯಮ ಶಿಕ್ಷಣದ ವ್ಯವಸ್ಥೆ

ಮಾನ್ಯ ದಿವಾಕರರ ಅಭಿಪ್ರಾಯ

ಕೇಂದ್ರ ಸರಕಾರದ ಬಾನುಲಿ ಮತ್ತು ಸುದ್ದಿ ಶಾಖೆಯ ಮಂತ್ರಿಗಳಾದ ಮಾನ್ಯ ಶ್ರೀ. ದಿವಾಕರ ರಂಗರಾಯರ ಗೌರವಾರ್ಥ ನವಯುಗ ದಿನ ಪ್ರತಿಕೆಯ ಸಂಪಾದಕರಾದ ಶ್ರೀ. ಕೆ. ಧ. ನೇಶ್ವಿಯವರು ಇಂದು ಸಂಜೆ ಆ ಪತ್ರಿಕೆಯ ಕಚೇರಿಯಲ್ಲಿ ಅಲ್ಪೋಪಹಾರವನ್ನು ಏರ್ಪಡಿಸಿದ್ದರು. ಈ ಸಮಾರಂಭಕ್ಕೆ ಉಳಿದೆರಡು ದಿನ ಪತ್ರಿಕೆಗಳ ಸಂಪಾದಕರು ಬಂದಿದ್ದರಲ್ಲದೆ ಶ್ರೀಗಳಾದ ಕೆ. ಬಿ. ದುಂಡೂರ ಎಂ. ಎಲ್. ಎ. ಹಾಗು ಗುಜ್ಜೆಪ್ಪ ಹಳ್ಳಿಕೇರಿಯವರು ಹಾಜರಿದ್ದರು.

ಶ್ರೀ. ನೇಶ್ವಿಯವರು ಮಾನ್ಯ ದಿವಾಕರರ ಸ್ವಾಗತ ಬಯಸುತ್ತ ಅವರನ್ನು ಬರಮಾಡಿಕೊಳ್ಳಲು ಇಂದು ಅವಕಾಶ ದೊರಕಿದ್ದಕ್ಕಾಗಿ ಸಂತೋಷ ವ್ಯಕ್ತಮಾಡಿದರು.

ಮಾನ್ಯ ದಿವಾಕರರು ಮಾ ತಾಡುತ್ತ ತಾವು ಕೂಡ ಕರ್ನಾಟಕದ ಪತ್ರಿಕೋದ್ಯಮಕ್ಕೆ ಸೇರಿದವರೆಂದೂ ಇಲ್ಲಿಯ ಪತ್ರಿಕೋದ್ಯಮದ ಸ್ಥಿತಿಯು ಅನುಭವ ತಮಗಿದೆಯೆಂದೂ ಹೇಳಿದರು. ಕರ್ನಾಟಕದಲ್ಲಿ ಪತ್ರಿಕೆಗಳ ಪ್ರಚಾರ ಹೆಚ್ಚುತ್ತಿರುವುದು ಸಂತೋಷದ ಸಂಗತಿಯೆಂದೂ ಹೇಳಿದರು.

"ಪ್ರಜಾಸ್ವಭುತ್ವದ ಯುಗದಲ್ಲಿ ಭವಿಷ್ಯತ್ ಪತ್ರಿಕೆಗಳಿಗೆ ಉಜ್ವಲ ಭವಿತವ್ಯವಿದೆ. ಲೋಕ ಶಿಕ್ಷಣದ ಮಹತ್ವದ ಹೊಣೆಯು ಅವುಗಳ ಮೇಲೆ ಇರುತ್ತದೆ. ಪತ್ರಿಕೆಗಳಲ್ಲಿ ಒಂದು ಬಗೆಯ ಗಾಂಭೀರ್ಯವಿರಬೇಕು. ಅವು ತಮ್ಮ ಪ್ರತಿಷ್ಠೆಯನ್ನು ಕಾಯ್ದುಕೊಳ್ಳಬೇಕು. ಓದುಗರಿಗೆ ಹೀನವಾದ ಅಭಿರುಚಿಯನ್ನು ಒದಗಿಸುವ ಮಟ್ಟಕ್ಕೆ ಅವು ಇಳಿಯಬಾರದು. "ಸ್ಕೂಪ್" ಸುದ್ದಿಗಳ ವ್ಯಕಟನೆಯಲ್ಲಿ ಅಸಕ್ತಿಯನ್ನು ವಹಿಸಬಾರದು. ಪತ್ರಿಕೋದ್ಯಮವು ಒಂದು ಕಲೆ. ಹುಟ್ಟಾಪತ್ರಿಕೋದ್ಯಮಿಗಳಿರುವದು ವಿರಳ. ಈ ಕಲೆಯನ್ನು ಬಹು ಶ್ರಮ ವಹಿಸಿ ಶ್ರದ್ಧೆಯಿಂದ ಕಲಿಯಬೇಕಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮ ಶಿಕ್ಷಣದ ಏರ್ಪಾಡಾಗುವಂತೆ ಪ್ರಯತ್ನಿಸಬೇಕು. ಪತ್ರಿಕೋದ್ಯಮ ವ್ಯಾಸಂಗ ಗಣವನ್ನು ತೆಗೆಯಿಸಬೇಕು. ಇಂಗ್ಲಂಡ ನೊದಲಾದ ಕಡೆಗಳಲ್ಲಿ ರಾಷ್ಟ್ರೀಯ ಪತ್ರಿಕೋದ್ಯಮಿಗಳ ಸಂಘಗಳಿವೆ. ಈ ಸಂಘಗಳಲ್ಲಿ ಹೇರಳ ಹಣವನ್ನು ತೊಡಗಿಸಲಾಗಿದೆ. ಇಂಥ ಸಂಘಗಳೂ ನಮ್ಮಲ್ಲಿ ತಲೆಯೆತ್ತಬೇಕು" ಎಂದು ಹೇಳಿ ಅವರು ಎಲ್ಲ ಪತ್ರಿಕೆಗಳೂ ಸಹಕಾರದಿಂದ ನಡೆಯಬೇಕೆಂದು ಬಿನ್ನವಿಸಿದರು.

ಏಶಿಯದ ಅಭಿವೃದ್ಧಿಗಾಗಿ ಅಮೇರಿಕೆಗೆ ಆತುರ

"ಏಶಿಯಕ್ಕಾಗಿ ಸ್ವಾತಂತ್ರ್ಯ, ಸಮಾನತೆ, ಸುರಕ್ಷಿತತೆ ಹಾಗೂ ಸುಖಸಮೃದ್ಧಿಗಳನ್ನು ಅಮೇರಿಕೆಯು ಬಯಸುತ್ತಿದೆ. ಏಶಿಯದ ಜನರು ಸಂಘಟಿತರಾಗಿ ತಮ್ಮದೇ ಆದ ಸಂಸ್ಥೆಗಳ ಮೂಲಕ ಆಡಳಿತವನ್ನು ಸ್ಥಾಪಿಸಿಕೊಳ್ಳಬೇಕೆಂಬುದು ಅಮೇರಿಕೆಯ ಇಷ್ಟವಾಗಿದೆ" ಎಂದು ಅತಿ ಪ್ರಾಚ್ಯ ದೇಶಗಳ ವ್ಯವಹಾರ ಶಾಖೆಯ ಅಸಿಸ್ಟಂಟ್ ಸೆಕ್ರೆಟರಿ ದೀನ ಎಡ್‌ಬರು ನಿನ್ನೆ ದ್ವಿತೀಯ ಜಾಗತಿಕ ಯುದ್ಧದ ಅಮೇರಿಕನ್ ಪ್ರಮುಖರನ್ನುದ್ದೇಶಿಸಿ ಮಾತನಾಡುತ್ತ ಹೇಳಿದರು.

ಅವರಿನ್ನೂ ಹೇಳಿದ್ದೇನೆಂದರೆ: "ಸಂಯುಕ್ತರಾಷ್ಟ್ರ ಸಂಘದ ಸನದಿನಲ್ಲಿ ಹೇಳಿದಂಥ ತತ್ವಗಳಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ಜಾಗತಿಕ ಕಾರ್ಯಗಳೊಂದಿಗೆ ಸಮಾನ ದರ್ಜಿಯಲ್ಲಿ ವಿಶಿಷ್ಟದ ರಾಷ್ಟ್ರಗಳು ಭಾಗಿಗಳಾಗುವದು ನಮ್ಮ ಬಯಕೆಯಾಗಿದೆ.

ಸಶಸ್ತ್ರ ದಾಳಿಗಳು ಅಥವಾ ಇನ್ನಿತರ ವಿಧಾನಗಳ ಮೂಲಕ ಆಗುವ ಆಕ್ರಮಣಗಳಿಂದ ಏಶಿಯದ ರಾಷ್ಟ್ರಗಳು ಸುರಕ್ಷಿತವಾಗಿರಬೇಕು.

ಏಶಿಯದ ರಾಷ್ಟ್ರಗಳು ತಂತಮ್ಮಲ್ಲಿಯ ಜಗಳಗಳನ್ನು ಶಾಂತಿಯುತಮಾರ್ಗಗಳಿಂದ ಬಗೆಹರಿಸಿಕೊಳ್ಳಬೇಕು. ಮತ್ತು ಸಂಯುಕ್ತ ರಾಷ್ಟ್ರ ಸಂಘದ ಶಾಂತಿ ಪ್ರಯತ್ನಕ್ಕೆ ಸಂಪೂರ್ಣ ಬೆಂಬಲವೀಯಬೇಕು. ಅವುಗಳ ಉತ್ಪಾದನೆ ಹೆಚ್ಚಿ ಜೀವನ ಮಟ್ಟ ಸುಧಾರಿಸಿ ಪರಸ್ಪರ ಹಿತಕಾರಕ ರೀತಿಯಲ್ಲಿ ವ್ಯಾಪಾರ ಬೆಳೆಯಬೇಕು.

ಅವುಗಳಲ್ಲಿಯ ಸಂಸ್ಕೃತಿಗಳ ಪರಸ್ಪರ ಬಳಕೆಯಾಗಬೇಕು. ಅಮೇರಿಕೆಯ ಸರಕಾರ ಮತ್ತು ಜನತೆಯೊಂದಿಗೆ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ನೇಹ ಸಂಬಂಧ ಸ್ಥಾಪಿತವಾಗಬೇಕು.

ಏಶಿಯದ ಪ್ರಗತಿಗೆ ದಾರಿದ್ರ್ಯ, ಬಂಡಮಳದ ಕೊರತೆ, ಯಂತ್ರ ಮತ್ತು ತಾಂತ್ರಿಕ ಜ್ಞಾನದ ಅಭಾವ, ರಾಜಕೀಯ ಅನನುಭವ, ಸೈನಿಕ ದೌರ್ಬಲ್ಯ, ಪಾಶ್ಚಿಮಾತ್ಯ ರೀತಿಗಳಲ್ಲಿರುವ ಅವಿಶ್ವಾಸ ಇವೇ ಕಾರಣಗಳಾಗಿವೆ.

ಅಮೇರಿಕೆಯು ರಾಜ್ಯವಿಸ್ತರಣಾಪೇಕ್ಷೆಯಾಗಿಲ್ಲ. ವಿಶೇಷ ಸವಲತ್ತುಗಳನ್ನಾಗಲಿ, ವಿಶಿಷ್ಟ ಸ್ಥಾನವನ್ನಾಗಲಿ ಬಯಸುತ್ತಿಲ್ಲ. ನಮ್ಮ ಹಿತದೃಷ್ಟಿಯಿಂದಲೇ ನಾವು ಕೆಲಸ ಮಾಡುವೆವು. ಆದರೆ ನಮ್ಮ ಹಿತವು ಸಂಯುಕ್ತ ರಾಷ್ಟ್ರ ಸಂಘದ ಸನದಿನಂತೆ ನಡೆಯುವದರಲ್ಲಿ ಮತ್ತು ಇತರರೊಂದಿಗೆ ಸಹಕರಿಸುವದರಲ್ಲಿ ಇದೆಯೆಂಬುದನ್ನು ನಾವು ಕಂಡುಕೊಂಡಿದ್ದೇವೆ.

ಫೊರ್ಮೊಸಾ ಪ್ರಶ್ನೆ

ಫೊರ್ಮೊಸಾ ಮತ್ತು ಚೀನಗಳಲ್ಲಿರುವ ಜಗಳವು ಕೊನೆಗಾಣಬೇಕೆಂದು ಅಮೇರಿಕ ಬಯಸುತ್ತಿರುವದು. ಅಂತರ್ ರಾಷ್ಟ್ರೀಯ ಕ್ರಮದಿಂದ ಫೊರ್ಮೊಸಾ ಪ್ರಶ್ನೆ ಬಗೆಹರಿಸಲು ಅದು ಬೆಂಬಲವೀಯುವದು. ಚೀನದಲ್ಲಿ ಕಮ್ಯುನಿಸ್ಟರ ಸಂಚಿನ ಮೂಲಕ ಆಕ್ರಮಣ ಕೃತಿಗಳು ಜರುಗಿದಲ್ಲಿ ನಾವು ಅವುಗಳ ಬಗ್ಗೆ ಕೂಡಲವಾಗಿ ವಿಚಾರ ಮಾಡುವೆವಲ್ಲದೆ ಸೋವಿಯೆಟ್ ಸಾಮ್ರಾಜ್ಯವಾದದ ಏಳ್ಗೆಗಾಗಿ ಚೀನದ ಹಾನಿಯಾಗುವದನ್ನು ಸಹಿಸೆವು."

ಮುದುಕ-ಮುದುಕಿಯರ ಪ್ರಥಮ ವಿವಾಹ!

ಬ್ರಹ್ಮಚಾರಿ ಸೇನಾಪತಿಗಳೆಂದು ಹೆಸರಾಗಿದ್ದ ಕೆಂಕಿಚಿ ಯುವೆದಾ ಎಂಬ ಜಪಾನಿನ ಹಿಂದಿನ ಸೈನ್ಯಾಧಿಕಾರಿಗಳು ತಮ್ಮ ಒಳನೀ ವಯಸ್ಸಿನಲ್ಲಿ ಶಪಥ ವರುಷದ ವಧು ಶಿನ್ನು ಮದುವೆಯಾದರು. ಈರ್ವರಿಗೂ ಇದು ಮೊದಲನೆಯ ಮದುವೆ. ಪ್ರಣಯವು ಕೆಲ ವರುಷಗಳ ಹಿಂದೆಯೇ ಪ್ರಾರಂಭವಾಗಿತ್ತು.

ತಾವೆಂದೂ ಹೆಂಗಸನ್ನು ದ್ವೇಷಿಸುತ್ತಿದ್ದಿಲ್ಲವೆಂದೂ ಯೋಗ್ಯ ಜೊತೆಗಾರರು ದೊರೆಯದ್ದರಿಂದ ಮಾತ್ರ ವಿವಾಹವಾಗಿರಲಿಲ್ಲವೆಂದೂ ಯುವೆದಾರವರು ಒಂದು ಸಂದರ್ಶನದಲ್ಲಿ ಹೇಳಿದರು.

ಹೃದಯ ಶಸ್ತ್ರ ಚಿಕಿತ್ಸೆ

ಈ ದೇಶದಲ್ಲಿ ಈ ವರೆಗೆ ಹೃದಯ ಕವಲದ ಮೇಲೆ ಶಸ್ತ್ರಚಿಕಿತ್ಸೆಯಾಗಿರಲಿಲ್ಲ. ಮೊತ್ತ ಮೊದಲಿನ ಈ ಚಿಕಿತ್ಸೆಯು ತಾ. ೧೫ರಂದು ಮುಂಬಯಿಯ ಜೆ. ಜೆ. ಆಸ್ಪತ್ರೆಯಲ್ಲಿ ಯಶಸ್ವಿಯಾಗಿ ನಡೆಯಿತು.

ಸಹಾರ ಮರುಭೂಮಿಗೆ ನೀರಿನ ಸರಬರಾಯಿ

ಸಹಾರಾ ಮರುಭೂಮಿಯಲ್ಲಿ ದೊಡ್ಡ ಅಣೆಕಟ್ಟೊಂದನ್ನು ರಚಿಸಿ, ನೀರಿನ ಸರಬರಾಯಿ ಒದಗಿಸುವ ಯೋಜನೆಯೊಂದನ್ನು ಅಮೇರಿಕನ್ ಇಂಜನಿಯರಿಂಗ್ ಸಂಸ್ಥೆಗೆ ಕೊಡನೆ ಚರ್ಚಿಸಲಾಗಿದೆ. ಈಗ ಕೇವಲ ಕಲ್ಪನೆಯಾಗಿರುವ ಈ ಯೋಜನೆಯು ಕಾರ್ಯರೂಪಕ್ಕೆ ಬಂತೆಂದರೆ ಟೈಗ್ರಿಸ್ ಮತ್ತು ಯುಫ್ರೆಟಿಸ್ ನದಿಗಳ ಕಣಿವೆಯಲ್ಲಿರುವ ಮರುಭೂಮಿಗಳು ಸ್ವರ್ಗೋದ್ಯಾನಗಳಾಗುವುವು. ಈ ಯೋಜನೆಯು ಸುಮಾರು ೪೦,೦೦೦,೦೦೦ ಜನರಿಗೆ ಜೀವನ ಒದಗಿಸಬಹುದೆಂದೂ ಅಂದಾಜು ಮಾಡಲಾಗಿದೆ.

ವಿಶ್ವವನ್ನೇ ಗೆಲ್ಲುವ ರಷ್ಯದ ಯೋಜನೆ

ಅಮೇರಿಕದ ಸಂಯುಕ್ತ ಸಂಸ್ಥಾನಗಳ ರಾಷ್ಟ್ರೀಯ ಭದ್ರತಾ ಸಮಿತಿಯ ಅಧ್ಯಕ್ಷರಾದ ಡಬ್ಲ್ಯು. ಸ್ಟುವರ್ಟ್ ಸಿಮಿಂಗ್ಟನ್ನರು ಚಿಕಾಗೋದಲ್ಲಿನ ಮಜೂರ ಸಭೆಯೊಂದರಲ್ಲಿ ಮಾತನಾಡುತ್ತ ರಷ್ಯವು ವಿಶ್ವವನ್ನೇ ಗೆಲ್ಲುವ ತನ್ನ ಯೋಜನೆಯಂತೆ ಕಾರ್ಯವನ್ನು ಮುಂದೊತ್ತಿದೆಯೆಂದು ಸಾರಿದ್ದಾರೆ.

ಈ ಹತ್ತು ವರ್ಷಗಳಲ್ಲಿ ಜಗತ್ತಿನಲ್ಲಿ ಕಮ್ಯುನಿಸ್ಟರ ಸಂಖ್ಯೆ ೬೦೦ ಮಿಲಿಯಕ್ಕೇರಿದೆ. ಜಗತ್ತಿನ ಸ್ಥಿತಿಯೊಂದು ದೇಶದಲ್ಲೂ ಕಮ್ಯುನಿಸ್ಟ ವಕ್ಷದ ಭದ್ರವಾದ ಸಂಘಟನೆಯಿರುತ್ತದೆ. ತಕ್ಕುದಾದ ಪ್ರಚಾರದಿಂದಾಗಿ ಕಮ್ಯುನಿಸ್ಟ ಪದ್ಧತಿಯ ಸರಕಾರವೇ ಒಳಿತೆಂಬ ಭಾವನೆಯು ಜನರಲ್ಲಿ ಬೆಳೆಯುವಂತೆ ಮಾಡಿರುತ್ತಾರೆ. "ಕಮ್ಯುನಿಸಂ" ತತ್ವಕ್ಕಾಗಿ ಹೋರಾಡಲು ತರಬೇತಿ ಹೊಂದಿದ ಜನರಿಂದ ರಷ್ಯದ ಹೊರಗೂ ಬೇಕಷ್ಟು ಮಂದಿ ಇದ್ದಾರೆ. ಇದರಿಂದಾಗಿ ಪ್ರಜಾಸ್ವಭುತ್ವ ರಾಷ್ಟ್ರಗಳಲ್ಲಿ ತೊಂದರೆಯುಂಟುಮಾಡಲು ರಷ್ಯಕ್ಕೆ ವ್ಯಕ್ತೀಕ ಸೈನ್ಯವು ಬೇಡವಾಗಿದೆ ಎಂದು ಮುಂತಾಗಿ ಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

ಹಿಂದೀ ದೇಶಭಾಷೆಗಳಿಗೆ ಅಧುನಿಕ ಅಚ್ಚು ಮೊಳೆಗಳು

ರೂಪಿಸಲು ಬ್ರಿಟನಿನ ಪ್ರಯತ್ನ

ಭಾರತದ ಅನೇಕ ಭಾಷೆಗಳಲ್ಲಿಯ ಮುದ್ರಣ ಕಾರ್ಯ ಸೊಗಸಾಗುವಂತೆ ಅಚ್ಚುಮೊಳೆಗಳನ್ನು ಸುಧಾರಿಸುವ ಮಹತ್ಕಾರ್ಯವನ್ನು ಇಲ್ಲಿಯ ಬೊನೊಟಾಯಿಪ ಕಾರ್ಪೊರೇಶನ್ ಕಂಪನಿಯು ಕೈಕೊಂಡಿರುತ್ತದೆ.

ಹಿಂದೀ ಭಾಷೆಗಳ ಮುದ್ರಾಕ್ಷರ ರಚನಾ ಶಾಸ್ತ್ರವನ್ನು ಅಭ್ಯಸಿಸಿ ಕಂಪನಿಗೆ ಸಲಹೆ ಕೊಡಲು ಮೇಜರ್ ಜಾನ್ ವಿಲ್ಸನ್ನರನ್ನು ನೇಮಿಸಲಾಗಿದೆ. ವಿಲ್ಸನ್ನರು ಯುದ್ಧ ಪೂರ್ವದಲ್ಲಿ ಕಲಕತ್ತ ಸ್ಟೇಟ್ಸ್‌ಮನ್ ಪತ್ರಿಕೆಯ ಮ್ಯಾನೆಜೀನ ವಿಭಾಗದ ಸಂಪಾದಕರಿದ್ದರು. ಉತ್ತಮ ಕಲಾವಂತರೂ ಇದ್ದಾರೆ.

ವಿಲ್ಸನ್ನರು ತಮ್ಮ ಕಛೇರಿಯನ್ನು ಕಲಕತ್ತೆಯಲ್ಲಿ ಬೇಗ ಪ್ರಾರಂಭಿಸಿ ಭಾರತ ಮತ್ತು ಪಾಕಿಸ್ತಾನದ ಶಿಕ್ಷಣಿಕ ಹಾಗೂ ಸಾಹಿತ್ಯಕ ಅಧಿಕಾರಿಗಳನ್ನು ಕಂಡು ವಿಚಾರ ಮಾಡುವರು.

ಚರ್ಮ ವ್ಯಾಧಿಗಳಿಂದ ಶೀಘ್ರ ಗುಣಹೊಂದಲಿಕ್ಕೆ ತ್ವರೆಯ ಮುಲಾಮು

ವಿಷಹಾರಿ ಕುಟಿಕೂರಾ ಮುಲಾಮು ಶೀಘ್ರವಾಗಿ ಚರ್ಮ ಆರೋಗ್ಯದ ಪುನರ್ಸ್ಥಿತಿ, ಬೆಳ್ಳಿ ಪುಟ್ಟು ಎಲ್ಲಾ ಚರ್ಮ ತೊಂದರೆಗಳಬೇನೆಯನ್ನು ಡಗಿಸುತ್ತದೆ. ಚರ್ಮ ಸ್ವಚ್ಛವಿರಿಸಿ ಗುಣಪಡಿಸುತ್ತದೆ

ಕಡಿತ, ಘಾತ, ಕುರುಗಳಿಗೆ

557

ಕುಟಿಕೂರಾ ಮುಲಾಮು

CUTICURA OINTMENT

ಬಸ್ಸು ಪ್ರಯಾಣಿಕರಿಗೆ ಸೂಚನೆ

ಇತ್ತೀಚೆಗೆ ಬಸ್ಸು ಟಿಕೇಟು ಮುಂದಾಗಿ ಪಡಕೊಂಡು ಪ್ರಯಾಣ ಬೆಳಸದೆ ಆದರೆ ಮೊಬಲಗು ರಿಫಂಡ್ ಕೇಳುವಂಥಾ ಪದ್ಧತಿ ದಿನೇ ದಿನೇ ಪ್ರಬಲವಾಗಿ—ಬಂದಿದೆ. ಕಾರಣ ಕೆಲವರು ಪ್ರಯಾಣದ ಅತ್ಯಾವಶ್ಯಕತೆ ಗಮನಿಸದೆ-ಟಿಕೇಟು ಮೌಲ್ಯ ಪಾಸ್ಸು ದೊರೆಯುವುದಾಗಿ ಕೂಡಾ ತಿಳುವಳಿಕೆಯಿಂದ ಟಿಕೇಟು ಪಡಕೊಂಡು ಆ ಟಿಕೇಟಿನಲ್ಲಿ ನಮೂದಿಸಿರುವ ಸಮಯವನ್ನು ಲಕ್ಷಿಸದೆ, ಸಮಯ ತಪ್ಪಿಸಿ ಬರುವುದು. ಇದರಿಂದ ಸೀಟುಗಳು ಖಾಲಿಯಾಗಿ ಇರಗೊಡಿಸಿ ಸರ್ವಿಸು ಬಿಡಲ್ಪಟ್ಟು ಅತೀ ಅಗತ್ಯದಿಂದ ಪ್ರಯಾಣಿಸುವವರಿಗೆ ಕೂಡಾ ತೊಂದ್ರೆಗೊಳಿಸುವಂತ್ಹಾಗುತ್ತಾ ಬರುವುದಲ್ಲದೆ ಸೀಟು ಇರುತ್ತಾ ಟಿಕೇಟು ಕೊಡುವುದಿಲ್ಲವಾಗಿ ಇತ್ಯಾದಿ ಆರೋಪ ಹೊರಿಸಿ ಬರುವ ಕಂಪ್ಲೈಂಟಿಗೂ ಆಸ್ಪದ ಕೊಡುತ್ತಾರೆ. ಬಸ್ಸು ಟಿಕೇಟು, ಪ್ರಯಾಣಿಸುವವರೇ ಪಡೆದು ಅವರೇ ಉಪಯೋಗಿಸ ಬೇಕಾಗಿ ಶಿವ್ಯಾ ಇತರ ಯಾರಿಗೂ ವಿಕ್ರಯಿಸುವುದಾಗಲೀ ಪ್ರಯಾಣ ಬೆಳಸುವರೇ ಕೊಡುಪ್ರಿಣಾಗಲೀ ಕೊಡದಾಗಿ ಸರಕಾರದ ಕಠಿಣ ಕಾನೂನು ಕೂಡಾ ಇದ್ದರೂ ಪ್ರಾಪೆಂಜರರು ಇದಕ್ಕೇ ವಿರುದ್ಧವಾಗಿ ನಡೆಯುವುದು ನಮ್ಮ ತಿಳುವಳಿಕೆಗೆ ಬಂದಿದೆ. ಇನ್ನು ಮುಂದೆ ಅದಷ್ಟು ತಮ್ಮ ಪ್ರಯಾಣದ ಅವಶ್ಯಾವಶ್ಯಕತೆ ತಿಳಕೊಂಡು ಟಿಕೇಟು ಮುಂದಾಗಿ ಪಡಕೊಂಡು ಕಪ್ಪದೆ ಪ್ರಯಾಣ ಮಾಡಬೇಕಾಗಿಯೂ, ಈ ಮೇಲಿನ ಅವ್ಯವಸ್ಥೆಗೆ ಎಡೆಕೊಡಬಾರದಾಗಿ ನಾವು ವಿನಂತಿಸುವುದಲ್ಲದೆ ಪ್ರಯಾಣ ಬೆಳಸದೆ ಕರುವ ಟಿಕೇಟುಗಳ ಮೊಬಲಗನ್ನು ವಾಪ್ಸು ಕೊಡುವ ಕ್ರಮವಿಲ್ಲವೆಂಬುದನ್ನು ಮುಂದಾಗಿ ತಿಳಿಸಲು ಇಚ್ಛಿಸುತ್ತೇವೆ.

ಜ್ಯೊಂಟ್ ಮೆನೇಜರ್ಸ್,

ಮಂಗಳೂರು
10-4-49

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ, ಮಂಗಳೂರು.
ದಿ ಜ್ಯೊಂಟ್ ಬುಕ್ಕಿಂಗ್ ಆಫೀಸ್, ಕೊಡಿಯಾಲಬೈಲು.

THE CANARA BANKING CORPORATION LTD.

Estd 1906.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಹೆಡ್ ಆಫೀಸು—ಉಡುಪಿ

ಮೂಲ ಧನ:

ಅಧಿಕೃತ	ರೂ. 25,00,000
ಚಂದಾ ಆರ್ಪಿಸಿದ್ದು ಮತ್ತು ವಸೂಲಾದ್ದು	ರೂ. 20,00,000
ಕ್ಷೇಮ ನಿಧಿಗಳು	ರೂ. 10,21,747
ಒಟ್ಟು ಚಲಾವಣೆ ಭಂಡವಾಳ	ರೂ. 303,03,076

ನಿರಾಕಿಗಳ ತೃಪ್ತಿಯೇ ನಮ್ಮ ಗುರಿ!

ಸಕಲ ತರದ ಬ್ಯಾಂಕಿಂಗ್ ವಹಿವಾಟುಗಳನ್ನು ಕೈಕೊಳ್ಳಲಾಗುವುದು

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಉತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಜೇಳು ವಿಷಮುಂತಾದ ಬೇನೆ, ನಕ್ಷವಾತ, ನೊಡಿಮೆ ನೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಕಾಲಪರಿಮಿತಿ ನಿಶ್ಚಿತ ಜೀವನಕ್ಕೆ – ಕುಟುಂಬದ ಸುಖ ಸೌಕರ್ಯಕ್ಕೆ

ಅತ್ಯಮೂಲ್ಯ ಆಕರ್ಷಕ ವಿಮಾಯೋಜನೆ:

ಮಾಸವಹ್ಣ ಕೇವಲ್ಲರೂ. 55/-ರ ವಿನಿಯೋಗದಿಂದ ರೂ. 30,080/- ನಿಧಿ ನಿಮ್ಮದಾಗುವುದು

ಆಥವಾ ವರ್ಷಂಪ್ರತಿ ರೂ 1,995ರಂತೆ ಕಾಯಂ ಆಗಿ ದೊರೆಯುವ ಅಜೀವ ವರ್ಷಾಸನ (ವರ್ಷದಲ್ಲಿ ನೀವು ತೆತ್ತ ಹಣ ರೂ 660/ ಮಾತ್ರ)

ಅಥವಾ ನಿಶ್ಚಿತ ಅವಧಿಯಲ್ಲಿ ರೂ 17880/ ನಗದು

ಆಥವಾ ನಿರ್ದಿಷ್ಟ ಅವಧಿಯಲ್ಲಿ ರೂ 22,500/ ಮತ್ತು ಮರಣಾನಂತರ ಇನ್ನೊ ಮೈ ರೂ. 10,000/

ಮೇಲೆ ನಮೂದಿಸಿದುದು ಮಾತ್ರವಲ್ಲದೆ ಕ್ಲುಪ್ತ ಅವಧಿಯ ಮೊದಲು, ಯಾವ ಸಮಯದಲ್ಲೇ ಆಗಲಿ, ಮರಣ ಹೊಂದಿದರೆ, ವರ್ಷಕ್ಕೆ ರೂ 1000/ ಕ್ಕೆ ರೂ 30/ ರಂತೆ ಪಾತ್ರಯಾಗಿ ಬೋನಸ್ಸು ದೊರೆಯುವ ರೂ 10,000/ ದ ಪೂರ್ಣ ವಿಮಾಧನ್ಕಾ ಕವಚ ಸಹಾ

ವಿಮಾ ಕ್ಷೇತ್ರದಲ್ಲಿ 40 ವರ್ಷಕ್ಕೆ ಮಿಕ್ಕಿ ದುಡಿದು ಉತ್ತಮ ಅನುಭವ ಗಳಿಸಿದ ನಿಮ್ಮ ವಿಮೆಯ ಉಶ್ಯುಷ್ಟ ಸಲಹೆಗಾರರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಚೀಫ್ ಏಜೆಂಟ್ಸ್

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಬೊಂಬಾಯಿ ಲೈಫ್ ಬಿಲ್ಡಿಂಗ್, ಉಡುಪಿ (ದ ಭಾರತ)

M/s. KOCHIKAR BROTHERS, LTD.,

Chief Agents

The Bombay Life Assurance Co. Ltd.,

(Bombay Life Building Udipi S India)

With Offices at:—Mangalore, Calicut, Coimbatore, Madura, Bangalore City, Trivandrum, Madras, Bombay

ಕೆನರಾ ಬ್ಯಾಂಕು, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಸೆಗಾರಿಕೆ ಪರಿಮಿತಿಸಲ್ಪಟ್ಟು ಭಾರತದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ ೧೦,೦೦೦ ಯೂ ಅದಕ್ಕೆ ಮೇಲ್ಪಟ್ಟು ರೂ ೧,೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ

೩ ತಿಂಗಳು	ನೂರಕ್ಕೆ ವರ್ಷಕ್ಕೆ ೨।
೪ರಿಂದ ೫ ತಿಂಗಳು	,, ,, ೨॥

ರೂ ೧,೦೦೦ದ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸವಿವರವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

ಮಂಗಳೂರು ಶಾಖೆಗಳು.

(1) ಬಂದರ ರೋಡ (2) ಡೊಂಗರಕೇರಿ

ಇತರ ಶಾಖೆಗಳು.—ಕಾರ್ಕಳ, ಬಂಟ್ವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ, ಇತ್ಯಾದಿ

CANARA BANK, LIMITED.

ESTD 1906

Bhuvanendra Products Limited,

KATAPADI S. Kanara.

Pleasant shade, Free flow and quick drying have commanded good popularity

"BHUVANENDRA" REAL INK "BHUVANENDRA"

USEFUL FOR ALL FOUNTAIN PENS

"ಭುವನೇಂದ್ರ"

ರಿಯಲ್ ಶಾಯಿ

ಬರವಣಿಗೆಯ ಎಲ್ಲಾ ಕೆಲಸಗಳಿಗೂ, ಫೌಂಟನ್ ಪೆನ್ನುಗಳಿಗೂ, ಅತ್ಯುತ್ತಮ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Bharath Press Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 44] ಕಾರೀಕ 22—9—1950 [ಸಂಚಿಕೆ 38]

ನಾಸಿಕದಲ್ಲಿ ಕಾಂಗ್ರೆಸ್ ಅಧಿವೇಶನ

ಅಧ್ಯಕ್ಷ ತಾಂಡನರಿಗೆ ಪ್ರಚಂಡ ಸ್ವಾಗತ

ಗಾಳಿ ಬಲವಾಗಿ ಬೀಸುತ್ತಿದ್ದು ಮಳೆ ಜೋರಾಗಿ ಸುರಿಯುತ್ತಿದ್ದರೂ ನಾಸಿಕದ ಜನರು ಗುಂಪು ಗುಂಪಾಗಿ ಕೂಡಿ ಭಾರತ ರಾಷ್ಟ್ರೀಯ ಕಾಂಗ್ರೆಸಿನ ೫೬ನೇ ಅಧಿವೇಶನದ ಅಧ್ಯಕ್ಷ ಪುರುಷೋತ್ತಮದಾಸ ತಾಂಡನರಿಗೆ ಪ್ರಚಂಡ ಸ್ವಾಗತ ನೀಡಿದರು. ಶ್ರೀಯುತ ತಾಂಡನರು ಉತ್ತರ ಪ್ರದೇಶದ ಪ್ರಾಮುಖ್ಯ ಕಾಂಗ್ರೆಸಿಗರಾದ ಶ್ರೀ। ಮೋಹನಲಾಲ್ ಗೌತಮ ಮತ್ತು ಶ್ರೀ। ಆಲಗುರ್ಯಾ ಶಾಸ್ತ್ರಿಗಳೊಡನೆ ಪಂಜಾಬ್ ಮೈಲಿನ ಮೂಲಕ ಇಲ್ಲಿಗೆ ಆಗಮಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ। ಬಿ. ಎನ್. ಹಿರಯವರು ಅವರನ್ನು ಸ್ವಾಗತಿಸಿದರು. ಅಧ್ಯಕ್ಷರ ಮೆರವಣಿಗೆಯು ಸರಿಯಾಗಿ ಹನ್ನೊಂದು ಗಂಟೆಗೆ ಗಾಂಧಿ ನಗರಕ್ಕೆ ಹೊರಟಿತು. ಎಂಡು ಮೈಲುದ್ದದ ದಾರಿಯಲ್ಲಿ ಅಸಂಖ್ಯ ಜನರು ನೆರೆದು ಅಧ್ಯಕ್ಷರಿಗೆ ಪ್ರಚಂಡ ಸ್ವಾಗತ ನೀಡಿದರು.

ಪಂಜಾಬ ಮೈಲಿನ ಮೂಲಕ ಕಾಂಗ್ರೆಸಿನ ನಿಯೋಜಿತ ಅಧ್ಯಕ್ಷ ಶ್ರೀ। ಪುರುಷೋತ್ತಮ ದಾಸ ತಾಂಡನರು ಆಗಮಿಸಿದರೊಡನೆ ಗಾಂಧೀ ಕಿ-ಜೈ ಎಂಬ ಘೋಷಗಳಿಂದ ಅವರಿಗೆ ಹೂಮಾಲೆಗಳನ್ನು ಅರ್ಪಿಸಲಾಯಿತು. ನಂತರ ಬೆಳ್ಳಿಯ ಬಿಳುಪು ಬಣ್ಣ ಕೊಡಲಾದ ಜೀಪ್ ಕಾರಿನಲ್ಲಿ ಮೆರವಣಿಗೆಯು ಹೊರಟಿತು. ಚಿತ್ತಾಪದ ಬಿಡಿದು ಕುರ್ಚಿಯನ್ನು ಜೀಪಿನ ಮೇಲೆ ಇಡಲಾಗಿದ್ದು ಅಧ್ಯಕ್ಷರು ಅದರ ಮೇಲೆ ಆಸೀನರಾಗಿದ್ದರು. ಅವರ ಹಿಂದಿನಿಂದ ದೊಡ್ಡ ದೊಂದು ರಾಷ್ಟ್ರ ಧ್ವಜವು ಹಾರುತಿತ್ತು. ಶ್ರೀ। ತಾಂಡನರೊಡನೆ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ। ಮೋಹನ್‌ಲಾಲ್ ಗೌತಮ್ ಮತ್ತು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ। ಕಳಾವೆಂಕಟರಾವ್ ಇವರುಗಳು ಕುಳಿತಿದ್ದರು. ಮೆರವಣಿಗೆಯ ಎದುರಿನಲ್ಲಿ ಶೃಂಗಾರಿಸಲ್ಪಟ್ಟ ಆನೆಯು ನಡೆಯುತಿತ್ತು. ಅಧ್ಯಕ್ಷರ ಜೀಪಿನ ಹಿಂಬಂದಿಯ ಅನೇಕ ಮೋಟಾರುಗಳು ಸಾಲಾಗಿ ಹೋಗುತಿದ್ದುವು. ಮೆರವಣಿಗೆಯ ಮಾರ್ಗದಲ್ಲಿ ಅಲ್ಲಲ್ಲಿ ಕಾಂಗ್ರೆಸ್ ಅಧ್ಯಕ್ಷರು ಹೂಮಳೆಗಳ ಭಾರದಿಂದ ಬಗ್ಗಿದ್ದರು. ಅವರ ಕಾರನ್ನು ಏರಬೇಕಾದರೆ ಹೂಮಾಲೆಗಳನ್ನು ತೆಗೆಯ ಬೇಕಾಯಿತು.

ಮೆರವಣಿಗೆಯು ಗಾಂಧಿ ನಗರದ ಹತ್ತಿರ ಬರುವಾಗ ಮಳೆ ಜೋರಾಗಿ ಬೀಳಲಾರಂಭಿಸಿದುದರಿಂದ ತಾಂಡನರು ಬೇರೊಂದು ಮೋಟಾರಿನಲ್ಲಿ ಪ್ರಯಾಣ ಮಾಡಬೇಕಾಯಿತು.

ಕಾಂಗ್ರೆಸ್ ಕಾರ್ಯಸಮಿತಿಯ ಸಭೆ

ಕಾಂಗ್ರೆಸ್ ಕಾರ್ಯಸಮಿತಿಯ ಸಭೆಯು ಸಿವೃತ್ತರಾಗುವ ಅಧ್ಯಕ್ಷ ಡಾ ನಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ವಂಡಿತ ನೆಹರೂಗಳ ನಿವಾಸವಾದ "ರಾಮಭಾಗ್"ನಲ್ಲಿ ಜರಗಿತು.

ಪಂಡಿತ ನೆಹರೂ, ಸರ್ದಾರ್ ಪಟೇಲ್, ಮೌಲಾನಾ ಅಬಾದ್, ಬಿರಾಫಿ ಅಹಮ್ಮದ್ ಕಿದ್ವಾಯಿ, ಪಂಡಿತ ಗೋವಿಂದವಲ್ಲಭ ಪಂತ, ಶ್ರೀ ಶಂಕರ್ ರಾವ್ ದೇವ್, ಶ್ರೀ ಎನ್. ಕೆ. ವಾಟ್ಲ್, ಶ್ರೀಮತಿ ಸುಚೇತಾ ಕೃಪಾಲಾನಿ, ಡಾ। ಪ್ರಫುಲ್ಲ ಚಂದ್ರಘೋಷ್, ಶ್ರೀ ಕಲಾ ವೆಂಕಟರಾವ್ ಮತ್ತು ಶ್ರೀ ನಿಜಲಿಂಗಪ್ಪ, ಶ್ರೀ ದೇವೇಶ್ವರ ಶರ್ಮ ಮತ್ತು ಶ್ರೀ। ಗೋಖಲೆಭಾಯ್ ಭಟ್ ಇವರು ಹಾಜರಿದ್ದರು. ಬಾಬು ಪುರುಷೋತ್ತಮ ದಾಸ್ ತಾಂಡನ್ ಶ್ರೀ. ಹರಿಕೃಷ್ಣ ಮೆಹತಾಬ್ ಮತ್ತು ಗುಲ್ಜಾರ್‌ಲಾಲ್ ನಂದಾ ಇವರು ವಿಶೇಷ ಆಮಂತ್ರಣದ ಮೇರಗೆ ಸಭೆಗೆ ಬಂದಿದ್ದರು.

ದೇಶದ ಪರಿಸ್ಥಿತಿ ಹಾಗೂ ಕಾಂಗ್ರೆಸಿನ ವಿಚಾರವಾಗಿ ಕಾಂಗ್ರೆಸ್ ಕಾರ್ಯಸಮಿತಿಯು ಚರ್ಚಿಸಿದೆಯೆಂದೂ ತಿಳಿದಿದೆ.

ಕಾಂಗ್ರೆಸಿನ ಭವಿತವ್ಯವು ನಾಸಿಕದಲ್ಲಿ ನಿರ್ಣಯಿಸಲ್ಪಡುವುದು

"ಇಂದಿನ ಪರಿಸ್ಥಿತಿಯಲ್ಲಿ ಕಾಂಗ್ರೆಸು ಒದುಕಿರಬೇಕೋ ಅಥವಾ ಸಾಯಬೇಕೋ ಎಂಬ ಪ್ರಶ್ನೆಯನ್ನು ಶಾಶ್ವತವಾಗಿ ನಿರ್ಣಯಿಸಲು ನಾವೀಗ ನಾಸಿಕಕ್ಕೆ ಹೊರಟಿದ್ದೇವೆ" ಎಂದು ಕಾಂಗ್ರೆಸಿನ ನಿಯೋಜಿತ ಅಧ್ಯಕ್ಷರಾದ ಬಾಬುಪುರುಷೋತ್ತಮದಾಸ ತಾಂಡನರು ಹೇಳಿದರು.

ಕಾಂಗ್ರೆಸಿನಲ್ಲಿರುವ ಅಂತೆಗುಳಿತನದ ಅನಿಷ್ಟವನ್ನು ಹೊರಗೆ ಹಾಕಲು ಕಾಂಗ್ರೆಸಿನ ಹೊರಗೆ ಹಾಕಲು ಕಾಂಗ್ರೆಸಿಗೆ ಸಾಧ್ಯವಿದೆಯೋ ಇಲ್ಲವೋ ನೋಲನ್ನೊಸ್ಸಿ ವಿಷಯವನ್ನು ಈ ಅಧಿವೇಶನವು ನಿರ್ಣಯಿಸಿಲಿದೆ ಎಂದೂ ಅವರು ಹೇಳಿರುವರು.

ಕೊರಿಯದಲ್ಲಿ ಅಮೇರಿಕನರ ದ್ವಿತೀಯ ಯುದ್ಧರಂಗ

ಸಿಯೋಲ್ ನಗರದ ಮೇಲೆ ದಾಳಿ

ಕೊರಿಯದಲ್ಲಿ ಯುಕ್ರರಾಷ್ಟ್ರದ ಸೈನ್ಯಗಳ ನಶವಿರುವ ಆಯಕಟ್ಟಿನ ಟ್ಯಾಗು ನಗರದ ಮೇಲೆ ಕಮ್ಯುನಿಸ್ಟರು ದಾಳಿಯಿಡುತ್ತಿರುವಾಗ ಕಮ್ಯುನಿಸ್ಟರ ಸೈನ್ಯಗಳ ಹಿಂಬದಿಯಿಂದ ಯುಕ್ತರಾಷ್ಟ್ರದ ಸೈನ್ಯಗಳು ಹೊಸ ದಾಳಿಗಳನ್ನು ಆರಂಭಿಸಿವೆ. ದಕ್ಷಿಣ ಕೊರಿಯಲ್ಲಿ ಪೂರ್ವ ಕೊರಿಯದ ಸೈನ್ಯಗಳು ಪ್ರೌಹಾಂಗ್ ನಿಂದ ೫೫ ಮೈಲು ಉತ್ತರದಲ್ಲಿರುವ ಯೊಂಗ್‌ಡಾಂಕನ ಮೇಲೆ ದಾಳಿ ನಡೆಸಿ ಆ ಬಂದರನ್ನು ಆಕ್ರಮಿಸಿರುವುದು ಪ್ರೌಹಾಂಗ್ ಬಂದರದಲ್ಲೂ ಯುಕ್ತರಾಷ್ಟ್ರದ ಸೈನ್ಯಗಳು ಇಳಿದಿವೆಯೆಂತೆ ಯುಕ್ತರಾಷ್ಟ್ರದ ಸೈನ್ಯಗಳು ಪಶ್ಚಿಮ ಕರಾವಳಿಯಲ್ಲಿರುವ ಇಂಚೋನ್ ಬಂದರದಲ್ಲಿ ಇಳಿದು ದಕ್ಷಿಣ ಕೊರಿಯದ ಆಕ್ರಮಿತ ರಾಜಧಾನಿಯ ಕಡೆಗೆ ಮುನ್ನುಗ್ಗುತ್ತಿವೆ ವಿಮಾನಗಳು ಕಮ್ಯುನಿಸ್ಟರ ಮೇಲೆ ಬಂದೂ ದಾಳಿ ನಡೆಸುತ್ತಿವೆ

ಯುಕ್ತರಾಷ್ಟ್ರದ ಸೈನ್ಯಗಳು ನಿನ್ನೆ ದಿನ ಇಂಚೋನ್ ಕರಾವಳಿಯಲ್ಲಿ ಇಳಿದು ಸಿಯೋಲ್ ನಗರದ ಕಡೆಗೆ ಮುನ್ನುಗ್ಗಿವೆ ಈ ಸೈನ್ಯಗಳು ಸಿಯೋಲ್ ನಗರದಿಂದ ಕೇವಲ ಐದು ಮೈಲು ದೂರದಲ್ಲಿವೆ ಎಂದು ದಕ್ಷಿಣ ಕೊರಿಯದ ಸೈನ್ಯಗಳ ಮುಖ್ಯಸ್ಥರು ಹೊರಡಿಸಿದ ಪ್ರಕಟಣೆಯಿಂದ ತಿಳಿಯುತ್ತದೆ ಸಿಯೋಲ್ ನಗರವನ್ನು ಎರಡು ತಿಂಗಳ ಹಿಂದೆ ಕಮ್ಯುನಿಸ್ಟರು ವಶಪಡಿಸಿಕೊಂಡಿದ್ದರು.

ಯುಕ್ತರಾಷ್ಟ್ರದ ಸೈನ್ಯಗಳು ಈ ಹೊಸ ಆಕ್ರಮಣ ನಡೆಸುತ್ತಿರುವಾಗ ಎದುರು ಬರುತ್ತಿರುವ ಕಮ್ಯುನಿಸ್ಟರನ್ನು ಬಿಮದ್ದ ವಿಮಾನ ಪುಡಿಗೈಯ್ಯುತ್ತಿವೆ.

ಸಿಯೋಲ್ ನಗರದಿಂದ ಹತ್ತು ಮೈಲು ದೂರದಲ್ಲಿರುವ ಕಿಲೆಪೂ ವಿಮಾನ ನಿಲ್ದಾಣವನ್ನು ಯುಕ್ತರಾಷ್ಟ್ರದ ಸೈನ್ಯಗಳು ವಶ ಪಡಿಸಿಕೊಂಡಿದ್ದು ಅಲ್ಲಿಂದೀಚೆಗೆ ಯುಕ್ತ ರಾಷ್ಟ್ರದ ವಿಮಾನಗಳು ಯುದ್ಧ ನಡೆಸುತ್ತಲಿವೆ

"ಸಿಯೋಲಿಗೆ ನಮ್ಮ ಮುನ್ನಡೆ ಇದಾಗಿದೆ ನಾವು ಅಲ್ಲಿಗೆ ಹೋಗಲಿರುವೆವು. ಸಾಕ್ ಟಾಂಗ್ ನದಿಯನ್ನು ದಾಟಿ ನಾವು ಮುಂದೆ ಹೋಗಲಿಚ್ಛೆವೆಂದು ಅಮೇರಿಕದ ಸೈನ್ಯದ ವಕ್ತಾರನೋರ್ವನು ಟ್ಯಾಗು ರಣರಂಗದಲ್ಲಿ ಹೇಳಿದನು

ಟ್ಯಾಗು ರಣರಂಗ

ಟ್ಯಾಗುವನ್ನು ಮುತ್ತಿರುವ ಕಮ್ಯುನಿಸ್ಟರನ್ನು ಪುಡಿಗೈಯಲು ರಣರಂಗದ ವಾಯವ್ಯ ವಿಭಾಗದಲ್ಲಿ ಯುಕ್ತರಾಷ್ಟ್ರದ ಸೈನ್ಯಗಳು ಈ ದಿನ ಬೆಳಿಗ್ಗೆ ೯ ಗಂಟೆಗೆ ಹೊಸ ಆಕ್ರಮಣ ಪ್ರಾರಂಭಿಸಿವೆ.

ಇಂಚೋನ್‌ನಲ್ಲಿ ಇಳಿದು ಹೊಸ ಆಕ್ರಮಣವನ್ನು ಪ್ರಾರಂಭಿಸಿರುವ ಯುಕ್ತರಾಷ್ಟ್ರದ ಸೇನಾ ಸಮೂಹದಲ್ಲಿ ಒಟ್ಟು ೨೯೫ ವಿಮಾನಗಳಿದ್ದು ಅಮೇರಿಕಾ, ಕೆನಡಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಫ್ರಾನ್ಸ್ ಮತ್ತು ದಕ್ಷಿಣ ಕೊರಿಯದ ಯುದ್ಧ ಹಡಗುಗಳು ಭಾಗವಹಿಸಿವೆ ಸುಮಾರು ೫೦ ಹಡಗುಗಳು ಈ ದಾಳಿಯಲ್ಲಿ ಭಾಗವಹಿಸಿವೆ.

ಆಕ್ರಮಣದ ಮೇಲ್ವನಿಲಿ ಮೆಕಾರ್ಥರರೇ ವಹಿಸಿದ್ದರು

ಇಂಚೋನ್‌ನಲ್ಲಿ ಯುಕ್ತರಾಷ್ಟ್ರದ ಸೈನ್ಯಗಳು ನಡೆಸಿದ ಹೊಸ ದಾಳಿಗಳು ಯೋಜನೆಯಿಂ ಪೂರ್ವಕ ನಡೆಯುತ್ತಿವೆ ಎಂದು ಜನರಲ್ ಮೆಕಾರ್ಥರರು ಅಮೇರಿಕದ ಸಂರಕ್ಷಣಾ ಖಾತೆಗೆ ವರದಿ ಮಾಡಿದ್ದಾರೆ.

ಈ ಆಕ್ರಮಣದಲ್ಲಿ ಯುಕ್ತರಾಷ್ಟ್ರದ ಸೈನ್ಯಗಳಿಗೆ ಹೆಚ್ಚಿನ ನಷ್ಟವಾಗಿರುವುದಿಲ್ಲವೆಂದೂ ಜನರಲ್ ಮೆಕಾರ್ಥರರು ತಿಳಿಸಿರುವರೆಂತೆ.

ಜಿಲ್ಲಾ ಸಮಾಚಾರ

ಜಿಲ್ಲಾ ವಾಣಿಜ್ಯ ಸಂಘ— ಅಧ್ಯಕ್ಷರಿಬ್ಬರಿಗೆ ಸನ್ಮಾನ

ಆಡಳಿತ ಗೃಹಸ್ಥರ ಒಂದು ಮಂಡಲ, ಮೇಲ್ಕಂಡ ಸಂಘದ ಕಾರ್ಯಾಲಯದಲ್ಲಿ, ಅದರ ಹಿಂದಿನ ಅಧ್ಯಕ್ಷ ಶ್ರೀ ವಿ. ಎಸ್. ಉದ್ಯ ಮತ್ತು ಈಗಿನ ಅಧ್ಯಕ್ಷ ಶ್ರೀ. ದೇವಿದಾಸ ಗಿರಿಧರ ಲಾಲ್ ಚಂದ್ರಾನ್ ಇವರ ಸನ್ಮಾನಾರ್ಥವಾಗಿ ಒಂದು ಸಂತೋಷ ಕೂಟವನ್ನೇರ್ಪಡಿಸಿದ್ದು ಅದು ಶ್ರೀ. ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಕಳೆದ ತಾ. ೧೬ನೇ ಸಂಜೆ ಜರುಗಿತು. ಶ್ರೀ. ವಿ. ಎಸ್. ಉದ್ಯರು ಅನುಕ್ರಮವಾದ ೩ ವರ್ಷಗಳ ತಮ್ಮ ಅಧ್ಯಕ್ಷ ಪದವಿಯ ಕಾಲದಲ್ಲಿ ಸಂಘದ, ವರ್ತಕರ, ಜನತೆಯ ಮತ್ತು ಜಿಲ್ಲೆಯ ಹಿತವನ್ನು ಹಾರೈಸಿ ನಡೆಸಿದ ಕಾರ್ಯ ಕಲಾಪಗಳು, ಆ ಸೇವೆಯಲ್ಲಿನ ಅವರ ಆಸಕ್ತಿ, ಪ್ರಾಮಾಣಿಕತೆ, ಸಾಹಸ, ಅದರಿಂದ ಸಂಘಕ್ಕೆ ದೊರಕಿದ ಯಶಸ್ಸು ಇವೆ ಮೊದಲಾದ ಮುಖ್ಯಾಂಶಗಳ ಕುರಿತು ಸಂಘದ ಕಾರ್ಯದರ್ಶಿ ಶ್ರೀ. ಪಿ. ಆರ್. ಶೆಣೈ, ಇಂಪೀರಿಯಲ್ ಬೇಂಕಿನ ಏಜೆಂಟ್ ಮಿ. ಪಿ. ಜಿ. ಕಾರ್ಲಸನ್, ಶ್ರೀ. ಕೆ. ಉಪೇಂದ್ರ ಪೈ, ಡಾ. ಯು. ಪಿ. ಮಲ್ಯ ಎಂ. ಎಲ್. ಎ. ಅವರು ಭಾಷಣ ಮಾಡಿ, ಹೊಸ ಅಧ್ಯಕ್ಷರ ಕಾರ್ಯಕಲಾಪಗಳೂ ಅದೇ ಮೇಲ್ಪಂಕ್ತಿಯನ್ನು ಅನುಸರಿಸಿ ಶುಭದಾಯಕವಾಗಿರಲೆಂದು ಹಾರೈಸಿದರು. ಸಂಘದ ಹಿಂದಿನ ಒಬ್ಬ ಅಧ್ಯಕ್ಷರಾದ ಇಂದಿನ ಸಭಾಪತಿಗಳು ಮೇಲ್ಕಂಡ ಮಹನೀಯರ ವಿಚಾರದಲ್ಲಿ ಅವರ ಗುಣಪ್ರಶಂಸೆಯ ತಮ್ಮ ಭಾಷಣ ಮುಗಿಸುವುದರೊಂದಿಗೆ ಸನ್ಮಾನ ಪಾತ್ರ ಅತಿಥಿಗಳು ತಮ್ಮ ಕೃತಜ್ಞತಾ ಸೂಚನೆಯ ವಿನಮ್ರ ಉತ್ತರ ಸಲ್ಲಿಸಿದರು, ಶ್ರೀ. ಠಾಕೂ ಮೆಂಡ್ರ ಪೈ ಅವರು ವಂದಿಸಿದರು.

ಚೂರಿಯಿಂದ ಗಾಯಗೊಳಿಸಿದ ಆರೋಪ: ಆರೋಪಿಗೆ ೮ ತಿಂಗಳ "ಕಠಿಣ ಸಜೆ

ಕಾಸರಗೋಡು ತಾ॥ ಮೊಗ್ರಾಲಿನ ಶೇಕ ಅಹಮ್ಮದ್ ಎಂಬಾತ ಕಳೆದ ತಾ. ೨೯—೩—೫೦ರಲ್ಲಿ ಕೈಪಾಡಿ ಅಂದುಞ್ಞಿ ಬ್ಯಾರಿ ಎಂಬಾತನನ್ನು ಒಂದು ಚೂರಿಯಿಂದಿರಿದು ವಿಶೇಷವಾಗಿ ಗಾಯಗೊಳಿಸಿದ ನೆಂಬ ಆರೋಪದ ಮೇರೆಗೆದ್ದಮೆಯನ್ನು ದ. ಕ. ಜಿಲ್ಲಾ ಎದಿ॥ I ಕ್ಲಾಸ್ ಮೆಜಿಸ್ಟ್ರೇಟ್ ಶ್ರೀ ಎಸ್. ದೋಶ್ವರು ಕಾಸರಗೋಡಿನ ಕ್ಯಾಂಪಿನಲ್ಲಿ ವಿಚಾರಣೆ ನಡೆಸಿ ಆರೋಪಿಗೆ ೮ ತಿಂಗಳ ಕ. ಸಜೆ ವಿಧಿಸಿದರು. ಆರೋಪಿ ಗಾಯಗೊಂಡ ಅಂದುಞ್ಞಿಯಿಂದ ೧೦೦ ರೂ. ಕಡವಾಗಿ ಪಡೆದಿದ್ದ, ಅದನ್ನು ಅಂದುಞ್ಞಿ ಕೇಳಿದಾಗ ಆತ ಈಗ ತನ್ನಲ್ಲಿ ಇಲ್ಲವೆಂದು ತಿಳಿಸಿ ಜಾ ಕುದಿಯೋಣವೆಂದು ಅಂದುಞ್ಞಿಯೊಡನೆ ಹೊಟೆಲಿಗೆ ಹೊಕ್ಕಾಗ ಪ್ರಕರಣವು ಹೀಗೆ ಇರಿದ ವಿಂಬದು ಮೊಕದ್ದಮೆಯ ಮುಕ್ತಾಯ.

ಕಾನೂನಿಗೆ ವಿರೋಧವಾಗಿ ಅಕ್ಕಿ—ದಂಡನೆ

ತಾ. ೭—೫—೫೦ರಲ್ಲಿ ಕಾನೂನಿನ ಕ್ರಮಗಳಿಗೆ ವಿರೋಧವಾಗಿ ೧ ಮುಡಿ ಅಕ್ಕಿ ಕೊಂಡ ಆರೋಪದ ಸಂಬಂಧ ಬಂಟ್ವಾಳದ ಬಿ. ಶ್ರೀನಿವಾಸ ನ್ಯಾಕರಿಗೆ ರೂ. ೫೦, ಹಾಗೇ ತಾ. ೧೬—೫—೫೦ರಲ್ಲಿ ಅನ್ಯೇ ಅಕ್ಕಿ ಕೊಂಡನೆಂದು ಉಳ್ಳಾಲದ ನಾರಾಯಣಗೆ ೪೦ ರೂ. ಜುಲ್ಮಾನೆ ತಪ್ಪಿದರೆ, ಅವರಲ್ಲಿ ನ್ಯಾತಿಯೊಬ್ಬರಿಗೆ ತಿಂಗಳ ಕ. ಸಜೆ; ಉಡ್ಡಿ ತಾ॥ ಕಟ್ಟಾಡಿ ಪಕೀರ ಪೂಜಾರಿ ತಾ ೧೭—೪—೫೦ರಲ್ಲಿ ಅಧಿಕಾರ ವಿಲ್ಲದೆ ೬ ಮುಡಿ ಅಕ್ಕಿ ಕೊಂಡನೆಂದು ರೂ. ೫೦ರ ಜುಲ್ಮಾನೆ ತಪ್ಪಿದರೆ ೬ ವಾರ ಕ. ಸಜೆ ನಮ್ಮ ಎದಿ॥ I ಕ್ಲಾಸ್ ಮೆಜಿಸ್ಟ್ರೇಟರಿಂದ ವಿಧಿಸಲಾಗಿದೆ.

ವರ್ಧಂತ್ಯೋತ್ಸವ

ಜಗದ್ವಂದ್ಯ ಸಂ॥ ವಿಶ್ವೇಶ್ವರಯ್ಯನವರ ೯೧ನೆಯ ಜನ್ಮ ದಿನೋತ್ಸವವನ್ನು ತಾ. ೧೫ರಲ್ಲಿ ಕರ್ನಾಟಕದಲ್ಲೆಲ್ಲಾ ಒಕ್ಕಲ ವಿಜೃಂಭಣೆಯಿಂದ ಆಚರಿಸಲಾಗಿದೆ.

ಶ್ರೀ। ಬೋಳ ನಾಗೇಶ ರಾಯರು

ಸುಪ್ರಸಿದ್ಧ ಮಿತೆನದ ಶ್ರೀ। ಬೋಳ ನಾಗೇಶ ರಾವ್ ಅಡ್ವೋಕೇಟ್ ಇವರು ತಾ. ೧೫ನೇ ತಾತೆ ದಿನುಗತರಾದರೆಂದು ತಿಳಿಸಲು ವಿಷಾದ ಪಡುತ್ತೇನೆ. ಮೃತರ ಆತ್ಮಕ್ಕೆ ಚಿರಶಾಂತಿ ಇರಲಿ!

ರೇಶನ್ ಸಂಬಂಧದ ಆರೋಪಗಳು —ಜುಲ್ಮಾನೆ

ರೇಶನ್ ಸಂಬಂಧದ ಬೇರೆ ಬೇರೆ ಆಕ್ರಮಗಳಿಗಾಗಿ ಉಡ್ಡಿ ಶ್ರೀಮತಿ ಪ್ಲೋರಿ ಮ್ಯಾರ್ಟಿಸಳಿಗೆ ರೂ. ೨೫ ಜುಲ್ಮಾನೆ ತಪ್ಪಿದರೆ ೨ ವಾರ ಸಾದಾ ಸಜೆ; ಉಡ್ಡಿ ವೆಂಕಟ ರಮಣ ನೇಟಿಗೆ ರೂ. ೪೦ ಜುಲ್ಮಾನೆ ತಪ್ಪುದರೆ ೧ ತಿಂಗಳು ಸಾದಾ ಸಜೆ; ಉಡ್ಡಿ ಬಾಗಿಗೆ ರೂ. ೨೦ ಜುಲ್ಮಾನೆ ತಪ್ಪಿದರೆ ೧೫ ದಿನ ಸಾದಾ ಸಜೆ; ಉಡ್ಡಿ ನಾರಾಯಣ ಶೇಣೈಗೆ ರೂ. ೨೫ ಜುಲ್ಮಾನೆ ತಪ್ಪಿದರೆ ೩ ಕ. ಸಜೆ ಮತ್ತು ಪಿ. ಎಂ. ಮೊದಿನ್ ಕುಂಞಿ ಎಂಬಾತಗೆ ರೂ. ೨೫ ಜುಲ್ಮಾನೆ ತಪ್ಪಿದರೆ ೩ ವಾರ ಕ. ಸಜೆ ನಮ್ಮ ಎದಿ॥ I ಕ್ಲಾಸ್ ಮೆಜಿಸ್ಟ್ರೇಟರು ವಿಧಿಸಿದರು.

ಜಿಲ್ಲಾ ಕಲೆಕ್ಟರರ ಅಧಿಕಾರ

ಸಾಗುವಳಿಗೆ ಯೋಗ್ಯವಾದ ಭೂಮಿಯಲ್ಲಿ ಬೇಸಾಯ ಮಾಡದೆ ಬಂಜರು ಬೀಳಿಸಿರುವಲ್ಲಿ ಅದನ್ನು ವರ್ಗದಾರನೋ ಅವನ ಒಕ್ಕಲೋ ಕೂಡಲೇ ಸಾಗುವಳಿ ಮಾಡುವಂತೆ ನಿರ್ಬಂಧಿಸುವ ಅಧಿಕಾರವನ್ನು ಸರಕಾರ ಜಿಲ್ಲಾ ಕಲೆಕ್ಟರರುಗಳಿಗೆ ಕೊಟ್ಟಿದೆ. ಈ ಅನ್ವಯ ಗಜೆಟಿನಲ್ಲಿ ಪ್ರಕಟವಾದ ಆಂಜಿನಿಂದಲೇ ಜಾರಿಗೆ ಒರಲಿದೆ.

ತಮ್ಮ ದೃಢ ವಿಶ್ವಾಸ ಪಾತ್ರ

ಕೆನರಾ ಬ್ಯಾಂಕ್

ಲಿಮಿಟೆಡ್

ಸ್ಥಾಪಿತ 1906

ಐವತ್ತು ಸಹಸ್ರಕ್ಕೆ ಕುಟುಂಬದ ಬ್ಯಾಂಕರರು ಎಂಟು ಕೋಟಿಗೂ ಮಿಗಿಲಾದ ನಿಧಿಗಳು.

Zam-Buk ಜಾಂಬುಕು

ಗಾಯ, ಕಡಿತ, ಕಜ್ಜಿ, ಮುದ್ದಣ, ಕುರುಗಳಿಗೆ

ಶೀಘ್ರವಾಗಿ, ಪರಿಪೂರ್ಣವಾಗಿ ಗುಣಪಡಿಸುತ್ತದೆ.

ಜಾಂಬುಕು ಅಮೂಲ್ಯ ಔಷಧಿಯ ಎಣ್ಣೆಗಳುಳ್ಳದ್ದು. ಇದು ಚರ್ಮದೊಳಗೆ ಆಳ ಇಳಿಕ್ಕೆ ಇಂಗುತ್ತದೆ. ಜಾಂಬುಕು ನೋವನ್ನೂ ಊದುವಿಕೆಯನ್ನೂ ಸಿಡಿಕನ್ನನ್ನೂ ನಿಲ್ಲಿಸುತ್ತದೆ. ಅದು ಚರ್ಮವನ್ನು ಶುದ್ಧೀಕರಿಸಿ, ವಿಷಾಣುಗಳನ್ನು ನಾಶಮಾಡಿ, ಕೇವಲ್ಲು ಒಣಗಿ, ತೀಕ್ಷ್ಣವೂ ಸ್ವಚ್ಛವೂ ಆದ ಗುಣವನ್ನು ಕೊಡುತ್ತದೆ. ಎಲ್ಲಾ ತರದ ಚರ್ಮ ವ್ಯಾಧಿಗಳಿಗೆ, ಬಾಯಿಹುಣ್ಣಿಗೆ, ತ್ರಿಣಿಕಡಿತ, ಸುಡಕ, ಬೇಯುವಿಕೆ, ಬೊಕ್ಕೆಗಳಿಗೆ ಜಾಂಬುಕು ಅತೀ ಶ್ರೇಷ್ಠ ಔಷಧಿ.

ಇದರಲ್ಲಿ ಪ್ರಾಣಿಗಳ ಕೊಬ್ಬು ಖಂಡಿತವಾಗಿಯೂ ಮಿಶ್ರವಾಗಿಲ್ಲ.

ಜಾಂಬುಕು—ಜಗತ್ತಿನ ಅತೀ ಶ್ರೇಷ್ಠ ಚರ್ಮವ್ಯಾಧಿ ಮುಲಾಮು.

ಏಜೆಂಟರು: ದಾದಾ ಎಂಡ್ ಕೊ, ಪಿ. ಟಿ. ಮದ್ರಾಸು.

ಅಹಲ್ಯಾಶ್ರಮ—ಮಂಗಳೂರು

ಕೆನರಾ ಹೈಸ್ಕೂಲಿನ ನುವ್ರಸಿದ್ಧ ಮೂಜ ಉಪಾಧ್ಯಾಯರೂ, ನಿಷ್ಕಾಮ ಪ್ರೇಮದ ಪ್ರಿಯರೂ, ಸತ್ಯ, ಅಹಿಂಸಾ, ಶಾಂತಿ ತತ್ವರರೂ ಆಗಿದ್ದ ಶ್ರೀ. ಬಿ. ಪುಂಡರೀಕ ಬಾಳಿಗ ಬಿ. ಎ. ಅವರ ನಿಧನದ ಪರಿತಾಪ ಸೂಚಕವಾಗಿ ಮೃತ್ಯು ಅವರ ಆತ್ಮಕ್ಕೆ ಚಿರ ಶಾಂತಿಯನ್ನು ಬಯಸಿ, ಈ ಆಶ್ರಮದಲ್ಲಿ ತಾ. ೧೫-೯-೫೦ನೇ ಸೋಮವಾರ ಪೂರ್ವಾಹ್ನ ಶ್ರೀ. ರಾವ್ ಕುಮಾರ್ ಬಿ. ಎ. ಅವರು ಉಷಸ್ಸಿನ ಸೋತ್ರಮಂತ್ರಗಳನ್ನು ಪಠಿಸಿದ ತರುವಾಯ, ಇದರಲ್ಲಿ ಭಾಗಿಗಳಾಗಿದ್ದ ಆಶ್ರಮದ ಆಶ್ರಿತರಿಂದಲೂ, ವಿದ್ಯಾರ್ಥಿನಿಯರಿಂದಲೂ ಎರಡು ನಿಮಿಷಗಳ ಪರಿಯಂತರ ಮೌನ ಪ್ರಾರ್ಥನೆಯನ್ನು ಆಚರಿಸಲಾಯಿತು. ಆಶ್ರಮದ ಸುವರಿಂಟೆಂಡೆಂಟರಾದ ಶ್ರೀಮತಿ ಕುಸುಮಾವತಿಯವರು ದಿವಂಗತರ ಗುಣ ಕಥನ ಮಾಡಿ, ಅವರು ಆಶ್ರಮದ ಹಿತಚಿಂತಕರಾಗಿದ್ದರೆಂದು ತಿಳಿಯ ಹೇಳಿದರು.

ಕೀರ್ತಿಶೇಷ
ಶ್ರೀ. ಬಿ. ಪುಂಡರೀಕ ಬಾಳಿಗರು

ಕೆನರಾ ಹೈಸ್ಕೂಲಿನ ಸಂಸ್ಥಾಪನಾಧ್ಯಾಪಕರಲ್ಲಿ ಒಬ್ಬರಾಗಿದ್ದು ೪೦ ವರ್ಷಗಳ ಅತ್ಯವ್ಯೋತ್ಕೃ ಸೇವೆಯನ್ನು ಸಲ್ಲಿಸಿ, ಸಾವಿರಾರು ವಿದ್ಯಾರ್ಥಿಗಳನ್ನು ಸುಸಂಸ್ಕೃತರನ್ನಾಗಿ ಮಾಡಿ ನಿವೃತ್ತಿ ಹೊಂದಿದ ನಂತರ ಜಾತಿ, ಮತ ಭೇದವಿಲ್ಲದೆ ಬ್ರಾಹ್ಮಣರಾದಿಯಾಗಿ ಪರಿಜನರ ವರೆಗೂ ಧರ್ಮಭೋಧೆಯನ್ನು ಮಾಡಿ ತಮ್ಮ ಜೀವಮಾನದಲ್ಲಿ ಒಂದು ನಿಮಿಷವನ್ನಾದರೂ ವೃಥಾಕಾಳು ಮಾಡದೆ ಸರ್ವಜನೋಪಕಾರವನ್ನು ಗೈದ ಶ್ರೀ ಪುಂಡರೀಕ ಬಾಳಿಗ ಬಿ. ಎ. ಇವರು ಕಳೆದ ತಾ. ೧೬ನೇ ಶನಿವಾರ ಯಃ ಕಶ್ಚಿತ್ ದಿನಸ ತಮ್ಮ ತಳಿಸಿಯ ವಯಸ್ಸಿನಲ್ಲಿ ನಿಧನರಾದರು. ಈ ಒಗ್ಗೆ ಸಂತಾಪ ಸೂಚಿಸಲು ತಾ. ೧೮ನೇ ಸೋಮವಾರ ಕೆನರಾ ಹೈಸ್ಕೂಲಿಗೆ ರಜೆ ಕೊಡಲಾಗಿತ್ತು. ಮೃತರ ಆತ್ಮಕ್ಕೆ ಚಿರ ಶಾಂತಿ ಇರಲಿ!

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಅಮಲುದಾರಿ ಅರ್ಜಿ ನಂಬ್ರ 22/1950.

ಹಮ್ಮದ್ಮಂಞಾ ಬ್ಯಾರಿ—ಅರ್ಜಿದಾರ

ಮತ್ತು

ಕೆ. ಐ. ಮೂಸಬ್ಬಾರಿ—ಇಸ್ಮಾಲಿ ಬ್ಯಾರಿ ಮಗ. ಕಾಸರಗೋಡು ತಾಲೂಕು ವರ್ಕಾಡಿ ಗ್ರಾಮದ ಕಲ್ಲಂಬೆಯೆಂಬಲ್ಲಿರುವವ— ಸ್ವತಂತ್ರರಿಂದ

ಸದ್ರಿ ರೆಸ್‌ಪೋಂಡೆಂಟಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ಮೇಲ್ಕಂಡ ಅಮಲುದಾರಿಯಲ್ಲಿ ಅರ್ಜಿದಾರನು ರೆಸ್‌ಪೋಂಡೆಂಟನ ಬಾಬ್ತು ಸ್ಥಿರಾಸ್ತಿಗಳ ಮಾರಾಟದ ಬಗ್ಗೆ ಅರ್ಜಿ ಮಾಡಿದ್ದಾನೆ. ಅದುದರಿಂದ ವಿಕ್ರಯದ ಇಸ್ಕಿಹಾನಿ ಕರ್ಕರಿಗಳನ್ನು ನಿರ್ಣಯಿಸಲಿಕ್ಕಾಗಿ ಮೇಲ್ಕಂಡ ಕೋರ್ಟಿನಲ್ಲಿ ಇದೇ 1950ನೇ ಇಸ್ವಿ ಒಕ್ಟೋಬರ ತಾ. ೫ ನೇ ನಿಶ್ಚಯಿಸೋಣಾಗಿಯದಿಂತ ನಿಮಗೆ ಇದರಿಂದ ತಿಳಿಸೋಣಾಗುತ್ತದೆ. ಆ ದಿವಸಕ್ಕೆ ನೀವು ಖುದ ಆಗಿಯಾಗಲೀ ವಕೀಲರ ಮುಖಾಂತರವಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆ ದಾಖಲು ಮಾಡದ್ದಲ್ಲಿ ನಿಮ್ಮ ಕಿವಿಯಾಂದ ಕೇರ್ಮಾನಿಸಲಾದೀತು

(By order)

Mangalore, 16-9-1950. John Gonsalves, Vakil for Petitioner

ಹಸರು ಎಲೆ ಮತ್ತು ಹಸರು ಎಲೆ ಗೊಬ್ಬರ

ಗದ್ದೆಗಳಿಗೆ ಹಸ ಎಲೆ ಗೊಬ್ಬರವನ್ನು ಹಾಕಿದ್ದಲ್ಲಿ ಬೆಳೆಯ ಉತ್ಪತ್ತಿಯು ಹೆಚ್ಚಾಗುತ್ತದೆಂಬ ಸಂಗತಿಯು ನಮ್ಮ ಜಿಲ್ಲೆಯ ಎಲ್ಲಾ ರೈತರಿಗೆ ತಿಳಿದ ವಿಷಯವೇ, ಆದರೆ ಕರ್ನಾಟಕ ಪ್ರದೇಶಗಳಲ್ಲಿ ಹಸುರು ಎಲೆಯ ಅಭಾವವಿರುವುದರಿಂದ ರೈತರು ಸಾಗುವಳಿಯ ಬಾಬಿನಲ್ಲಿ ಬಹಳ ಕಷ್ಟಪಡುತ್ತಾರೆ ಈ ಬಗ್ಗೆ ಸಸಿ ಎಲೆಗಳನ್ನೂ ಸುಲಭವಾಗಿ ಒದಗಿಸುವರೇ ಈ ಕೆಳಗೆ ವಿವರಿಸಿದ ಸೂಚನೆಗಳನ್ನೂ ರೈತರ ಬಗ್ಗೆ ಕೊಡಲಗಿದೆ

ವರಂಬೋಕು ಕುಮರಿ ಕಾಡು ಇತ್ಯಾದಿ ಸ್ಥಳಗಳಲ್ಲಿ ತಾನಾಗಿ ಬೆಳೆಯುತ್ತಿರುವ ಗಿಡಗಳಿಂದ ಹಸುರು ಎಲೆಗಳನ್ನೂ ಪಡೆಯಬಹುದು ಭತ್ತದ ಸೈಗೆ ಗೊಬ್ಬರಕ್ಕಾಗಿ ರೈತರು ಎಕ್ಕಮಾಲೆ, ಆಡುಸೋಗೆ ಇತ್ಯಾದಿ ಗಿಡಗಳ ಎಲೆಗಳನ್ನೂ ಉಪಯೋಗಿಸುತ್ತಾರೆ ಮುಂಗಾರು ಮಳೆಯ ಸಮಯ ಅಂದರೆ ಜೂನ್ ತಿಂಗಳಿಂದ ಆಗೋಸ್ತು ತಿಂಗಳ ವರೆಗೆ ಮಣ್ಣಿನಲ್ಲಿ ತೇವವಿರುವ ಸಮ್ಮಂಧ ಈ ಗಿಡಗಳ ಬೀಗಳನ್ನು ಬಿತ್ತಿದ್ದಲ್ಲಿ ಇವುಗಳ ಬೆಳೆಯನ್ನು ಹೆಚ್ಚಿಸಬಹುದು ಇವುಗಳಲ್ಲಿರುವ ನೈಸರ್ಗಿಕ ಇಲಾಖೆಯವರ ನಡೆಸಿದ ಗೊಬ್ಬರಗಳ ಕುರಿತಾದ ಪರಿಶೋಧನೆಯು ಫಲಕಾರಿಯಾಗಿ ಈ ಕೆಳಗೆ ವಿವರಿಸಿದ ಪ್ರಕಾರ ನುತ್ತು ಗಿಡಗಳು ಧಾರಾಳವಾಗಿ ಎಲೆಗಳನ್ನು ಒದಗಿಸಿಕೊಡುತ್ತವೆಂದು ತಿಳಿದುಬಂದಿದೆ

ಗ್ಲಿರಸೀಡಿಯಾ (ನರರ ಕೇಸರಿ)—

ಈ ಜಾತಿಯ ಸಸಿಯು ಮೂರು ವರ್ಷ ವಯಸ್ಸಿಗೆ ಬಂದ ನಂತರ ಧಾರಳ ಎಲೆಗಳನ್ನು ಒದಗಿಸುತ್ತವೆ ಮೂರ ವರ್ಷದ ನಂತರ ಇದರ ಎಲೆಗಳನ್ನು ಕೊಯ್ಯಬಹುದು ಒಂದೂವರೆ ಮೀವು ಪೂರ್ತಿ ಬೆಳೆದ ನಂತರ ಅಂದರೆ ಐದನೆಯ ವರ್ಷದ ನಂತರ ಸುಮಾರು ೨೦೦ ರಿಂದ ೩೦೦ ಎಲೆಗಳನ್ನು ಕೊಡುತ್ತವೆ ಎಲೆಗಳನ್ನು ವರ್ಷಕ್ಕೆ ಒಂದು ಸಲ ಮಾತ್ರ ಕೊಯ್ಯಬೇಕು ಹೀಗೆ ಮಾಡುವುದರಿಂದ ಒಂದು ಎಕ್ರೆಗೆ ೫೦೦ ರಾತ್ರಿ ಎಲೆಗಳು ದೊರಕಿಸಬೇಕಾದರೆ ೫೫ ಮರಗಳು ಬೇಕಾಗುವವು

ಈ ಮರಗಳನ್ನು ಚೆನ್ನಾಗಿ ಬೆಳೆಸಬೇಕಾದರೆ ಸಸಿಗಳನ್ನು ಕಿತ್ತು ನಡಬೇಕು ಬೀಜಗಳನ್ನು ಬಿತ್ತಲಿಕ್ಕೂ ಕಿತ್ತು ನಡಲಿಕ್ಕೂ ಯೋಗ್ಯ ಕಾಲಗಳನ್ನು ಕೆಳಗೆ ತೋರಿಸಿಯದೆ

ಈ ಕಾಲದಲ್ಲಿ ಬೀಜವನ್ನು ಬಿತ್ತಬೇಕು
ಎಪ್ರಿಲ್, ಮೇ, ಜೂನ್, ಜುಲ್ಯಾ

ಈ ಕಾಲದಲ್ಲಿ ಸಸಿಗಳನ್ನು ಕಿತ್ತು ನಡಬೇಕು—ಜುಲ್ಯಾ, ಆಗಸ್ಟು, ಸಪ್ಟಂಬ್ರ, ಅಕ್ಟೋಬ್ರರ

ಸಸಿಗಳನ್ನು ೪ ಯಾ ೬ ಅಡಿ ದೂರ ನಡಬೇಕು ಅದಕ್ಕೆ ಮೊದಲು ಚೆನ್ನಾಗಿ ನೀರನ್ನು ಹಾಯಿಸಿ ಆಡು ಅಥವಾ ದನಗಳು ತಿನ್ನದ ಹಾಗೆ ಭದ್ರವಾದ ಬೇಲಿ ಹಾಕಿ ರಕ್ಷಿಸಬೇಕು

ಇಂಥಾ ಮರಗಳನ್ನು ನಮ್ಮ ಜಿಲ್ಲೆಯಲ್ಲಿ ಇಲ್ಲದೆ ಇರುವುದರಿಂದ ಅವುಗಳನ್ನು ನೆಡ್ಡಿಗೊಳಿಸಲಿಕ್ಕೆ ಈ ವರುಷ ಪ್ರತಿ ಮೊಂದು ಎಕರೆಲ, ಶ್ಯಾನುಭೋಗರಿಗೆ ತಿದರ ೩೧೧ ಬೀಜಗಳನ್ನು ಒದಗಿಸಿ ಕೊಡುವ ಏರ್ಪಾಡುಮಾಡಿಯದೆ. ಎಕೇ ರೈತರು ಮತ್ತು ಶ್ಯಾನುಭೋಗರು ತಮ್ಮ ಮನೆಗಳ ನಿರೀಕರಿಯಲ್ಲಿ ಇದರ ಬೀಜಗಳನ್ನು ಸಿಹಾಕಿ ತಮ್ಮ ಗ್ರಾಮಗಳಲ್ಲಿ ಈ ಮರಗಳನ್ನು ಪ್ರಚಾರಗೊಳಿಸಲಿಕ್ಕೆ ಹಂದು ಮಾದರಿ ಕ್ಷೇತ್ರವನ್ನು ರಚಿಸಬೇಕೆಂದು ಈ ಮೊದಲೇ ಹುಕುಂ ಕೊಟ್ಟಿರುತ್ತದೆ ಎಲ್ಲಾ ಗ್ರಾಮಸ್ಥರು ಗ್ರಾಮ ಉದ್ಯೋಗ ಸ್ಥರಿಂದ ಹೆಚ್ಚಿನ ಅನುಭವವನ್ನು ಪಡೆಯಬಹುದೆಂದು ಈ ಮೂಲಕ ತಿಳಿಸೋಣಾಗಿಯದೆ

ಮೇಲೆ ಹೇಳಿದ ಗ್ಲಿರಸೀಡಿಯಾವಲ್ಲದೆ ನಮ್ಮ ಜಿಲ್ಲೆಯಲ್ಲಿ ಕೊಳೆಂಜಿ ಗಿಡವು ಬಹಳ ಚೆನ್ನಾಗಿ ಬೆಳೆಯುತ್ತದೆ ಹೊಯಿಗೆ ಮಣ್ಣಿನ ಭೂಮಿಗಳಲ್ಲಿ ಇವನ್ನು ಬೆಳೆಸಬಹುದು ಇದರ ಬೆಳವಣಿಗೆಯು ಸಿಧಾನ ಇದು ಆರಂಭದ ಏಳು ತಿಂಗಳ ಅವಧಿಯಲ್ಲಿ ಉಪಯೋಗಕ್ಕೆ ಬರಲಾರದು ಇದನ್ನು ಎಕ್ರೆಗೆ ೩೦೦ ರಾತ್ರಿ ಬಿತ್ತಬಹುದು ಈ ಬೀಜದ ಸಿಪ್ಪೆಯ ದಪ್ಪವಾಗಿದ್ದು ಬಿತ್ತುವ ಮೊದಲು ಬೀಜವನ್ನು ಹೊಯಿಗೆಯೊಂದಿಗೆ ಬೆರೆಸಿ ಲಘುವಾಗಿ ತೇಲಿಸಬೇಕು ೫ ನಿಮಿಷಗಳ ವರೆಗೆ ಬಿಸಿ ನೀರಿನಲ್ಲಿ ಹಾಕಿ ಆನಂತರ ತಣ್ಣೀರಿನಲ್ಲಿ ಬೀಜಗಳನ್ನು ತೊಳೆದ ಬಿತ್ತಬೇಕು ಬೀಜಗಳು ಬೆಳೆದು ಎತ್ತರಕ್ಕೆ ಬೆಳೆದಾಗ ಅವನ್ನು ಎಡೆತಾಕಿ ಮಣ್ಣು ಹಾಕಬೇಕು ಮಳೆಗಾಲದಲ್ಲಿ ಇದರ ಬೀಜಗಳಲ್ಲಿ ಬೀಳುವ ಗೆಡ್ಡೆಗಳಲ್ಲಿ ನೆಟ್ಟು ವೃದ್ಧಿಯಾಗಿ ವಿಸ್ತರಿಸಲು ತೆಲೆ ತೋರಿದರೆ ಕೂಳೆಜಿ ಬೀಜಗಳನ್ನು ಬೇಕಾದಷ್ಟು ಸ್ವತಃ ಸಂಗ್ರಹಿಸಿ ಇಲಾಖೆಯವರಿಂದ ಹತ್ತಿರ ಕೆಲವು ಕಿಲೋ ಬೀಜಗಳನ್ನು ಪಡೆಯಬಹುದು ಇದರ ಬೀಜಗಳಲ್ಲಿ ಗಟ್ಟಿಯಾದ

THE CANARA BANKING CORPORATION LTD.

Estd: 1906.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಹೆಡ್ ಆಫೀಸು—ಉಡುಪಿ

ಮೊಲ ಧನ:

ಅಧಿಕೃತ	ರೂ. 25,00,000
ಚಂದಾ ಅರ್ಪಿಸಿದ್ದು ಮತ್ತು ವಸೂಲಾದ್ದು	ರೂ. 20,00,000
ಕ್ಷೇಮನಿಧಿಗಳು	ರೂ. 10,21,747
ಒಟ್ಟು ಚಲಾವಣೆ ಭಂಡವಾಳ	ರೂ. 303,02,976

ಗಿರಾಕಿಗಳ ಕೃಪ್ತಿಯೇ ನಮ್ಮ ಗುರಿ!

ಸಕಲ ತರದ ಬ್ಯಾಂಕಿಂಗ್ ವಹಿವಾಟುಗಳನ್ನು ಕೈಕೊಳ್ಳಲಾಗುವುದು

ಹುಳುಕಡ್ಡಿ ಮದ್ದು



ಕಜ್ಜಿ, ಕುರಿಕೆ, ಕುರಿಕಜ್ಜಿ, ಹುಳಕಡ್ಡಿ, ಪಿತ್ತ ಉವದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ, ಮಂಗಳೂರಲ್ಲಿ 'ಶ್ರೀ' ಕಂಪೆನಿಯಲ್ಲಿ ದೊರೆಯುವುದು

ಕಾಲದವಿರಾಮ ನಿಶ್ಚಿಂತ ಜೀವನಕ್ಕೆ—ಕುಟುಂಬದ ಸುಖ ಸೌಕರ್ಯಕ್ಕೆ

ಅತ್ಯಮೂಲ್ಯ ಆಕರ್ಷಕ ವಿಮಾಯೋಜನೆ:

ಮಾಸಸಲಿ ಕೇವಲ ರೂ. 55/-ರ ವಿನಿಯೋಗದಿಂದ ರೂ. 30,080/- ನಿಧಿ ನಿಮ್ಮದಾಗುವುದು

ಅಥವಾ ವರ್ಷಂಪ್ರತಿ ರೂ. 1,995ರಂತೆ ಕಾಯಂ ಆಗಿ ದೊರೆಯುವ ಆಜೀವ ವರ್ಷಾಸನ (ವರ್ಷದಲ್ಲಿ ನೀವು ತೆತ್ತ ಹಣ ರೂ 660/ ಮಾತ್ರ)

ಅಥವಾ ನಿಶ್ಚಿತ ಅವಧಿಯಲ್ಲಿ ರೂ. 17830/ ನಗದು

ಅಥವಾ ನಿರ್ದಿಷ್ಟ ಅವಧಿಯಲ್ಲಿ ರೂ 22,500/ ಮತ್ತು ಮರಣಾನಂತರ ಇನ್ನೊಮ್ಮೆ ರೂ. 10,000/-

ಮೇಲೆ ನಮೂದಿಸಿದುದು ಮಾತ್ರವಲ್ಲದೆ ಕ್ಲುಪ್ತ ಅವಧಿಯ ನೊದಲು, ಯಾವ ಸಮಯದಲ್ಲೇ ಆಗಲಿ, ಮರಣ ಹೊಂದಿದರೆ, ವರ್ಷಕ್ಕೆ ರೂ 1000/ ಕ್ಕೆ ರೂ 30/ ರಂತೆ ಖಾತ್ರಿಯಾಗಿ ಬೋನಸ್ಸು ದೊರೆಯುವ ರೂ 10,000/ ದ ಪೂರ್ಣ ವಿಮಾರಕ್ಷಾ ಕವಚ ಸಹಾ

ವಿಮಾ ಕ್ಷೇತ್ರದಲ್ಲಿ 40 ವರ್ಷಕ್ಕೆ ಮಿಕ್ಕಿ ದುಡಿದು ಉತ್ತಮ ಅನುಭವ ಗಳಿಸಿದ ನಿಮ್ಮ ವಿಮೆಯ ಉತ್ಕೃಷ್ಟ ಸಲಹೆಗಾರರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಚೀಫ್ ಏಜೆಂಟ್ಸ್

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಬೊಂಬಾಯಿ ಲೈಫ್ ಬಿಲ್ಡಿಂಗ್, ಉಡುಪಿ (ದ ಭಾರತ)

M/s. KOCHIKAR BROTHERS, LTD.,

Chief Agents

The Bombay Life Assurance Co. Ltd.,

(Bombay Life Building Udipi S India)

With Offices at:—Mangalore, Calicut, Coimbatore, Madura Bangalore City, Trivandrum Madras, Bombay

ಕೆನರಾ ಬ್ಯಾಂಕು, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಭಾರತದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧,೦೦೦ದ ಗುಣಕಗಳಲ್ಲಿ ೫ನೇ ಸಪ್ಟೆ ಬರ ೧೯೫೦ಕ್ಕೆ ನು ಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ

೩ ತಿಂಗಳು	ನೂರಕ್ಕೆ ವರ್ಷಕ್ಕೆ ೨।
ಅದಿಂದ ೫ ತಿಂಗಳು	,, ,, ೨॥

ರೂ ೧,೦೦೦ದ ಗುಣಕದ ರೂಪಾಯಿಗಳ ಮೇಲಿನ ಬಡ್ಡಿಯ ದಂಗಳನ್ನು ನಿಮಗೆ ಸಮಿಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು

ವ ಗಳೂರು ಶಾಖೆಗಳ

(1) ಬಂದರ ರೋಡ (2) ಡೊಂಗರಕೇರಿ

ಇತರ ಶಾಖೆಗಳು —ಕಾರ್ಕಳ, ಬಂಟ್ವಾಳ, ನುಲ್ಲಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ, ಇತ್ಯಾದಿ

CANARA BANK, LIMITED.

ESTD 1906

Bhuvanendra Products Limited,

KATAPADI S. Kanara.

Pleasant shade, Free flow and quick drying have commanded good popularity

"BHUVANENDRA" **REAL INK** "BHUVANENDRA"

USEFUL FOR ALL FOUNTAIN PENS

"ಭುವನೇಂದ್ರ"

ರೀಯಲ್ ಶಾಯಿ

ಬರವಣಿಗೆಯ ಎಲ್ಲಾ ಕೆಲಸಗಳಿಗೂ, ಫೌಂಟನ್ ಪೆನ್ನುಗಳಿಗೂ, ಅತ್ಯುಪಯುಕ್ತ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್; ಕಟಪಾಡಿ, ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 44] ಕಾರೀಕು 29—9—1950 [ಸಂಚಿಕೆ 40]

ಕಾಂಗ್ರೆಸ್ಸಿನಲ್ಲಿ ಡಂಭಾಚಾರಿಗಳಿಗೆ ಅವಕಾಶ ದೊರೆಯಕೂಡದು

ವ್ಯಾಮಾಣಕರಾದ ಕೆಲ ಕೆಲಸಗಾರರೇ ಸಾಕೆಂದು ಅಧ್ಯಕ್ಷ ಶ್ರೀ ತಂಡೆಸ್ನರ ಹೇಳಿಕೆ

ಕಾಂಗ್ರೆಸ ಅಧ್ಯಕ್ಷ ಶ್ರೀ. ಪುರುಷೋತ್ತಮದಾಸ ತಂಡನ್ನರು ಪಿ. ಟಿ. ಆಯ್ ವ್ಯತಿರಿಕ್ತ ಸಂದರ್ಶನದಲ್ಲಿ "ಕಾಂಗ್ರೆಸ ಕಾರ್ಯಸಮಿತಿಯ ಸದಸ್ಯರನ್ನು ಆರಿಸುವ ಬಗ್ಗೆ ಇನ್ನೂ ಯಾವುದೇ ನಿರ್ಣಯಕ್ಕೆ ಬಂದಿಲ್ಲ. ಕೆಲವು ದಿನಗಳಲ್ಲಿ ಇದು ಸಾಧ್ಯವಾಗಬಹುದು. ಇಲ್ಲವೆ ಬಹಳ ದಿನಗಳೂ ಬೇಕಾಗಬಹುದು" ಎಂದು ಹೇಳಿದರು.

ಪಂಡಿತ ನೆಹರೂರು ಕಾಂಗ್ರೆಸ ಕಾರ್ಯಸಮಿತಿಯಲ್ಲಿ ಸೇರುವರೊ? ಎಂದು ಕೇಳಲು ಕಾಂಗ್ರೆಸ ಅಧ್ಯಕ್ಷರು "ಅದು ಪಂಡಿತ ನೆಹರೂರ ನಿರ್ಣಯವನ್ನು ಅವಲಂಬಿಸಿದೆ" ಎಂದು ಹೇಳಿದರು.

ಕಾಂಗ್ರೆಸು ಅಧ್ಯಕ್ಷ ಶ್ರೀ. ಪುರುಷೋತ್ತಮದಾಸ ತಂಡನ್ನರು ಇಂದು ಉಪ ಮುಖ್ಯಮಂತ್ರಿ ಸರದಾರ ಪಟೇಲರಮನ್ನು, ಅನಂತರ ಆಹಾರ ಮಂತ್ರಿ ಶ್ರೀ ಕೆ ಎಂ ಮುನಸಿಯವರನ್ನು ಭೆಟ್ಟಿಯಾಗಿ ದೀರ್ಘ ಹೊತ್ತಿನ ವರೆಗೆ ಅವರೊಡನೆ ಚರ್ಚೆ ನಡೆಸಿದರು. ಶ್ರೀ ತಂಡನ್ನರು ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರನ್ನೂ ಭೆಟ್ಟಿಯಾಗಬಹುದು. ಅನಂತರ ಶ್ರೀ. ಸಿ. ರಾಜಗೋಪಾಲಾಚಾರಿ, ಮೌಲಾನಾ ಆಜಾದ ಇವರನ್ನೂ ಭೆಟ್ಟಿಯಾಗುವ ಈ ಕಾರ್ಯಕ್ರಮವಿನ್ನೂ ಸಿದ್ಧಿತವಾಗಿಲ್ಲ ಎಂದು ಶ್ರೀ ತಂಡನ್ನರು ಹೇಳಿದರು.

ನಾಸಿಕ ಅಧಿವೇಶನದಲ್ಲಿ ಪಾಸಾದ ಗೊತ್ತುವಳಿಗಳು ಅವುಗಳ ಅರ್ಥ ವಿವರಣೆಯ ವಿಷಯದಲ್ಲಿ ಶ್ರೀ. ತಂಡನ್ನರು ಚರ್ಚೆಸಲು ನಿರಾಕರಿಸಿದರು. ಕಾಂಗ್ರೆಸಿಗರ ನೈತಿಕ ಮಟ್ಟವು ಹೆಚ್ಚುವದು ಅಗತ್ಯವಿದೆ ಎಂಬ ವಿಷಯವನ್ನು ಅವರು ಹೆಚ್ಚು ಜೋರಿನಿಂದ ಹೇಳಿದರು:

"ಕಾಂಗ್ರೆಸ್ಸು ಬಲವಾದ ಸಂಸ್ಥೆಯಾಗಬೇಕೆಂದು ನನ್ನ ಇಚ್ಛೆ. ಕಾಂಗ್ರೆಸ್ಸು ಪ್ರಭಾವೀ ಸಂಸ್ಥೆಯಾಗಬೇಕಿದ್ದರೆ ಅದರಲ್ಲಿಯ ಜನರ ವೈಯಕ್ತಿಕ ಜೀವನವು, ಅವರಲ್ಲಿಯು ನೈತಿಕ ಮಟ್ಟವು ಉಚ್ಚ ತರಗತಿಯದಾಗಿರಬೇಕಾದುದು ಅಗತ್ಯ. ಕಾಂಗ್ರೆಸ ಘಟನೆಯಂತೆ ಸತತ ಖಾದಿಧಾರಿಯಾಗಿರದವನೂ ಮತ್ತು ಇನ್ನುಳಿದ ಮೂರು ಕರಾರುಗಳನ್ನು ಪೂರೈಸದವನೂ ಕಾಂಗ್ರೆಸ ಸದಸ್ಯನಾಗಲಾರನು. ಈ ನಿಯಮುಗಳನ್ನು ಚೂ ತಪ್ಪದೆ ಪಾಲಿಸುವಂಥ ಜವಾಬ್ದಾರಿ ನೂರು ಜನರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಯಾವ ಜಿಲ್ಲೆಯಲ್ಲಿಯೂ ಜನರು ಇಲ್ಲವೆಂಬುದನ್ನು ನಾನು ಬಲ್ಲೆ. ಆದರೆ ಕಾಂಗ್ರೆಸ ಯಾದಿಗಳನ್ನು ನೋಡಿದರೆ ನಾವಿರಾರು ಜನರು ಸದಸ್ಯರಾಗಿರುವದು ಕಂಡು ಬರುವದು ಆಂಧ್ರದಲ್ಲಿಬುಂತೂ ಈ ಸಂಖ್ಯೆ ಊಹೆ ಕೆಲವು ಲಕ್ಷಗಳಷ್ಟಿದೆ. ಇದು ಅಸಂಬದ್ಧವಾದುದು. ಇಂಥ ವಸ್ತಿಸ್ಥಿತಿ ಹೋಗಬೇಕು. ಕಾಂಗ್ರೆಸ ಸದಸ್ಯರ ಸಂಖ್ಯೆ ಕಡಿಮೆಯಾದರೂ ಚಿಂತೆ ಇಲ್ಲ. ಕೆಲವೇ ಜನರಿದ್ದರೂ ಅಂತಃಕರಣ ಪೂರ್ವಕವಾಗಿ ನಿಜವಾದ ಕಾಂಗ್ರೆಸ ಕಾರ್ಯಕರ್ತರಾಗಿರುವ ನಿಯಮುಗಳನ್ನು ಪರಿಪಾಲಿಸುವವರಾಗಿದ್ದರೆ ಸಾಕು. ಇಂಥ ಜನರ ಕೈಯಲ್ಲಿಯೇ ಕಾಂಗ್ರೆಸ ಸಂಸ್ಥೆಯ ನಿಯಂತ್ರಣ ವಿರಬೇಕು. ಈ ವಿಷಯದಲ್ಲಿ ನನಗೆ ಎಲ್ಲರಿಂದಲೂ ಸಹಕಾರ ಅಗತ್ಯವಿದೆ. ಕಾಂಗ್ರೆಸ ಘಟನೆಯನ್ನು ತಿದ್ದುವದಿ ಮಾಡಿ ನಿಜವಾದ ತತ್ವನಿಷ್ಠರಿಗೇ ಕಾಂಗ್ರೆಸಿನಲ್ಲಿ ಸ್ಥಾನ ದೊರೆಯಬೇಕು. ಡಂಭಾಚಾರಿಗಳಿಗೆ ಸ್ಥಾನವು ಸಿಗಕೂಡದು. ಹೀಗೆ ವ್ಯವಸ್ಥೆ ಮಾಡುವದು ಅಗತ್ಯವಿದೆ. ಕಾಂಗ್ರೆಸಿನ ಶುದ್ಧೀಕರಣ ಕಾರ್ಯದಲ್ಲಿ ಪ್ರಾಂತಗಳಿಂದ ಸಹಕಾರ ದೊರೆಯಬೇಕೆಂದು ನಾನು ಆಶಿಸುವೆನು" ಎಂದು ಕಾಂಗ್ರೆಸ ಅಧ್ಯಕ್ಷರು ಹೇಳಿದರು.

ನೆಹರು ಸರಕಾರದಲ್ಲಿ ವಿಶ್ವಾಸ

ರಾಜಾಜಿಯ ಅಭಿಪ್ರಾಯ

ಕಾಂಗ್ರೆಸ ಕಾರ್ಯಸಮಿತಿಯಲ್ಲಿ ನೆಹರು-ಪಟೇಲರಿಬ್ಬರೂ ಇರತಕ್ಕದ್ದು

ಶ್ರೀ. ರಾಜಗೋಪಾಲಾಚಾರ್ಯರು ಪಿ ಮಾಸನದಲ್ಲಿ ನಾಸಿಕದಿಂದ ಬಂದ ನಂತರ ಸಿ. ಟಿ. ಐ. ಪ್ರತಿನಿಧಿಗಿತ್ತ ಸಂದರ್ಶನದಲ್ಲಿ ಕಾಂಗ್ರೆಸ ಅಧಿವೇಶನದ ಬಗ್ಗೆ ಅಭಿಪ್ರಾಯವ್ಯಕ್ತ ಮಾಡುತ್ತ, ನೆಹರೂ ಸರಕಾರದಲ್ಲಿ ಇದಕ್ಕಿಂತ ಹೆಚ್ಚಿನ ವಿಶ್ವಾಸ ಪ್ರದರ್ಶನವು ಇನ್ನೆಲ್ಲಿಯೂ ಸಿಕ್ಕಲಾರದೆಂದರು.

"ಜಂ. ನೆಹರು ಸೂಚಿಸಿದುದ್ದೆಲ್ಲ ಸ್ವೀಕೃತವಾಯಿತು; ಅವರು ಬೇಡವೆಂದುದು ಬದ್ದು ಹೋಯಿತು.

ರಾಜಕೀಯ ದೃಷ್ಟಿಯಿಂದ ಈ ಅಧಿವೇಶನವು ಅತ್ಯಂತ ಮಹತ್ವಪೂರ್ಣವಾಯಿತು. ಆಶ್ಚರ್ಯಕಾರಕ ಘಟನೆಗಳು ಸಂಭವಿಸುವವೆಂದು ಆಶಿಸಿದವರಿಗೆ ನಿರಾಶೆಯಾಯಿತು. ಅಧ್ಯಕ್ಷರ ಭಾಷಣದಿಂದ ಜಾತೀಯ ದೋರಣೆಯು ಬಗೆಗಿದ್ದ ವಿಷಾದವೆ ದೂರಾಯಿತು ಎಂದೂ ಅವರು ಹೇಳಿದರು.

ಅಧ್ಯಕ್ಷರ ಆಯ್ಕೆಯಿಂದ ಉದ್ಭೂತವಾದ ಎಲ್ಲ ತೊಂದರೆಗಳು ನಿವಾರಣೆಯಾಗಿವೆಯೇ ಎಂದು ಕೇಳಿದ್ದಕ್ಕೆ, ಇನ್ನು ಎಲ್ಲವೂ ಸರಳವಾಗುವದೆಂದು ಆಶಿಸುವದಾಗಿ ನುಡಿದರು.

ರಾಜಾಜಿಯವರು ಮತ್ತೂ ಹೇಳಿದ್ದೇನೆಂದರೆ:—

ಪಂ. ನೆಹರೂರವರಿಗಿದ್ದ ಅಡಚಣೆಗಳ ಪೂರ್ಣ ಅರಿವು ನನಗಿದೆ. ಆದರೆ ಅವರು ನಾಡಿನ ಮುಖ್ಯಮಂತ್ರಿಯಾಗಿ ಹಾಗೂ ಕಾಂಗ್ರೆಸ ಕಾರ್ಯ ಸಮಿತಿಯ ಸದಸ್ಯರಾಗಿ ಮಾರ್ಗದರ್ಶನ ಮಾಡಲು ಶ್ರೀ. ತಂಡನ್ನರ ಅಧ್ಯಕ್ಷತೆಯಲ್ಲಿ ಸೇರಿದ ಅಧಿವೇಶನವು ಪರಿಸ್ಥಿತಿ ಸರಳಮಾಡಿಕೊಟ್ಟಿತು. ನಮ್ಮ ರಾಷ್ಟ್ರದ ಇಂದಿನ ವಸ್ತಿಸ್ಥಿತಿಯಲ್ಲಿ ಪಂಡಿತ ನೆಹರು ಮತ್ತು ಸರದಾರ ಪಟೇಲರ ಮಾರ್ಗದರ್ಶನ ಅನಿವಾರ್ಯವಿರುತ್ತದೆ. ಇವರಲ್ಲಿ ಒಬ್ಬರು ನಿವೃತ್ತರಾದರೆ ಸರಕಾರದ ಅಡಳಿತವು ಒಂದೇ ಮನಸ್ಸಿನಿಂದ ನಡೆಯುವದೆಂಬ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಅವರಿಬ್ಬರೂ ಕೂಡಿಯೇ ಕೆಲಸ ಮಾಡಬೇಕು ಸ್ವತಂತ್ರ ಸಾಮಾನ್ಯ ಸ್ಥಿತಿಯಲ್ಲಿರುವ ಮತವೆನ್ನು ನಾನು ಅನುಮೋದಿಸುತ್ತೇನೆ. ಇದಕ್ಕೆ ವಿರುದ್ಧವಾದ ಅಭಿಪ್ರಾಯವು ಕುದ್ಧ ಡಾಂಭಿಕತನ ಇವರಿಂದ ಯಾರಿಗೂ ಹಿತ ನಾಗುವದಿಲ್ಲ. ಇಬ್ಬರು ಸಹ ಕೂಡಿ ಕೆಲಸ ಮಾಡಿದ ನಾವು ಮುಂದಾದರೂ ಕೂಡಿಯೇ ಇರತಕ್ಕದ್ದು.

ಕಪ್ಪೆಯು ಹಾವನ್ನು ನುಂಗಿತು!

ಕಲ್ಕತ್ತೆಯ ಬಾಬ್ಬರ್ ಘಾಟಿನ ಒಳಯಲ್ಲಿರುವ ಮಹೇಂದ್ರ ಗಂಜ ಎಂಬ ಹಳ್ಳಿಯಲ್ಲಿ ಒಂದು ಕಪ್ಪೆಯು ೧ ತಾಸಿನ ಪರಿಗಿಲ ಇಂಚು ಉದ್ದದ ನಾಗರಹಾವಿನೊಡನೆ ಹೋರಾಡಿ ಕೊನೆಗೆ ಹಾವನ್ನು ನುಂಗಿತು. ಇದನ್ನು ನೋಡುತ್ತ ಸುಮಾರು ೧೫೦ ಹಳ್ಳಿಗರು ಕಪ್ಪೆಯು ಹಾವನ್ನು ನುಂಗಿಹತ್ತಲು ಹರ್ಷದಿಂದ ಕೂಗಿದರು.

ಎಳೆ ಮಕ್ಕಳಿಗೆ ಬೀಡಿ ಸಿಗರೇಟು ಮಾರಕೂಡದು

ಗಿಟ್ಟವರ್ಷದೊಳಗಿನ ಮಕ್ಕಳಿಗೆ ಬೀಡಿ ಸಿಗರೇಟು ತಂಬಾಕು ಅಥವಾ ಇನ್ನಾವುದೇ ತರಹದ ಸೇದುವ ವಸ್ತುಗಳ ವಿಶ್ರಣವನ್ನು ಮಾರಾದಲ್ಲಿ ಇನ್ನು ಮುಂದೆ ಮುಂಬಯಿ ವ್ಯಾಪ್ತಿಯಲ್ಲಿ ಅದನ್ನು ಅಪರಾಧವೆಂದು ಪರಿಗಣಿಸಲಾಗುವದು.

ಈ ಮಾತನ್ನು ಮುಂಬಯಿ ಗವರ್ನರರು ಇಂದು ಶಾಸನ ಸಭೆಗಳ ಸಂಯುಕ್ತ ಅಧಿವೇಶನದಲ್ಲಿ ಮಾತನಾಡುತ್ತ ಹೇಳಿದರು.

ಎಳೆ ವಯಸ್ಸಿನ ಮಕ್ಕಳು ತಂಬಾಕ ಸೇದುವ ಚಟ ಕಲಿಯುವದು ಅಸಹ್ಯವೆಂದು ಸರಕಾರವು ಭಾವಿಸಿರುವದಾಗಿ ಗವರ್ನರರು ಹೇಳಿದರು. ಆದುದರಿಂದ ಇದನ್ನು ಪ್ರತಿಬಂಧಿಸಲು ೧೬ ವರ್ಷಗಳ ಮುಂಬಯಿ ಮಕ್ಕಳ ಕಾಯದೆಯಲ್ಲಿ ತಿದ್ದುಪಡಿ ಮಾಡಲು ಸರಕಾರವು ಬಯಸಿದೆ ಎಂದು ಅವರು ತಿಳಿಸಿದರು.

ಮೈಸೂರು ಮಂಗಳೂರು ನಿಮಲಾನಂದ ಸ್ವಾಮಿಯವರಿಂದ

ಗೀತಾ ತರಗತಿಯ ಉದ್ಘಾಟನೆ

ಮಂಗಳೂರಿನಲ್ಲಿ ಶ್ರೀ ಸ್ವಾಮಿ ನಿಮಿಲಾನಂದ ಸ್ವಾಮಿಗಳ ನಿಧಿಯಿಂದ ನಡೆಯಿಸಲ್ಪಡುವ ಗೀತಾತರಗತಿಗಳ ಉದ್ಘಾಟನೆಯು ನಿನ್ನಾಂಕ ೧೫ರಂದು ಸಂಜೆ ಮಂಗಳೂರಿನ ರಾಮಕೃಷ್ಣ ಮಠದ ಅಧ್ಯಕ್ಷರೂ ವಿವೇಕಾನಂದ ಫಿಲೋಸಾಫಿಕಲ್ ಕಾಲೇಜಿನ ಪ್ರಿನ್ಸಿಪಾಲರೂ ಆದ ಸ್ವಾಮಿ ಫಿಮಲಾನಂದಜಿಯವರಿಂದ ಜರುಗಿತು. ಪ್ರಾರ್ಥನೆಯಾ ನಂತರ ಸ್ವಾಮಿಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ ಗೀತೆಯ ಘನತೆಯನ್ನೂ ಗೀತಾಭ್ಯಾಸದ ಆವಶ್ಯಕತೆಯನ್ನೂ ವಿವರಿಸಿದರು. ಗೀತಾ ಶಕ್ತಿಯಿಂದ ನಮ್ಮ ಜೀವನದಲ್ಲಿ ಚೈತನ್ಯವನ್ನು ತುಂಬಿಸಿಕೊಳ್ಳಬೇಕೆಂದರು.

ಬಳಿಕ ಡಾ। ಎಂ. ಕೇಶವ ಪೈಯವರು ತಮ್ಮ ಭಾಷಣದಲ್ಲಿ ಗೀತೆಯ ಸಂದೇಶ ಹೇಳಿದರಲ್ಲದೆ ತನ್ನ ಗುರುವಾದ ಶ್ರೀ ವಿಚಾರಾನಂದ ಸ್ವಾಮಿಗಳಿಂದ ತಾನು ಗೀತೋಪದೇಶ ಪಡೆದುದನ್ನೂ ನಮ್ಮ ಮಕ್ಕಳು ಧಾರ್ಮಿಕ ಭಾವನೆಯಿಂದ ಕೂಡಿರಬೇಕಾದರೆ ಗೀತೆಯಲ್ಲಿ ಹೇಳಿರುವಂತಹ ಧರ್ಮ ಜೀವನ ಅಗತ್ಯವೆಂದೂ ತಿಳಿಸಿದರಲ್ಲದೆ, ತಾನು ಮುಂದಿನ ಗಿಲ ೨೦ ಕ್ಲಾಸುಗಳಲ್ಲಿ ಕಲಿಸುವುದರ ಹಂಚಿಕೆಯನ್ನೂ ವಿವರಿಸಿ ಇಂದಿನ ನಮ್ಮ ಧರ್ಮ ಜೀವನವು ಸರಿದಾರಿಯಲ್ಲಿ ಸಾಗುವಂತೆ ಪ್ರತಿಯೊಬ್ಬನು ಗೀತಾಭ್ಯಾಸಮಾಡಬೇಕೆಂದರು.

ಕೊನೆಯಲ್ಲಿ ಶ್ರೀ. ಬಿ. ಅನಂತರಾಯರು ಸ್ವಾಮಿಜಿಯವರನ್ನೂ ಡಾ। ಪೈಗಳನ್ನೂ ಸಭಿಕರನ್ನೂ ವಂದಿಸಿದ ಮೇಲೆ ಸಭೆಯು ಕೊನೆಗೊಂಡಿತು.

ಕನ್ನಡ ಟೈಪ್‌ರೈಟರ್ ಸಮಿತಿ

ಕನ್ನಡಕ್ಕೆ ಟೈಪ್‌ರೈಟರನ್ನು ಸಂಯೋಜಿಸುವ ವಿಚಾರದಲ್ಲಿ ಜನಾಭಿಪ್ರಾಯ ಸಂಗ್ರಹಿಸಿ ಸರಕಾರಕ್ಕೆ ವರದಿ ಮಾಡಲು ಮೈಸೂರು ಸರಕಾರದಪಕ್ಷಿಂದ ನೇಮಿಸಲ್ಪಟ್ಟ ಸಮಿತಿಯ ಅಧ್ಯಕ್ಷರು ಶ್ರೀ. ಟಿ. ಟಿ. ಶರ್ಮರು ಮತ್ತು ಕಾರ್ಯದರ್ಶಿ ಎಸ್. ಜಿ. ನರಸಿಂಹಯ್ಯನವರು ಇವರು ದಿನಾಂಕ ೧೯-೯-೫೦ರಂದು ಸಂಜೆ ಸಿನೆಂಟ್ ಬಾಲಿಕಾ ಪಾಠ ಶಾಲೆಯಲ್ಲಿ ಆ ಸುರಿತಾದ ಸಭೆ ಜರುಗಿದಾಗ ಶ್ರೀ. ನರಸಿಂಹಯ್ಯನವರು ಸಮಿತಿಯ ಈ ವರೆಗಿನ ಕಾರ್ಯಕಲಾಪವನ್ನು ತಿಳಿಸಿದರು.

ಈ ಮೇಲೆ ಸಭಿಕರ ವರವಾಗಿ ಶ್ರೀಯುತರಾದ ಶಿವರಾಮ ಕಾರಂತ, ಕಡೆಂಗೋಡ್ಲು ಶಂಕರ ಭಟ್ಟ, ಎಸ್. ಮುಕುಂದ ರಾವ್, ಶಂಕರನಾರಾಯಣ ಕಾರಂತ ಮೊದಲಾದವರು ಟೈಪ್‌ರೈಟರಿಗಾಗಿ ಅಕ್ಷರಗಳಲ್ಲಿ ಬದಲಾವಣೆ ಅಗತ್ಯವಿದ್ದಲ್ಲಿ ಅದು ಈಗಿನ ಅಕ್ಷರದಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಬಾರದು, ಹೊಸತೇ ಅಕ್ಷರಗಳನ್ನು ಸೇರಿಸುವದಾಗಲೀ, ಅಕ್ಷರದ ಅಂದಗೆಡಿಸುವದಾಗಲೀ ಬದಲಾವಣೆಯಾಗಬಾರದು ಎಂದು ಮುಂತಾದ ಸೂಚನೆಗಳನ್ನಿತ್ತರು.

ಅರಬ ಪತ್ರಿಕೆ ಗಂಟಿಗಳಲ್ಲಿ ವಜ್ರಗಳ ಶೋಧ!

ಮುಂಬಯಿಗೆ ಮೊನ್ನೆ ಅಂಜೆ ಮೂಲಕ ಬಂದ ಆರು ಅರಬ ಪತ್ರಿಕೆಗಳ ಗಂಟುಗಳಲ್ಲಿ ಅಡಗಿಸಿಟ್ಟಿದ್ದ ಸುಮಾರು ೫೦೦ರೂ ಬೆಲೆ ಬಾಳುವ ವಜ್ರಗಳನ್ನು ಅಂಜೆ ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ. ಈ ಪಾರ್ಸಲುಗಳು ಕುವೇಟದಿಂದ ಮುಂಬಯಿಯ ಒಬ್ಬ ವ್ಯಾಪಾರಿಯ ಹೆಸರಿಗೆ ಮುಂಬಯಿಯ ವಿದೇಶ ಅಂಚೆ ಕಚೇರಿಗೆ ಬಂದಿತ್ತು.

ಬ್ರಿಟಿಶರ ಮತ್ತು ಸ್ಟಾಲಿನ್‌ರ ಕನಸುಗಳು ಒಂದೇ!

ಜನರಲ್ ಫ್ರಾಂಕೊರ ಹೇಳಿಕೆ

ಸ್ಪೇಶಲಿಸ್ಟ್ ಸಾಮ್ರಾಜ್ಯವಾದದಲ್ಲಿ ಯುರೋಪಿನ ಒಕ್ಕೂಟ ಸಾಧಿಸುವ ಬ್ರಿಟಿಶ್ ಕೂಲಿಕಾರ ಪಕ್ಷದ ಕನಸೂ ಸ್ಟಾಲಿನ್‌ರ ಕಮ್ಯುನಿಜಂದ ಕನಸೂ ಒಂದೇ ವಿಧದವಾಗಿವೆಯೆಂದು ಜನರಲ್ ಫ್ರಾಂಕೊರು ಸ್ಪೇನದ ಪತ್ರಿಕೆಗಳಿಗಿತ್ತ ಹೇಳಿಕೆಯಲ್ಲಿ ಹೇಳಿದರೆಂದು ಮಾದ್ರಿಡ್ ಆಕಾಶವಾಣಿ ವರದಿ ಮಾಡಿದೆ.

ಸಂಯುಕ್ತ ರಾಷ್ಟ್ರ ಸಂಘದ ಜನ್ಮವು ಅಕಾಲಿಕವಾಗಿದೆಯೆಂದೂ ಅದು ಬದುಕುವ ಸಂಭವ ಅತಿಕಡಿಮೆಯಾಗಿದೆಯೆಂದೂ ಫ್ರಾಂಕೊ ಹೇಳಿದ್ದಾರೆ.

"ಜಗತ್ತು ಸಾಮಾಜಿಕ ಸುಧಾರಣೆಯನ್ನು ಬಯಸುತ್ತಿದೆ. ಕಮ್ಯುನಿಜಂದ ಬೆಳವಣಿಗೆಯಿಂದ ನಮ್ಮ ಕಾಲದ ಸಾಮಾಜಿಕ ಘಟನೆಗಳ ಮಹತ್ವವು ಸಿದ್ಧವಾಗುತ್ತಿದೆ.

ನಜನಗಳನ್ನು ಪಾಲಿಸಬೇಕು. ಅಟ್ಲಾಂಟಿಕ್ ಸನದಿನಂತೆ ಅವು ಕೇವಲ ಸುಂದರ ಶಬ್ದಗಳಾಗಬಾರದು. ದೇಶಗಳನ್ನು ವಿಜಯಿ ಮತ್ತು ಪರಾಜಿತ ದೇಶಗಳೆಂದು ನಡೆಸಿಕೊಳ್ಳಬಾರದು. ಸಾಮ್ರಾಜ್ಯವಾದ ಮನೋಭಾವನೆ, ಅಂತರಾಷ್ಟ್ರೀಯ ಸಂಬಂಧದ ಕಾರ್ಯಾನ್ವಯದಿಂದ ಉದ್ಭವಿಸುವ ನೆರೆಕೊರೆಯವರ ದ್ವೇಷ ಭಾವನೆಗಳನ್ನು ಗತ ಕಾಲಭವಸ್ತುಗಳೆಂದು ಸಂಗ್ರಹಾಲಯದಲ್ಲಿಟ್ಟು ಬಿಡಬೇಕು. ಅನೇಕಾನೇಕ ರಾಷ್ಟ್ರಗಳೆದುರು ಇರುವ ಸಮಸ್ಯೆಗಳ ನಿವಾರಣೆಗೆ ಮತ್ತು ಪುನರ್ನಿವೇಶನ ಕಾರ್ಯಗಳಿಗೆ ಹೆಚ್ಚಿನ ಸಮಯ ಸಿಗಬೇಕು. ಅಂದರೆ ಮಾತ್ರ ಜಗತ್ತು ಒಕ್ಕಟ್ಟು ಮತ್ತು ಪರಸ್ಪರ ವಿಶ್ವಾಸಗಳನ್ನು ಹೊಂದಬಹುದು" ಎಂದೂ ಫ್ರಾಂಕೊರು ಹೇಳಿರುವರು.

ಆಹಾರ ಮಂತ್ರಿಗೆ ಉತ್ತರ

ಸನ್ಮಾನ್ಯವಾದ ಧುರೀಣರಾದ ಶ್ರೀ. ಜಯ ಪ್ರಕಾಶ ನಾರಾಯಣರು ಆಹಾರ ಮಂತ್ರಿ ಶ್ರೀ. ಮುನಶಿಯವರಿಗೆ ಉತ್ತರಿಸುತ್ತ ಉಪವಾಸದಿಂದ ಸತ್ಯವನ್ನು ಅನ್ವೇಷಿಸುತ್ತ ಸತ್ಯಾಗ್ರಹ ಹೂಡಿದ್ದಿಲ್ಲ, ಅವರಿಗೆ ತಿನ್ನಲು ಕಾಳು ದೊರೆಯದ್ದರಿಂದ ಹಸಿವೆಯನ್ನು ತಾಳದೆ ಎಲೆಬಳ್ಳಿಗಳನ್ನು ತಿಂದು ಕಾಯಲೆ ಗೊಳಗಾಗಿ ಮರಣಹೊಂದಿರುವರು ಎಂದು ಪಾಟ್ನಾದಲ್ಲಿ ಹೇಳಿರುವರು.

ತಮ್ಮ ದೃಢ ವಿಶ್ವಾಸ ಪಾತ್ರ

ಕೆನರಾ ಬ್ಯಾಂಕ್

ಲಿಮಿಟೆಡ್

ಸ್ಥಾಪಿತ 1906

ಐವತ್ತು ಸಹಸ್ರಕ್ಕೆ ಕುಟುಂಬದ ಬ್ಯಾಂಕರರು ಎಂಟು ಕೋಟಿಗೂ ಮಿಗಿಲಾದ ನಿಧಿಗಳು.



ಅದ್ಭುತವಾದ

ಪೆಪ್ಸ್

ಮಾತ್ರೆಗಳು

ಕೆಮ್ಮು, ಶೀತ, ನೆಗಡಿ ಶೀತಜ್ವರಗಳನ್ನು ನಿಲ್ಲಿಸುವುದು

ನೀವು ಪೆಪ್ಸ್ ಮಾತ್ರೆಗಳನ್ನು ಹೀರುವಾಗ ಔಷಧೀಯ ಸತ್ವಗಳನ್ನು ನೀವು ಗಂಟಲು ಶ್ವಾಸಕೋಶಗಳಲ್ಲಿ ಕುಂಬಿಸುತ್ತೀರಿ. ಪೆಪ್ಸ್‌ನ ಈ ಔಷಧೀಯ ಸತ್ವಗಳು ವಿಷಾಣುಗಳನ್ನು ತೀಕ್ಷ್ಣದಲ್ಲಿ ನಾಶಗೊಳಿಸುತ್ತವೆ, ನೋವನ್ನು ಊದುವಿಕೆಗಳನ್ನು ಶಮನಿಸುತ್ತವೆ, ಕೆಮ್ಮು, ಉಸಿರಾಟದ ತೊಂದರೆಗಳನ್ನು ಅಂತ್ಯಗೊಳಿಸುತ್ತವೆ. ಸೇವಿಸಲು ಆಹ್ಲಾದಕರವಾಗಿರುತ್ತವೆ.

PEPS ವಿಷನಿವಾರಕ ಗಂಟಲು ಏದೆ ಮಾತ್ರೆಗಳು

ಎದೆಯ ಮತ್ತು ಶ್ವಾಸಕೋಶಗಳ ತೊಂದರೆಗಳಿಗೆ ಅದ್ಭುತವಾದುವು.

ಏಜೆಂಟರು: ದಾದಾ ಎಂಡ್ ಸನ್, ಪಿ. ಟಿ. ಮದ್ರಾಸು

ಮದ್ರಾಸದಲ್ಲಿಯ ಆಹಾರ ಪರಿಸ್ಥಿತಿ ಶುಧಾರಿಸುತ್ತಿದೆ

ಆಹಾರ ಮಂತ್ರಿಗಳ ಹೇಳಿಕೆ

ಆಹಾರ ಮಂತ್ರಿಗಳಾದ ಜೆ. ಎಲ್. ರೋಚೆ ವಿಕ್ಟೋರಿಯಾ ಅವರು ಉತ್ತರ ಆರ್ಕಾಟ್ ಜಿಲ್ಲೆಯ ಸಂಚಾರದಲ್ಲಿ ಹೀಗೆ ಅಭಿಪ್ರಾಯ ಕೊಟ್ಟರು.—ಮದ್ರಾಸ ರಾಜ್ಯದಲ್ಲಿಯ ಆಹಾರ ಪರಿಸ್ಥಿತಿಯು ದಿನೇ ದಿನೇ ಸುಧಾರಿಸತೊಡಗಿದ್ದು ಭಯಗೊಳ್ಳಲು ಕಾರಣವಿಲ್ಲೆಂದೂ ಬ್ರಹ್ಮದೇಶ, ಸಯಾಮ ಹಾಗು ಇಜಿಪ್ತದಿಂದ ತರಿಸುವ ಅಕ್ಕಿಯಲ್ಲಿಯೂ ಕೆಲವೊಂದು ಅಕ್ಕಿಯನ್ನು ಕೇಂದ್ರ ಸರಕಾರದವರು ಮದ್ರಾಸದ ವಿನಿಮಯಕ್ಕೆ ಕೊಡಲು ಒಪ್ಪಿರುವರೆಂದೂ ಹೇಳಿದರು.

ಕೊಬ್ಬಿದ ಕಸಿಯ ಕುಚೇಷ್ಟೆ

ಕಾಲೇಜು ವಿದ್ಯಾರ್ಥಿನಿಯರ ಮೇಲೆ

ಕೊಬ್ಬಿದ ಕಸಿಯೊಂದರ ಕುಚೇಷ್ಟೆಯು ಮೂಲಕ ಬರೇಲಿಯ ವಿದ್ಯಾರ್ಥಿನಿಯರು ಬಹಳ ತೊಂದರೆಗೀಡಾಗಿದ್ದಾರೆ.

ಇಲ್ಲಿಯ ಸರಕಾರಿ ಮಹಿಳಾ ಕಾಲೇಜಿನ ೧೧೧೫ ವಿದ್ಯಾರ್ಥಿನಿಯರನ್ನು ಅದು ಇಲ್ಲಿಯ ವರೆಗೆ ಕಚ್ಚಿರುತ್ತದೆ. ಇಲ್ಲವೆಂಬಂತಿರುತ್ತದೆ. ಆದರೆ ಅದು ಈ ವರೆಗೆ ಸಿಕ್ಕಿರುವುದಿಲ್ಲ. ಅದನ್ನು ಹಿಡಿಯುವ ಇಲ್ಲವೆ ಕೊಲ್ಲುವ ಪ್ರಯತ್ನಗಳು ವಿಫಲವಾಗಿರುತ್ತವೆ. ಚಿಂತೆಗೊಳಗಾದ ಲೇಡಿ ಪ್ರಿನ್ಸಿಪಾಲಳು ಸಹಾಯಕ್ಕಾಗಿ ಜಿಲ್ಲಾ ಮ್ಯಾಜಿಸ್ಟ್ರೇಟರ ಮೊರೆಹೊಕ್ಕಿರುವಳು.

ನಾಲ್ಕು ಲಕ್ಷ ಟನ್ ಆಹಾರ ಬೆಳೆಗೆ ಹಾನಿ

ಉತ್ತರ ಭಾರತದಲ್ಲಿ ನೆರೆಹಾವಳಿಯಿಂದ

ಗೋದಿಯ ಬೆಳೆಯು ಕಳೆದ ನಿರುಷ್ಕ್ಯಕ್ಕಿಂತ ಈ ವರುಷ ನೂರಕ್ಕೆ ೧೦ರಷ್ಟು ಹೆಚ್ಚು ಬಂದಿದೆಯೆಂದು ಒಕ್ಕಲತನ ಶಾಖೆಯವರು ಸ್ಪಷ್ಟಪಡಿಸಿದ ಮುನ್ನೋಟದಿಂದ ತಿಳಿಯುತ್ತದೆ.

ಉತ್ತರ ಭಾರತದಲ್ಲಿ ನೆರೆಹಾವಳಿಯಿಂದ ೩—೪ ಲಕ್ಷ ಟನ್ನು ಆಹಾರ ಧಾನ್ಯಗಳ ಬೆಳೆಯು ಹಾಸಿಗೊಂಡಿದೆಯೆಂದು ಅಧಿಕೃತ ವರ್ಗಗಳಿಂದ ತಿಳಿಯುತ್ತದೆ. ಆಯಾತ ಕಾರ್ಯಕ್ರಮದಲ್ಲಿ ಹೆಚ್ಚು ಆಯಾತ ಮಾಡುವ ವಿಚಾರವನ್ನು ಇರುವದಿಲ್ಲ.

ತೋಳ ಮತ್ತು ಕರುಬಗಳ ಹಾವಳಿ

೨೮ ಬಾಲಕರ ಬಲಿ

ಅಲ್ಲಹಾಬಾದದಿಂದ ೩೬ ಮೈಲು ದೂರದಲ್ಲಿರುವ ಸಿಂತು ತಹಸೀಲದ ಹಳ್ಳಿಗಳಲ್ಲಿ ತೋಳ ಮತ್ತು ಕಿರುಬಗಳು ಹದಿಮೂರು ವರುಷದ ಕೆಳಗಿನ ೨೮ ಬಾಲಕರನ್ನು ತಿಂದಿವೆಯೆಂದು ತಿಳಿದುಬಂದಿದೆ. ಹತ್ತು ಜನರು ಗಾಯಗೊಂಡಿಗೆ ಪಾರಾಗಿರುವರು. ಅನೇಕ ಕರುಗಳು ಬಲಿಯಾಗಿವೆ. ತೋಳಗಳ ಹಾವಳಿ ಇದೇ ಫೆಬ್ರುವರಿಯಲ್ಲಿ ವ್ಯಾರಂಭವಾಗಿ ಅಗಸ್ಟ ಮತ್ತು ಸಪ್ಟಂಬರದಲ್ಲಿ ವಿಶೇಷವಾಗಿ ಜನರನ್ನು ಗಾಬರಿಗೊಳಿಸಿದೆ. ಮನುಷ್ಯ ರಕ್ತದ ರುಚಿ ಹತ್ತಿರುವದರಿಂದ ಮನುಷ್ಯಂಚಿಯಲ್ಲಿಯೂ ದಾಳಿ ಪ್ರಾರಂಭಿಸಿವೆ. ಧೂಳ್ತ-ವರನ್ನೂ ಬಿಟ್ಟಿಲ್ಲ.

ಪಂ. ನೆಹರೂರ ಬಲ ಹೆಚ್ಚಿತು

ಬಾಲ್ಟಿಮೋರ ಸನ್ ಪತ್ರಿಕೆಯ ಅಭಿಪ್ರಾಯ

"ಭೂಕ್ಷೇತ್ರದ ಮುಖ್ಯ ಮಂತ್ರಿ ಪಂಡಿತ ನೆಹರೂರ ಜಾತ್ಯತೀತ ಧೋರಣೆಗೆ ಕಾಂಗ್ರೆಸಿನ ಹೊಸ ಅಧ್ಯಕ್ಷರಾದ ಶ್ರೀ. ತಂಡನರು ಬೆಂಬಲ ಕೊಟ್ಟಿರುವುದರಿಂದ ಅಂತರ ರಾಷ್ಟ್ರೀಯ ಕ್ಷೇತ್ರದಲ್ಲಿ ಪಂಡಿತ ನೆಹರೂರ ವರ್ಚಸ್ಸು ಹೆಚ್ಚುವಂತಾಗಿದೆ" ಎಂದು ಬಾಲ್ಟಿಮೋರ ಸನ್ ಪತ್ರಿಕೆಯು ಇಂದು ಬರೆದ ಅಗ್ರಲೇಖದಲ್ಲಿ ಅಭಿಪ್ರಾಯ ವ್ಯಕ್ತ ಮಾಡಿದೆ.

ಭಾರತದಲ್ಲಿ ಕೆಲವೊಂದು ಬಲ ಪಕ್ಷದವರ ಧೋರಣವು ಸ್ವಾಚ್ಯ ಸರ್ವಾಧಿಕಾರ ಪ್ರಸ್ತಾವನೆಯತ್ತ ಒಲಿದವುಗಳಾಗಿದ್ದನೆಂಬ ವಿಷಯವನ್ನು ಚರ್ಚಿಸಿ ಹಾಗೂ ತೀವ್ರ ಗಾಮಿಗಳ ಧೋರಣವನ್ನು ಅಂಕೆಯಲ್ಲಿಟ್ಟು ಕೊಳ್ಳಬಲ್ಲ ಪಂಡಿತ ನೆಹರೂರ ವರ್ಚಸ್ಸು ಭಾರತದ ಹೊರಗೂ ಅಂತರ ರಾಷ್ಟ್ರೀಯ ಕ್ಷೇತ್ರದಲ್ಲಿ ಹೆಚ್ಚಲು ಅನುಕೂಲವಾಯಿತು. ಪಂಡಿತ ನೆಹರೂರು ಕಮ್ಯುನಿಷ್ಟ ಚೀನಕ್ಕೆ ಯು. ರಾ. ಸಂಘದಲ್ಲಿ ಸ್ಥಾನ ಕೊಡಬೇಕೆಂದು ಪ್ರತಿಪಾದಿಸುತ್ತಿರುವುದರಿಂದ ಅವರ ಧೋರಣವು ಅಮೇರಿಕೆಯ ಧೋರಣದಿಂದ ಭಿನ್ನವಾಗಿದೆ. ಆದರೆ ಪಂಡಿತ ನೆಹರೂರು ಮಾಡುವ ಸ್ಪಷ್ಟೀಕರಣವೊಂದು ಭಾಷಣದಲ್ಲಿಯೂ ಅವರು ಕಮ್ಯುನಿಷ್ಟರ ಮೂಲ ತತ್ವವಾದ ಜಾಗತಿಕ ಕ್ರಾಂತಿಯ ಧೋರಣವನ್ನು ಎಂದಿಗೂ ಒಪ್ಪಲಾರದವರೆಂಬುದು ಸುಸ್ಪಷ್ಟವಿದೆ ಎಂದೂ ಆ ಪತ್ರಿಕೆಯು ಬರೆದಿದೆ.

ಹುಬ್ಬಳ್ಳಿಯಲ್ಲಿ ಕೆನರಾ ಬ್ಯಾಂಕಿನ ಚೇರಮನ್ನರು

ಹುಬ್ಬಳ್ಳಿಯಲ್ಲಿ ತಾ. ೨೬ ರಂದು ಸಾಯಂಕಾಲ ೬ ಗಂಟೆಗೆ ಕೆನರಾ ಬ್ಯಾಂಕಿನಲ್ಲಿ ಆ ಬ್ಯಾಂಕಿನ ಚೇರಮನ್ನರಾದ ಶ್ರೀ ದಾಮೋದರ ಮೈಯರ ಗೌರವಾರ್ಥ ಒಂದು ಚಿಕ್ಕ ಸಂತೋಷ ಕೂಟವನ್ನು ನಿರ್ವಹಿಸಲಾಗಿದ್ದಿತು. ಆ ಕಾಲಕ್ಕೆ ಅಲೆಪ್ಪೀಸಹಾರವಾದ ನಂತರ ಶ್ರೀ ಮೊಹಿದೆಯವರು ಶ್ರೀ. ಮೈಯವರ ಹಾಗು ಕೆನರಾ ಬ್ಯಾಂಕಿನ ಗುಣ ವ್ರಶಂಸೆಯನ್ನು ಮಾಡಿ ಈ ಬ್ಯಾಂಕು ಭಾರತದಲ್ಲಷ್ಟೇ ಅಲ್ಲದೆ ಪಾಕಿಸ್ತಾನದಲ್ಲಿಯೂ ತನ್ನ ಶಾಖೆಗಳನ್ನು ನಿರ್ವಿಸಿದ್ದುದನ್ನು ನೋಡಿದರೆ ಸಕತೋದ್ಯೋಗ, ಕಾರ್ಯದಕ್ಷತೆ, ಜನಾನುರಾಗ ಮೊದಲಾದವುಗಳ ನಿದರ್ಶನವೇ ಇದೆಂದು ಗೊತ್ತಾಗದಿರದೆಂದು ಹೇಳಿ ಶ್ರೀ. ಮೈಯವರನ್ನೂ ಅವರ ಸಹಕಾರಿಗಳನ್ನೂ ಅಭಿನಂದಿಸಿದರು. ಬಳಿಕ ಶ್ರೀ ಗೋಳಿಕೇರಿ ರಮಾಕಾಂತ ರಾಯರೂ ಶ್ರೀ ಮೈಯವರ ಪರಿಚಯ ತಮಗೆ ಹೇಗಾಯ್ತೆಂಬುದನ್ನೂ ಮಂಗಳೂರಿನ ಕೀರ್ತಿಯು ಕೇವಲ ಹಂಚುಗಳ ಸಲುವಾಗಿರದೆ ಹಣದ ವ್ಯವಹಾರದಲ್ಲಿಯೂ ಹೆಚ್ಚಿದ್ದುದನ್ನು ಸಾರ್ಮಿಕವಾಗಿ ಬಣ್ಣಿಸಿದರು ನಂತರ ಶ್ರೀ ಮಹಾಲಿಂಗ ನೆಟ್ಟರು ಕೆನರಾ ಬ್ಯಾಂಕಿನಲ್ಲಿ ಇಡುಗುಟ್ಟುದಾರರಿಗಿರುವ ವಿಶ್ವಾಸವನ್ನು ಪ್ರಕಟಿಸಿದರು.

ಶ್ರೀ. ದಾಮೋದರ ಮೈಯವರು ಅಭಿನಂದನೆಯ ಮಾತುಗಳಿಗೆ ಉತ್ತರ ಕೊಡುತ್ತ ನಾನು ವಿಶೇಷವಾಗಿ ಬ್ಯಾಂಕಿನ ಪ್ರಗತಿಗೆ ಜನತೆಯಲ್ಲಿರುವ ಸದ್ಭಾವನೆಯೇ ಕಾರಣ; ಅದುವೇ ನಿಜವಾದ ಬಂಡವಾಳೆಂದು ಹೇಳಿ ತನಗೆ ನೂಡಿದ ಸನ್ಮಾನವೆಲ್ಲ ವೈಯಕ್ತಿಕವಾಗಿರದೆ ಆ ಸಂಸ್ಥೆಯಲ್ಲಿ ದುಡಿದ ಹಾಗು ದುಡಿಯುತ್ತಿರುವ ಸಹಕಾರಿಗಳ ಹಾಗು ಅಲ್ಲಲ್ಲಿಯ ಜನತೆಯ ಪ್ರೇಮಾದರಗಳ ಪ್ರತೀಕವೆಂದು ತಾವು ಭಾವಿಸುವದಾಗಿ ಹೇಳಿದ ಮೇಲೆ ಪುಷ್ಪಗುಚ್ಛ ಸಮರ್ಪಣೆಯಾಗಿ ಸಭೆ ಕೊನೆಗೊಂಡಿತು.

ಸರಕಾರೀ ನೌಕರರು ಖಾದಿ ಬಟ್ಟೆಯನ್ನೇ ಧರಿಸಬೇಕು

ಇದೇ ೨೫ಕ್ಕೆ ಪುಣೆಯಲ್ಲಿ ಪ್ರಾರಂಭವಾಗಲಿರುವ ಮುಂಬಯಿ ಶಾಸನಸಭೆಯ ಅಧಿವೇಶನದಲ್ಲಿ ಬಟ್ಟೆಯ ಕೂರತೆಯನ್ನು ಕಲಮಟ್ಟಿಗೆ ಕಡಿಮೆಮಾಡುವ ಉದ್ದೇಶದಿಂದ ಪೋಲೀಸರನ್ನುಳಿದು ಇತರ ಎಲ್ಲಿ ಸರಕಾರೀ ನೌಕರರು ಖಾದೀ ಬಟ್ಟೆಯನ್ನು ಧರಿಸಬೇಕೆಂದೂ ಮತ್ತು ವಿದೇಶೀ ಪೋಷಾಕನ್ನು ಧರಿಸಿದವನಲ್ಲಿ ತಾನು ಇತರರಿಗಿಂತ ಶ್ರೇಷ್ಠನೆನೆಂಬ ಭಾವನೆಯುಂಟಾಗುವದರಿಂದ ನ್ಯಾಯಾಧೀಶ್ವ ಸರಕಾರೀ ನೌಕರನು ಹಿಂದೀ ಪೋಷಾಕನ್ನು ಧರಿಸಬೇಕೆಂದೂ ಹೇಳುವ ಒಂದು ಗೊತ್ತುವಳಿಯನ್ನು ಶ್ರೀ. ಅಂಬಾಲಾಲ ಸಿ. ಶಹಾರವರು ತರಲಿರುವರು.

ಅದರಂತೆಯೇ ಶಿಕ್ಷಣ ಮತ್ತು ವಿತ್ತವ್ಯಯದ ದೃಷ್ಟಿಯಿಂದ ಸರಕಾರದವರು ಎಸ್. ಎಸ್. ಸಿ. ಪರೀಕ್ಷೆಯ ನಿಯಂತ್ರಣ ಮತ್ತು ನಡೆಸುವ ಹೊಣೆಯನ್ನು ದ್ವಿಭಾಷಾ ಪ್ರದೇಶಗಳಲ್ಲಿಯೂ ವಿಶ್ವವಿದ್ಯಾಲಯಗಳಿಗೇ ಒಪ್ಪಿಸಬೇಕೆಂಬ ಒಂದು ಗೊತ್ತುವಳಿಯನ್ನು ಡಾ ಜಿ. ಎಸ್. ಮಹಾಜನಿಯವರು ವಿಧಾನಮಂಡಲದಲ್ಲಿ ಮಂಡಿಸಲಿರುವರು.

ಲಕ್ಷ್ಮೇಪುರ ಜಿಲ್ಲೆಯಲ್ಲಿ ಭೂಕಂಪದ ಪರಿಣಾಮ

ಮೂರು ಲಕ್ಷ ಜನರು ಪೀಡಿತರಾಗಿದ್ದಾರೆ

ಅಸ್ಸಾಮದ ಸಬಾನ ಸಿರಿ ನದಿಗೆ ಬಂದ ಮಹಾಪೂರವು ಕಡಿಮೆಯಾಗಿದ್ದು ನೀರು ಇಳಿಯುತ್ತಿರುವದು. ಆದರೆ ಇನ್ನೂ ಅನೇಕ ಪ್ರದೇಶಗಳು ನೀರಲ್ಲಿ ಮುಳುಗಿರುತ್ತವೆ. ಚಿನಾಯ—ಡೆಹುರಿ ಎಂಬ ಹಳ್ಳಿಯು ಇಂಥ ದುಸ್ಥಿತಿಗೀಡಾಗಿದ್ದು ಕಳೆದ ಶುಕ್ರವಾರ ಆ ಪ್ರದೇಶಕ್ಕಾಗಿ ನಿರ್ಮಾಣ ಅಕ್ಕಿಯನ್ನು ವಿಮಾನದಿಂದ ಬಿಗೆಯಲಾಯಿತು.

ಭೂಕಂಪ ಮತ್ತು ಮಹಾಪೂರದಿಂದ ಲಕ್ಷ್ಮೇಪುರ ಜಿಲ್ಲೆಯೊಂದರಲ್ಲಿಯೇ ಮೂರು ಲಕ್ಷ ಜನರು ಪೀಡಿತರಾಗಿದ್ದಾರೆಂದು ಅಧಿಕೃತ ವರ್ಗಗಳಿಂದ ತಿಳಿದು ಬಂದಿದೆ.

ಜನರು ಮಹಾಪೂರದ ಅನಾಹುತಕ್ಕೀಡಾಗಿದ್ದರೂ ಈಗ ಕುಡಿಯಲು ತಿಳಿ ನೀರು ಸಿಗದಂತಾಗಿದೆ. ಕಾರಣ ಸರಕಾರದವರು ಬೋರಿಂಗುಗಳನ್ನು ತೋಡಿಸುವ ವಿಚಾರದಲ್ಲಿದ್ದಾರೆ.

ಗಾಂಧಿ-ಟಾಲಸ್ಟಾಯರ ಪತ್ರವ್ಯವಹಾರದ ಗ್ರಂಥ

ಟಾಲಸ್ಟಾಯರ ಸಮಾಧಿಯು ಮೇಲಿರಿಸಲು ಕಳಿಸಲಾಗುವದು

ಮಹಾತ್ಮಾ ಗಾಂಧಿ ಹಾಗೂ ಟಾಲಸ್ಟಾಯರ ನಡುವೆ ನಡೆದ ಪತ್ರವ್ಯವಹಾರ ಸಂಗ್ರಹಿಸಿಟ್ಟಿರುವ ಗ್ರಂಥವನ್ನು ಟಾಲಸ್ಟಾಯರ ಛಂಡೆಯು ಪುಣ್ಯತಿಥಿಯ ಸಮಿತ್ತ ರಷ್ಯದ ಯಾಸನಯಾ ಗ್ರಾಮದಲ್ಲಿ ನಡೆಯುವ ಸಮಾರಂಭದ ಕಾಲಕ್ಕೆ ಅವರ ಸಮಾಧಿಯ ಮೇಲಿರಿಸಲು ಬೇಗ ಕಳಿಸಲಿರುವದಾಗಿ ತಿಳಿಯುತ್ತದೆ.

ಪ್ರಸಿದ್ಧ ಇತಿಹಾಸಕಾರರಾದ ಡಾಕ್ಟರ ಕಾಲಿದಾಸ ನಾಗರು ಇದನ್ನು ಸಂಗ್ರಹಿಸಿ ಬರೆದಿದ್ದು ಗಾಂಧೀಜಿ ಪಥನೂಲೆಯೆಕ್ಕೆ ಇದನ್ನು ಪ್ರಸಿದ್ಧಿಸಲಾಗಿದೆ. ಮಹಾತ್ಮಾ ಗಾಂಧಿಯವರು ಸ್ವತಃ ನೂತ ನೂಲಿನಿಂದ ತಯಾರಿಸಿದ ಖಾದಿ ಅಂಗಿಯನ್ನು ಈ ಗ್ರಂಥಕ್ಕೆ ಆಚ್ಛಾದನ ಕಳಿಸಲಾಗುವದು.

ಕಡಿತ ಘಾಯ ಚರ್ಮ ಘಾತಗಳಿಗೆ
ಕುಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮು ನಿಂದ ಲೇಪಿಸಿರಿ. ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನಃ ನಿರ್ಮಿಸುತ್ತದೆ. ಊದುಬತ್ತಿಕೆ ಕೋನನ್ನು ಕಡಿಮೆ ಮಾಡುತ್ತದೆ.

ಕುಟಿಕೂರಾ ಮುಲಾಮು
CUTICURA OINTMENT

ಬಸ್ಸು ಪ್ರಯಾಣಿಕರಿಗೆ ಸೂಚನೆ

ಇತ್ತೀಚೆಗೆ ಬಸ್ಸು ಟಿಕೇಟು ಮುಂದಾಗಿ ಪಡೆಕೊಂಡು ಪ್ರಯಾಣ ಬೆಳಸದೆ ಆದರೆ ನೊಬಲಗು ರಿಫಂಡ್ ಕೇಳುವಂಥಾ ಪದ್ಧತಿ ದಿನೇ ದಿನೇ ಪ್ರಬಲವಾಗಿ—ಬಂದಿದೆ. ಕಾರಣ ಕೆಲವರು ಪ್ರಯಾಣದ ಆತ್ಯಾವಶ್ಯಕತೆ ಗನುಸಿಸದೆ—ಟಿಕೇಟು ಮೌಲ್ಯ ಹಾಸ್ಸು ದೊರೆಯುವುದಾಗಿ ಕೂಡಾ ತಿಳುವಳಿಕೆಯಿಂದ ಟಿಕೇಟು ಪಡಕೊಂಡು ಆ ಟಿಕೇಟಿನಲ್ಲಿ ನಮೂದಿಸಿರುವ ಸಮಯವನ್ನು ಲಕ್ಷಿಸದೆ, ಸಮಯ ತಪ್ಪಿಸಿ ಬರುವುದು. ಇದರಿಂದ ಸೀಟುಗಳು ಖಾಲಿಯಾಗಿ ಇರಗೊಡಿಸಿ ಸರ್ವಿಸು ಬಿಡಲ್ಪಟ್ಟು ಅತೀ ಅಗತ್ಯದಿಂದ ಪ್ರಯಾಣಿಸುವವರಿಗೆ ಕೂಡಾ ತೊಂದ್ರೆಗೊಳಿಸುವಂತಾಗುತ್ತಾ ಬರುವುದಲ್ಲದೆ ಸೀಟು ಇರುತ್ತಾ ಟಿಕೇಟು ಕೊಡುವುದಿಲ್ಲವಾಗಿ ಇತ್ಯಾದಿ ಆರೋಪ ಹೊರಿಸಿ ಬರುವ ಕಂಪ್ಲೈಂಟಿಗೂ ಆಸ್ಪದ ಕೊಡುತ್ತಾರೆ. ಬಸ್ಸು ಟಿಕೇಟು, ಪ್ರಯಾಣಿಸುವವರೇ ಪಡೆದು ಅವರೇ ಉಪಯೋಗಿಸ ಬೇಕಾಗಿ ಶಿವ್ಯಾ ಇತರ ಯಾರಿಗೂ ವಿಕ್ರಯಿಸುವುದಾಗಲೀ ಪ್ರಯಾಣ ಬೆಳಸುವರೇ ಕೊಡುವುದಾಗಲೀ ಕೊಡದಾಗಿ ಸರಕಾರದ ಕಠಿಣ ಕಾನೂನು ಕೂಡಾ ಇದ್ದರೂ ಪ್ಯಾಸೆಂಜರರು ಇದಕ್ಕೇ ವಿರುದ್ಧವಾಗಿ ನಡೆಯುವುದು ನಮ್ಮ ತಿಳುವಳಿಕೆಗೆ ಬಂದಿದೆ. ಇನ್ನು ಮುಂದೆ ಅದನ್ನು ತಮ್ಮ ಪ್ರಯಾಣದ ಅವಶ್ಯಾವಶ್ಯಕತೆ ತಿಳಕೊಂಡು ಟಿಕೇಟು ಮುಂದಾಗಿ ಪಡಕೊಂಡು ತಪ್ಪದೆ ಪ್ರಯಾಣ ಮಾಡಬೇಕಾಗಿಯೂ, ಈ ಮೇಲಿನ ಅವ್ಯವಸ್ಥೆಗೆ ಎಡೆಕೊಡಬಾರದಾಗಿ ನಾವು ವಿನಂತಿಸುವುದಲ್ಲದೆ ಪ್ರಯಾಣ ಬೆಳಸದೆ ತರುವ ಟಿಕೇಟುಗಳ ನೊಬಲಗನ್ನು ವಾಪ್ಸು ಕೊಡುವ ಕ್ರಮವಿಲ್ಲವೆಂಬುದನ್ನು ಮುಂದಾಗಿ ತಿಳಿಸಲು ಇಚ್ಛಿಸುತ್ತೇವೆ.

ಮಂಗಳೂರು
10-9-49

ಜ್ಯೊಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ, ಮಂಗಳೂರು.
ದಿ ಜ್ಯೊಂಟ್ ಬುಕ್ಕಿಂಗ್ ಆಫೀಸ್, ಕೊಡಿಯಾಲಬೈಲು.

THE CANARA BANKING CORPORATION LTD.

Estd: 1906.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಹೆಡ್ ಆಫೀಸು—ಉಡುಪಿ

ಮೂಲ ಧನ:

ಅಧಿಕೃತ	ರೂ. 25,00,000
ಚಂದಾ ಆರ್ಪಿಸಿದ್ದು ಮತ್ತು ವಸೂಲಾದ್ದು	ರೂ. 20,00,000
ಕ್ಷೇಮ ನಿಧಿಗಳು	ರೂ. 10,21,747
ಒಟ್ಟು ವಲ್ಲಾವಣೆ ಭಂಡವಾಳ	ರೂ. 303,02,976

ಗಿರಾಕಿಗಳ ತೃಪ್ತಿಯೇ ನಮ್ಮ ಗುರಿ!

ಸಕಲ ತರದ ಬ್ಯಾಂಕಿಂಗ್ ವಹಿವಾಟುಗಳನ್ನು ಕೈಕೊಳ್ಳಲಾಗುವುದು

(Regd

ಅಮೃತಾಂಜನ

ತಲೆನೋವಿಗೆ, ಶರೀರನೋವಿಗೆ, ಉಳುಕು, ಉತ್ತಿಗೆ, ಭುಜ, ಹಲ್ಲುನೋವಿಗೆ ಇವೆಲ್ಲಕ್ಕೂ ಎದೆನೋವು, ಗಾಯಗಳು, ಬಾಸುಳೊಳ್ಳುವುದು, ಚೇಳು ವಿಷಮುಂತಾದ ಚೇಳು, ಪಕ್ಷವಾತ, ಪೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಕಾಲದವಿರಾಮ ನಿಶ್ಚಿಂತ ಜೀವನಕ್ಕೆ – ಕುಟುಂಬದ ಸುಖ ಸೌಕರ್ಯಕ್ಕೆ

ಅತ್ಯಮೂಲ್ಯ ಆಕರ್ಷಕ ವಿಮಾಯೋಜನೆಗಳು

ಮಾಸವಹ ಕೇವಲ ರೂ. 55/-ರ ವಿನಿಯೋಗದಿಂದ ರೂ. 30,080/- ನಿಧಿ ನಿಮ್ಮದಾಗುವುದು

ಆಥವಾ ವರ್ಷಂಪ್ರತಿ ರೂ. 1,995ರಂತೆ ಕಾಯಂ ಆಗಿ ದೊರೆಯುವ ಅಜೀವ ವರ್ಷಾಸನ (ವರ್ಷದಲ್ಲಿ ನೀವು ತೆತ್ತ ಹಣ ರೂ. 660/ ಮಾತ್ರ)

ಆಥವಾ ನಿಶ್ಚಿತ ಅವಧಿಯಲ್ಲಿ ರೂ. 17830/- ನಗದು

ಆಥವಾ ನಿರ್ದಿಷ್ಟ ಅವಧಿಯಲ್ಲಿ ರೂ. 22,500/- ಮತ್ತು ಮರಣಾನಂತರ ಇನ್ನೊಮ್ಮೆ ರೂ. 10,000/-

ಮೇಲೆ ನಮೂದಿಸಿದುದು ಮಾತ್ರವಲ್ಲದೆ ಕ್ಲುಪ್ತ ಅವಧಿಯ ಮೊದಲು, ಯಾವ ಸಮಯದಲ್ಲೇ ಆಗಲಿ, ಮರಣ ಹೊಂದಿದಲ್ಲಿ, ವರ್ಷಕ್ಕೆ ರೂ. 1000/-ಕ್ಕೆ ರೂ. 30/-ರಂತೆ ಖಾತ್ರಿಯಾಗಿ ಬೋನಸ್ಸು ದೊರೆಯುವ ರೂ. 10,000/-ದ ಪೂರ್ಣ ವಿಮಾರಕ್ಷಾ ಕವಚ ಸಹಾ.

ವಿಮಾ ಕ್ಷೇತ್ರದಲ್ಲಿ 40 ವರ್ಷಕ್ಕೆ ಮಿಕ್ಕಿ ದುಡಿದು ಉತ್ತಮ ಅನುಭವ ಗಳಿಸಿದ ನಿಮ್ಮ ವಿಮೆಯ ಉಶ್ಯೈಷ್ಯ ಸಲಹೆಗಾರರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಚೀಫ್ ಏಜೆಂಟ್ಸ್:

ದಿ ಬೊಂಬ್ಬಾ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಬೊಂಬಾಯಿ ಲೈಫ್ ಬಿಲ್ಡಿಂಗ್, ಉಡುಪಿ (ದ. ಭಾರತ)

M/s. KOCHIKAR BROTHERS, LTD.,

Chief Agents:

The Bombay Life Assurance Co. Ltd.,

(Bombay-Life Building Udipi S. India)

With Offices at:—Mangalore, Calicut, Coimbatore, Madura, Bangalore City, Trivandrum, Madras, Bombay.

ಕೆನರಾ ಬ್ಯಾಂಕು, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೂಡಿಗಾರಿಕೆ ಪರಿಮಿತಿಸಲ್ಪಟ್ಟು) ಭಾರತದಲ್ಲಿ ಬ್ಯಾಂಕಿಗರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧,೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಮುದ್ದತಿ ಸ್ವೀಕರಿಸಲಾಗುತ್ತದೆ.

೩ ತಿಂಗಳು ..... ನೂರಕ್ಕೆ ವರ್ಷಕ್ಕೆ ೨।

೪ರಿಂದ ೫ ತಿಂಗಳು ..... ,, ,, ೨॥

ರೂ. ೧,೦೦೦ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಮಂಗಳೂರು ಶಾಖೆಗಳು:

(1) ಬಂದರ ರೋಡ (2) ಡೊಂಗರಕೇರಿ

ಇತರ ಶಾಖೆಗಳು:—ಕಾರ್ಕಳ, ಬಂಟ್ವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ, ಇತ್ಯಾದಿ.

CANARA BANK, LIMITED.

ESTD: 1906

Bhuvanendra Products Limited,

KATAPADI S. Kanara.

Pleasant shade, Free flow and quick drying have commanded good popularity

"BHUVANENDRA" REAL INK "BHUVANENDRA"

USEFUL FOR ALL FOUNTAIN PENS

"ಭುವನೇಂದ್ರ"

ಶೀಯುಲ್ ಶಾಯಿ

ಬರವಣಿಗೆಯ ಎಲ್ಲಾ ಕೆಲಸಗಳಿಗೂ, ಫೌಂಟೆನ್ ಪೆನ್ನುಗಳಿಗೂ, ಅತ್ಯುತ್ತಮ ಶಾಯಿ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

dited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 44] ತಾರೀಕು 6—10—1950 [ಸಂಚಿಕೆ 41]

ಕಾಂಗ್ರೆಸಿಗೆ ತಿಳಿಗಾಲವಿಲ್ಲ;

ಅದು ಎಂಥ ಪರಿಸ್ಥಿತಿಯನ್ನೂ ಎದುರಿಸಬಲ್ಲದು

ಪಂ. ನೆಹರೂ ಹಾಗು ನನ್ನಲ್ಲಿ ಭಿನ್ನಾಭಿಪ್ರಾಯವಿಲ್ಲ

ಇಂದೋರಿನಲ್ಲಿ ಕಸ್ತೂರಬಾ ಗ್ರಾಮದ ಅಡಿಗಲ್ಲನ್ನಿಡುವ ಸಮಾರಂಭದಲ್ಲಿ ಸರದಾರ ಪಟೇಲರ ಭಾಷಣ

ಪ್ರಧಾನ ಮಂತ್ರಿಗಳಾದ ಪಂ ನೆಹರು ಹಾಗು ತನ್ನಲ್ಲಿ ಭಿನ್ನಾಭಿಪ್ರಾಯಗಳಾಗಿವೆಂಬ ಸುದ್ದಿಯನ್ನು ಅವರು ಅಲ್ಲಗಳೆದರು

"ನಾವೆಲ್ಲ ಗಾಂಧೀಜಿಯವರ ಸ್ವಾತಂತ್ರ್ಯ ಸೇನೆಯ ಯೋಧರು ನಾನು ಉಪ ಪ್ರಧಾನ ಮಂತ್ರಿಯಾಗಿದ್ದರೂ ಪದಕ್ಕೆ ನಾನು ಹೆಚ್ಚು ಮಹತ್ವ ಕೊಡುತ್ತಿಲ್ಲ ರಾಜಕೀಯ ರಂಗದಲ್ಲಿ ಪಂ ನೆಹರೂರವರೇ ಮುಖ್ಯರೆಂಬುದು ನಿರ್ವಿವಾದ ಬಾಪುರವರು ಜೀವಂತವಿರುವಾಗ ಪಂ ನೆಹರೂರವರನ್ನು ತಮ್ಮ ವಾರಸದಾರರೆಂದು ಘೋಷಿಸಿದ್ದರು ತವ ತರುವಾಯ ಪಂ ನೆಹರೂರ ಮೇಲೆಯೆ ಹೊಣೆಗಾರಿಕೆ ಬೀಳುವದೆಂದು ಅವರು ಮೇಲಿಂದ ಮೇಲೆ ಹೇಳುತ್ತಿದ್ದರು ಬಾಪುರವರ ಈ ಇಚ್ಛೆಯನ್ನು ಗೌರವಿಸುವದು ತನ್ನ ಧಾರ್ಮಿಕ ಕರ್ತವ್ಯವೆಂದು ಪ್ರತಿಯೊಬ್ಬನೂ ಭಾವಿಸಬೇಕು ಇದಕ್ಕೆ ತಪ್ಪಿದರೆ ಪರಮಾತ್ಮನನ್ನು ವಂಚಿಸಿದಂತಾಗುವದು ಈ ಇಚ್ಛೆಯನ್ನು ದುರ್ಲಕ್ಷಿಸಿ ನಾನು ವಂಚಕನಾಗಲಾರೆ. ನಿಜವಾಗಿ ನನ್ನ ಸ್ಥಾನವು ದೊಡ್ಡದಿರುವದೆಂದು ನಾನು ತಿಳಿದುಕೊಂಡಿಲ್ಲ. ರಾಜಕೀಯ ರಂಗದಲ್ಲಿ ನನಗಾವದೂ ಸ್ಥಾನವಿದೆ. ಮಹಾತ್ಮಾ ಗಾಂಧಿಯವರ ನಿಜ ಅನುಯಾಯಿಯಾದ ನಾನು ಅದರಲ್ಲಿಯೆ ಆಸ್ಥೆಯನ್ನು ತೋರಿಸುತ್ತಿರುವೆ.

ನಿಜವಾದ ಸೇವೆ

ಅಧಿಕಾರ ಲಾಲಸೆ ಇಂದು ಕಾಂಗ್ರೆಸಿಗರಲ್ಲಿ ಹೆಚ್ಚಾಗಿದೆ ಸರಕಾರೀ ರಂಗದಲ್ಲಿ ಮಾಡುವ ಕಾರ್ಯಕ್ಕೆ ಕೆಲ ಮಟ್ಟಿಗೆ ಬೆಲೆ ಹುದ್ದರೂ ಅದನ್ನೆ ಧ್ಯೇಯವನ್ನಾಗಿ ಮಾಡಿಕೊಳ್ಳಬಾರದು. ಅಧಿಕಾರ ವ್ಯಾಮೋಹಕ್ಕಾಗಿ ಮುನ್ನುಗ್ಗುತ್ತ ಮತ್ತು ಕ್ಷುಲ್ಲಕ ವಿಷಯಗಳಿಗಾಗಿ ಕಪ್ಪೊಳಗೆ ಬಡಿದಾಡುತ್ತ ಅನೇಕರು ಮಹಾತ್ಮರು ಹಾಕಿಕೊಟ್ಟ ಸೇವಾ ಮಾರ್ಗದಿಂದ ದೂರ ಸರಿಯುತ್ತಿರುವರು. ಅಧಿಕಾರದ ಅಮಲು ಏರತೆಂದರೆ ಪ್ರತಿಯೊಬ್ಬನಿಗೂ ಯಾವದಾದರೊಂದು ಅಧಿಕಾರ ಸ್ಥಾನವನ್ನು ಸಂಪಾದಿಸುವದರಿಂದ ಜನತಾ ಸೇವೆ ಮಾಡಬಹುದೆಂಬ ಭ್ರಾಂತಿಯುಂಟಾಗುವದು ಇದು ಸರಿಯಾದ ಮಾರ್ಗವಲ್ಲ. ಶಾಸನ ಸಭೆಗಳ ರಂಗದ ಹೊರಗೆ ನಿಸ್ವಾರ್ಥ ಬುದ್ಧಿಯಿಂದ ಮಾಡುವ ಸೇವೆಯೇ ನಿಜವಾದ ಸೇವೆಯೆನಿಸುವದು. ಒಂದು ಪ್ರಾಂತದ ಮುಖ್ಯ ಮಂತ್ರಿಯಾಗುವದರಿಂದ ಮಹತ್ಕಾರ್ಯವನ್ನು ಸಾಧಿಸಿದಂತಾಗುವದಿಲ್ಲ ಅದೊಂದು ಕ್ಷುಲ್ಲಕ ವಿಷಯ ಇಂದು ಸಮಗ್ರ ಭಾರತದ ಮುಖ್ಯ ಮಂತ್ರಿ ಶ್ರೀ ಗೋಪಾಲ ಕೃಷ್ಣ ವಿಜಯ ವರ್ಗೀಯರು ಅಧಿಕಾರ ಬಿಟ್ಟುಕೊಟ್ಟರೆ ನಾನು ಅವರನ್ನು ಅಭಿನಂದಿಸುವೆನು ಆದರೆ ಅವರ ಸ್ಥಳಕ್ಕೆ ಬರುವ ವರ ಬಗ್ಗೆ ಕನಿಕರ ಪಡುವೆನು

ನಿಯಂತ್ರಣಗಳು

ಅಪರ ಭಾಷಣದ ಇತರ ಮುಖ್ಯಾಂಶಗಳಾವೆಂದರೆ:—

ನಿಯಂತ್ರಣಗಳು -ಅವಶ್ಯಕ ವಸ್ತುಗಳ ಕೊರತೆಯಾದಾಗ ನಿಯಂತ್ರಣ ಅನಿವಾರ್ಯ ಕ್ರಮ ನಿಯಂತ್ರಣಗಳಿಂದ ಲಂಚಗುಳಿಕನ ಕೆಲಮಟ್ಟಿಗೆ ತಲೆಯೆತ್ತಿ ಸಾರ್ವಜನಿಕರಿಗೆ ಕೆಲ ತೊಂದರೆ ಯಾಗುತ್ತಿದ್ದರೂ ಜನತೆಯ ಹಿತಕ್ಕಾಗಿಯೆ ಅವುಗಳನ್ನು ಹೇರಲಾಗಿದೆ. ನಿಮಗೆ ಬೇಕಾದ ಆಹಾರವನ್ನು ನಾವು ಬೆಳೆಯುತ್ತಿಲ್ಲವಾದ್ದರಿಂದ ಆಹಾರದ ಮೇಲೆ ನಿಯಂತ್ರಣವಿದೆ. ಬಂಗಾಲ ಬರಗಾಲದ ಪುನರಾವೃತ್ತಿಯಾಗದಂತೆ ವಾವಿಂದು ವಿದೇಶಗಳಿಂದ ಆಹಾರ ಧಾನ್ಯಗಳನ್ನು ತರಿಸುತ್ತಿರುವೆವು.

ಶಿಕ್ಷಣ:—ಇಂದಿನ ಶಿಕ್ಷಣ ಪದ್ಧತಿಯು ವಿದ್ಯಾರ್ಥಿಗಳಿಗೆ ತಮ್ಮ ಕಾಲ ಮೇಲೆ ನಿಲ್ಲಲು ಸಹಾಯವಾಗುತ್ತಿಲ್ಲ. ಪದವಿಗಳನ್ನು ಪಡೆದ ಮೇಲೆ ನೌಕರಿಗಾಗಿ ವಿದ್ಯಾರ್ಥಿಗಳು ಅಲೆಯುತ್ತಾರೆ. ಇದರಲ್ಲಿ ಸರಾಶಿಯಾದ ಕೂಡಲೆ ಉಗ್ರವಾದಿಗಳ ವರ್ಗವನ್ನು ಸೇರುತ್ತಾರೆ ಈ ಪದ್ಧತಿ ಬದಲಾಗಿ ಒಕ್ಕಲಿತನ ಹಾಗು ಔದ್ಯೋಗಿಕ ರಂಗಗಳಲ್ಲಿ ವಿದ್ಯಾರ್ಥಿಗೆ ಶಿಕ್ಷಣ ಕೊಡಬೇಕು

ರಾಷ್ಟ್ರೀಕರಣ—ಇಂದು ನಾವು ಎಲ್ಲ ಉದ್ದಿಮೆಗಳನ್ನು ರಾಷ್ಟ್ರೀಕರಿಸುವ ಸ್ಥಿತಿಯಲ್ಲಿಲ್ಲ. ಅದಕ್ಕಾಗಿಯೇ ಸರಕಾರವು ಮುಖ್ಯ ಉದ್ದಿಮೆಗಳ ರಾಷ್ಟ್ರೀಕರಣ ಮಾತ್ರ ಮಾಡಲಾಗುವದೆಂದು ಈ ಮೊದಲೇ ಸಾರಿದೆ. ರಾಷ್ಟ್ರೀಕರಣವು ಸಾಧ್ಯವೆನಿಸಿದರೆ ಅದನ್ನು ಸಾಧಿಸಲು ಸಹಕಾರ ನೀಡಲು ಎಲ್ಲರಿಗಿಂತ ಛಿಡಿ ಮೊದಲು ನಾನು ಮುಂದೆ ಬರುವೆನು. ಆದರೆ ಅಂಥ ಪರಿಸ್ಥಿತಿ ಒದಗಿಲ್ಲ.

ಬಾಪೂ ತೋರಿದ ಮಾರ್ಗದಿಂದಲೇ ಸುಖ ಶಾಂತಿ

ಮಹಾತ್ಮರ ಉಪದೇಶವನ್ನು ಕಾರ್ಯರೂಪಕ್ಕಿಳಿಸಲು ಸರದಾರ ಪಟೇಲರ ಕರೆ

ಮಹಾತ್ಮರು ನಮ್ಮ ಜೀವನದಲ್ಲಿ ಪ್ರಜ್ವಲಿಸಿದ ಕಿಡಿಯು ನೊಂದಂತೆ ನೋಡಿಕೊಳ್ಳವದು ನನ್ನ ಕರ್ತವ್ಯ ಗಾಂಧೀಜಿಯವರ ಸ್ವಾರ್ಥತ್ಯಾಗ, ಅಮರತ್ವಗಳು ಪರಕೀಯ ಸಕ್ಕಿಯಿಂದ ಮುಕ್ತಿಯವಾಗಲು ನನಗೆ ಸಾಮರ್ಥ್ಯವೊದಗಿಸಿದವೆಂದೂ ಅವರು ಅದರಲ್ಲಿ ಹೇಳಿರುವರು

ಅವರು ತಮ್ಮ ಸಂದೇಶದಲ್ಲಿ ಮತ್ತೂ ಹೇಳಿರುವದೇನೆಂದರೆ—ನಮ್ಮ ಸ್ವಾತಂತ್ರ್ಯ ದೋಲನ ಸಮಯದಲ್ಲಿ ಕನಸು ಕಾಣುತ್ತಿದ್ದ ಸಮಾಜ ನಿರ್ಮಿಸಲು ಇದರಿಂದ ಸಹಾಯವಾಯಿತು

ಅವರ ಜನ್ಮದಿನದ ಈ ಶುಭಸಂದರ್ಭದಲ್ಲಿ ಅವರು ನಮ್ಮ ಮುಂದಿರಿಸಿದ ಆದರ್ಶಗಳಿಗೆ ನಾವು ಪುನಃ ದೀಕ್ಷಾಬದ್ಧರಾಗೋಣ ಸತ್ಯ ಪ್ರೀತಿ ಸೇವೆಗಳಲ್ಲಿ ನಾವು ಅಚಲ ಶ್ರದ್ಧೆಯಿಟ್ಟ ದೇಶದಲ್ಲಿ ಸಮಾನತೆಗಳ ವ್ಯವಸ್ಥೆಯನ್ನು ಜಾಗತಿಕ ಶಾಂತಿಯನ್ನು ಮುನ್ನಡೆಯುವಾ ಮಹಾತ್ಮರು ತೋರಿದ ಮಾರ್ಗದಿಂದಲೇ ಸಾಗಬೇಕೆಂದು ನನ್ನ ದೇಶ ಬಾಂಧವರನ್ನ ಕಳಕಳಿಯಿಂದ ಬಿನ್ನವಿಸುವೆ ಅದರಿಂದಲೇ ನಮಗೆ ಮುಕ್ತಿ ಸುಖ ಶಾಂತಿಗಳು ದೊರೆಯುವುವು

ಸರದಾರ ವಲ್ಲಭಭಾಯಿ ಪಟೇಲರು ಗಾಂಧೀ ಜಯಂತಿ ನಿಮಿತ್ತ ಕೊಟ್ಟ ಸಂದೇಶದಲ್ಲಿ ಮಹಾತ್ಮಾ ಗಾಂಧೀಜಿಯವರ ತತ್ವಗಳನ್ನು, ಅವರ ಉಪದೇಶವನ್ನು, ಅವರ ಕಾರ್ಯಕ್ರಮವನ್ನು, ಕಾರ್ಯರೂಪಕ್ಕಿಳಿಸುವತ್ತ ಲಕ್ಷ, ಹಾಕುವದರ ಅಗತ್ಯವನ್ನು ಪ್ರತಿಪಾದಿಸಿದ್ದಾರೆ

ಹೋದ ವರ್ಷ ಗಾಂಧೀ ಜಯಂತಿಯಾದ ನಂತರ ಒಂದು ವರ್ಷದ ಕಾಲವು ಗತಿಸಿ ಹೋಯಿತು ನಾವು ಈ ಮಹತ್ವದ ದಿನವನ್ನು ಆಚರಿಸುವಾಗ ನಿಜವಾಗಿಯೂ ನಾವು ಪ್ರಾಮಾಣಿಕ ರೀತಿಯಿಂದ ಆಚರಿಸುತ್ತಿರುವೆವೋ ಎಂದು ನನಗೆ ಅನಿಸುವದು ಗಾಂಧೀಜಿಯವರು ಬೋಧಿಸಿದ್ದೆಲ್ಲ ಈಗ ಮರೆತು ಹೋದಂತೆ ಅನಿಸುವದು. ಗಾಂಧೀಜಿಯವರ ಹೆಸರನ್ನು ನಾವು ಅದಕ್ಕೆರುವ ಪಾವಿತ್ರ್ಯಕ್ಕೆ ಹಾಗು ಗೌರವಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳುವ ಪ್ರಸಂಗವಿದ್ದಾಗ ಮಾತ್ರ ತೆಗೆದುಕೊಳ್ಳುತ್ತಿರುವೆವು ನಾವು ಅವರು ಬೋಧಿಸಿದ ತತ್ವಗಳಂತೆ ಆಚರಿಸುವದು ಇಗತ್ಯವಿದೆ ಎಂದು ಭಾವಿಸುವದಿಲ್ಲ ಚರಖಾಚಳವಳಿ ಮಹತ್ವ, ಖಾದಿಯ ಸಂದೇಶ ಅವರು ದೇಶಕ್ಕೆ ತಿಳಿಸಿದರು. ಅದರಂತೆ ನಾವು ವರ್ತಿಸಿದ್ದರೆ ಎಂದೋ ದೇಶಕ್ಕೆ ಬಟ್ಟೆಯನ್ನು ಒದಗಿಸುವ ಸಮಸ್ಯೆಯನ್ನು ಬಿಡಿಸಬಹುದಿತ್ತು

ಅದರಂತೆಯೇ ಅವರು ಬೋಧಿಸಿದ ಸ್ವಾವಲಂಬನ ತತ್ವವನ್ನು ಕೆಲ ವರ್ಷಗಳ ಹಿಂದೆಯೇ ಜಾರಿಯಲ್ಲಿ ತರಲು ಪ್ರಯತ್ನಿಸಿದ್ದರೆ ದೇಶವು ಇಂದು ಎದುರಿಸಬೇಕಾದ ಅನೇಕ ಸಮಸ್ಯೆಗಳನ್ನು ಎದುರಿಸುವ ಪ್ರಸಂಗವೇ ಬರುತ್ತಿರಲಿಲ್ಲ. ಅವರು ಬೋಧಿಸಿದ ರಚನಾತ್ಮಕ ಕಾರ್ಯಕ್ರಮ ಹಿಂದೇ ದೇಶದಲ್ಲಿಯ ಒಡತನ, ನಿಗರ್ವತೆಗಳ ನಿರ್ಮೂಲನ ಮಾಡಲು ಯೋಗ್ಯವಾದ ಸಾಧನವಾಗಿದೆ. ನಾವು ರಚನಾತ್ಮಕ ಕಾರ್ಯವನ್ನೂ ದುರ್ಲಕ್ಷಿಸಿಬಿಟ್ಟಿರುವೆವು. ಕಾಲವು ಇನ್ನೂ ಮೀರಿ ಹೋಗಿಲ್ಲ. ಈ ಶುಭ ದಿನದಿಂದಲೇ ನಾವು ಗಾಂಧೀಜಿಯವರು ಬೋಧಿಸಿದ ತತ್ವ ಹಾಗೂ ಅವರು ದೇಶದ ಮುಂದೆ ಇಟ್ಟ ಕಾರ್ಯಕ್ರಮ ಇವುಗಳಕ್ಕ ಲಕ್ಷ್ಯ ಹಾಕಿ ಅವುಗಳನ್ನು ಕಾರ್ಯರೂಪಕ್ಕಿಳಿಸಲು ಪುನಃ ಪ್ರಯತ್ನಶೀಲರಾಗುವಾ ಎಂದು ಹೇಳಿದರಲಾರೆ.

THE CANARA BANKING CORPORATION LTD.

Estd: 1906.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಹೆಡ್ ಆಫೀಸು—ಉಡುಪಿ

ಮೊಲ ಧನ:

ಅಧಿಕೃತ	ರೂ. 25,00,000
ಚಂದಾ ಆರ್ಪಿಸಿದ್ದು ಮತ್ತು ವಸೂಲಾದ್ದು	ರೂ. 20,00,000
ಕ್ಷೇಮ ನಿಧಿಗಳು	ರೂ. 10,21,747
ಒಟ್ಟು ಬಲಾವಣೆ ಭಂಡವಾಳ	ರೂ. 303,02,976

ಗಿರಾಕಿಗಳ ಕೃಪ್ತಿಯೇ ನಮ್ಮ ಗುರಿ!

ಸಕಲ ತರದ ಬ್ಯಾಂಕಿಂಗ್ ವಹಿವಾಟುಗಳನ್ನು ಕೈಕೊಳ್ಳಲಾಗುವುದು

(Regd

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಉತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಭಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಪೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುತ್ತದೆ.

ಕಾಲಧರ್ಮ ನಿಶ್ಚಿಂತ ಜೀವನಕ್ಕೆ—ಕುಟುಂಬದ ಸುಖ ಸೌಕರ್ಯಕ್ಕೆ

ಅತ್ಯಮೂಲ್ಯ ಆಕರ್ಷಕ ವಿಮಾಯೋಜನೆ:

ಮಾಸವೊಂ ಕೇವಲ ರೂ. 55/-ರ ವಿನಿಯೋಗದಿಂದ ರೂ. 30,080/- ನಿಧಿ ನಿಮ್ಮದಾಗುವುದು

ಅಥವಾ ವರ್ಷಂಪ್ರತಿ ರೂ. 1,995ರಂತೆ ಕಾಯಂ ಆಗಿ ದೊರೆಯುವ ಆಜೀವ ವರ್ಷಾಸನ (ವರ್ಷದಲ್ಲಿ ನೀವು ತೆತ್ತ ಹಣ ರೂ. 660/- ಮಾತ್ರ)

ಅಥವಾ ನಿಶ್ಚಿತ ಅವಧಿಯಲ್ಲಿ ರೂ. 17830/- ನಗದು

ಅಥವಾ ನಿರ್ದಿಷ್ಟ ಅವಧಿಯಲ್ಲಿ ರೂ. 22,500/- ಮುಕು ಮರಣಾನಂತರ ಇನೊಂ ಮ್ಮೆ ರೂ. 10,000/-

ಮೇಲೆ ನಮೂದಿಸಿದುದು ಮಾತ್ರವಲ್ಲದೆ ಕ್ಲುಪ್ತ ಅವಧಿಯ ಮೊದಲು, ಯಾವ ಸಮಯದಲ್ಲೇ ಆಗಲಿ, ಪೂರ್ಣ ಹೊಂದಿದರೆ, ವರ್ಷಕ್ಕೆ ರೂ. 1000/-ಕ್ಕೆ ರೂ. 30/-ರಂತೆ ಪಾತ್ರಿಯಾಗಿ ಬೋನಸ್ಸು ದೊರೆಯುವ ರೂ. 10,000/-ದ ಪೂರ್ಣ ವಿಮಾದಕ್ಕಾ ಕವಚ ಸಹಾ.

ವಿಮಾ ಕ್ಷೇತ್ರದಲ್ಲಿ 40 ವರ್ಷಕ್ಕೆ ಮಿಕ್ಕಿ ದುಡಿದು ಉತ್ತಮ ಅನುಭವ ಗಳಿಸಿದ ನಿಮ್ಮ ವಿಮೆಯ ಉತ್ಪೃಷ್ಟ ಸಲಹೆಗಾರರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಚೀಫ್ ಏಜೆಂಟ್ಸ್:

ದಿ ಬೊಂಬ್ಯಾ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಬೊಂಬಾಯಿ ಲೈಫ್ ಬಿಲ್ಡಿಂಗ್, ಉಡುಪಿ (ದ. ಕಾರಕ)

M/s. KOCHIKAR BROTHERS, LTD.,

Chief Agents:

The Bombay Life Assurance Co. Ltd.,

(Bombay Life Building Udipi S. India)

With Offices at:—Mangalore, Calicut, Coimbatore, Madura, Bangalore City, Trivandrum, Madras, Bombay.

ಕೆನರಾ ಬ್ಯಾಂಕು, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಸೆಗಾರಿಕೆ ಪರಿಮಿತಿಸಲ್ಪಟ್ಟು ಭಾರತಧಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧,೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು ..... ನೂರಕ್ಕೆ ವರ್ಷಕ್ಕೆ ೨।

ಳರಿಂದ ೫ ತಿಂಗಳು ..... ,, ,, ೨॥

ರೂ. ೧,೦೦೦ದ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಮಂಗಳೂರು ಶಾಖೆಗಳು:

(1) ಬಂದರ ರೋಡ (2) ಡೊಂಗರಕೇರಿ

ಇತರ ಶಾಖೆಗಳು:—ಕಾರ್ಕಳ, ಬಿಟಿವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ, ಇತ್ಯಾದಿ.

CANARA BANK, LIMITED.

ESTD: 1906

Bhuvanendra Products Limited,

KATAPADI S. Kanara.

Pleasant shade, Free flow and quick drying have commanded good popularity

"BHUVANENDRA" REAL INK "BHUVANENDRA"

USEFUL FOR ALL FOUNTAIN PENS

"ಭುವನೇಂದ್ರ"

ಶಿಯಲ್ ಶಾಯಿ

ಬರವಣಿಗೆಯ ಎಲ್ಲಾ ಶೈಲಿಗಳಿಗೂ, ಪೌಂಟನ್ ಪೆನ್ನುಗಳಿಗೂ, ಅತ್ಯುತ್ತಮ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕನ್ನಡ

ಡೊಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 44] ತಾರೀಕು 6—10—1950 [ಸಂಚಿಕೆ 41]

ಕಾಂಗ್ರೆಸಿಗೆ ಅಳಿಗಾಲವಿಲ್ಲ;

ಅದು ಎಂಥ ಪರಿಸ್ಥಿತಿಯನ್ನೂ ಎದುರಿಸಬಲ್ಲದು

ಪಂ. ನೆಹರೂ ಹಾಗು ನನ್ನಲ್ಲಿ ಭಿನ್ನಾಭಿಪ್ರಾಯವಿಲ್ಲ

ಇಂದೋರಿನಲ್ಲಿ ಕಸ್ತೂರಬಾ ಗ್ರಾಮದ ಅಡಿಗಲ್ಲನ್ನಿಡುವ ಸಮಾರಂಭದಲ್ಲಿ ಸರದಾರ ಪಟೇಲರ ಭಾಷಣ

ಪ್ರಧಾನ ಮಂತ್ರಿಗಳಾದ ಪಂ. ನೆಹರು ಹಾಗು ತಮ್ಮಲ್ಲಿ ಭಿನ್ನಾಭಿಪ್ರಾಯಗಳಾಗಿ ನೆಂಬ ಸುದ್ದಿಯನ್ನು ಅವರು ಅಲ್ಲಗಳೆದರು.

"ನಾವೆಲ್ಲ ಗಾಂಧೀಜಿಯವರ ಸ್ವಾತಂತ್ರ್ಯ ಸೇನೆಯ ಯೋಧರು. ನಾನು ಇವ ಪ್ರಧಾನ ಮಂತ್ರಿಯಾಗಿದ್ದರೂ ಪದಕ್ಕೆ ನಾನು ಹೆಚ್ಚು ಮಹತ್ವ ಕೊಡುತ್ತಿಲ್ಲ. ರಾಜಕೀಯ ರಂಗದಲ್ಲಲ್ಲ ಪಂ. ನೆಹರೂರವರೇ ಮುಖ್ಯರೆಂಬುದು ನಿರ್ವಿವಾದ. ಬಾಪೂಜಿಗಳು ಜೀವಂತವಿರುವಾಗ ಪಂ. ನೆಹರೂರವರನ್ನು ತಮ್ಮ ವಾರಸದಾರರೆಂದು ಅರಿಸಿದ್ದರು. ತಮ್ಮ ತರುವಾಯ ಪಂ. ನೆಹರೂರ ಮೇಲೆಯೆ ಹೊಣೆಗಾರಿಕೆ ಬೀಳುವದೆಂದು ಅವರು ಮೇಲಿಂದ ಮೇಲೆ ಹೇಳುತ್ತಿದ್ದರು. ಬಾಪೂಜಿಯವರ ಈ ಇಚ್ಛೆಯನ್ನು ಗೌರವಿಸುವದು ತನ್ನ ಧಾರ್ಮಿಕ ಕರ್ತವ್ಯವೆಂದು ಪ್ರತಿಯೊಬ್ಬನೂ ಭಾವಿಸಬೇಕು. ಇದಕ್ಕೆ ತಪ್ಪಿದವರೆ ನರಮಾತ್ಮನನ್ನು ವಂಚಿಸಿದಂತಾಗುವದು. ಈ ಇಚ್ಛೆಯನ್ನು ದುರ್ಲಕ್ಷಿಸಿ ನಾನು ವಂಚಕನಾಗಲಾರೆ. ನಿಜವಾಗಿ ನನ್ನ ಸ್ಥಾನವು ದೊಡ್ಡದಿರುವದೆಂದು ನಾನು ತಿಳಿದುಕೊಂಡಿಲ್ಲ. ರಾಜಕೀಯ ರಂಗದಲ್ಲಿ ನನಗಾವದೊ ಸ್ಥಾನವಿದೆ. ಮಹಾತ್ಮಾ ಗಾಂಧಿಯವರ ನಿಜ ಅನುಯಾಯಿಯಾದ ನಾನು ಅದರಲ್ಲಿಯೆ ಆಸ್ಥೆಯನ್ನು ತೋರಿಸುತ್ತಿರುವೆ.

ನಿಜವಾದ ಸೇವೆ

ಅಧಿಕಾರ ಲಾಲಸೆ ಇಂದು ಕಾಂಗ್ರೆಸಿಗರಲ್ಲಿ ಹೆಚ್ಚಾಗಿದೆ. ಸರಕಾರೀ ರಂಗದಲ್ಲಿ ಮಾಡುವ ಕಾರ್ಯಕ್ಕೆ ಕಲ ಮಟ್ಟಿಗೆ ಬೆಲೆಯಿದ್ದರೂ ಅದನ್ನೆ ಧ್ಯೇಯವನ್ನಾಗಿ ಮಾಡಿಕೊಳ್ಳಬಾರದು. ಅಧಿಕಾರ ವ್ಯಾಮೋಹಕ್ಕಾಗಿ ಮುನ್ನುಗ್ಗುತ್ತ ಮತ್ತು ಕ್ಷುಲ್ಲಕ ವಿಷಯಗಳಿಗಾಗಿ ತಲೆಹೊಳೆಗೆ ಬಡಿದಾಡುತ್ತ ಅನೇಕರು ಮಹಾತ್ಮರು ಹಾಕಿಕೊಟ್ಟ ಸೇವಾ ಮಾರ್ಗದಿಂದ ದೂರ ಸರಿಯುತ್ತಿರುವರು. ಅಧಿಕಾರದ ಅಮಲು ಏರಿತೆಂದರೆ ಪ್ರತಿಯೊಬ್ಬನಿಗೂ ಯಾವದಾದರೊಂದು ಅಧಿಕಾರ ಸ್ಥಾನವನ್ನು ಸಂಪಾದಿಸುವದರಿಂದ ಜನತಾ ಸೇವೆ ಮಾಡಬಹುದೆಂಬ ಭ್ರಾಂತಿಯುಂಟಾಗುವದು. ಇದು ಸರಿಯಾದ ಮಾರ್ಗವಲ್ಲ. ಶಾಸನ ಸಭೆಗಳ ರಂಗದ ಹೊರಗೆ ನಿಸ್ವಾರ್ಥ ಬುದ್ಧಿಯಿಂದ ಮಾಡುವ ಸೇವೆಯೇ ನಿಜವಾದ ಸೇವೆಯೆನಿಸುವದು. ಒಂದು ಪ್ರಾಂತದ ಮುಖ್ಯ ಮಂತ್ರಿಯಾಗುವದರಿಂದ ಮಹತ್ಕಾರ್ಯವನ್ನು ಸಾಧಿಸಿದಂತಾಗುವದಿಲ್ಲ. ಅದೊಂದು ಕ್ಷುಲ್ಲಕ ವಿಷಯ. ಇಂದು ಸಂಪೂರ್ಣ ಭಾರತದ ಮುಖ್ಯ ನುಂತಿ ಶ್ರೀ. ಗೋಪಾಲ ಕೃಷ್ಣ ವಿಜಯ ವರ್ಗೀಯರು ಅಧಿಕಾರ ಬಿಟ್ಟುಕೊಟ್ಟರೆ ನಾನು ಅವರನ್ನು ಅಭಿನಂದಿಸುವೆನು. ಆದರೆ ಅವರ ಸ್ಥಳಕ್ಕೆ ಬರುವವರ ಬಗ್ಗೆ ಕಸಿಕರ ಪಡುವೆನು.

ನಿಯಂತ್ರಣಗಳು

ಅವರ ಭಾಷಣದ ಇತರ ಮುಖ್ಯಾಂಶಗಳಾವೆಂದರೆ:—

ನಿಯಂತ್ರಣಗಳು:-ಅವಶ್ಯಕ ವಸ್ತುಗಳ ಕೊರತೆಯಾದಾಗ ನಿಯಂತ್ರಣ ಅವಶ್ಯವಿರುತ್ತದೆ. ನಿಯಂತ್ರಣಗಳಿಂದ ಲಂಚಗುಳಿತನ ಕಲಮಟ್ಟಿಗೆ ತಲೆಯೆತ್ತಿ ಸಾರ್ವಜನಿಕರಿಗೆ ಕೆಲ ತೊಂದರೆ ಘಾಸುತ್ತಿದ್ದರೂ ಜನತೆಯ ಹಿತಕ್ಕಾಗಿಯೆ ಅವುಗಳನ್ನು ಹೇರಲಾಗಿದೆ. ನಮಗೆ ಬೇಕಾದ ಆಹಾರವನ್ನು ನಾವು ಬೆಳೆಯುತ್ತಿಲ್ಲವಾದ್ದರಿಂದ ಆಹಾರದ ಮೇಲೆ ನಿಯಂತ್ರಣವಿದೆ. ಬಂಗಾಲ ಬರಗಾಲದ ಪುನರಾವೃತ್ತಿಯಾಗದಂತೆ ನಾವಿಂದು ವಿದೇಶಗಳಿಂದ ಆಹಾರ ಧಾನ್ಯಗಳನ್ನು ತರಿಸುತ್ತಿರುವೆವು.

ಶಿಕ್ಷಣ:—ಇಂದಿನ ಶಿಕ್ಷಣ ಪದ್ಧತಿಯು ವಿದ್ಯಾರ್ಥಿಗಳಿಗೆ ತಮ್ಮ ಕಾಲ ಮೇಲೆ ನಿಲ್ಲಲು ಸಹಾಯವಾಗುತ್ತಿಲ್ಲ. ಪದವಿಗಳನ್ನು ಪಡೆದ ಮೇಲೆ ನೌಕರಿಗಾಗಿ ವಿದ್ಯಾರ್ಥಿಗಳು ಅಲೆಯುತ್ತಾರೆ. ಇದರಲ್ಲಿ ಸರಾಸರಿಯಾದ ಕೂಡಲೆ ಉಗ್ರವಾದಿಗಳ ಪಕ್ಷಗಳನ್ನು, ಅವರ ಉಪದೇಶವನ್ನು, ಅವರ ಕಾರ್ಯಕ್ರಮವನ್ನು, ಕಾರ್ಯರೂಪಕ್ಕೆ ತರುವ ಲಕ್ಷ, ಹಾಕುವದರ ಅಗತ್ಯವನ್ನು ಪ್ರತಿಪಾದಿಸಿದ್ದಾರೆ.

ಹೋದ ವರ್ಷ ಗಾಂಧೀ ಜಯಂತಿಯಾದ ನಂತರ ಒಂದು ವರ್ಷದ ಕಾಲವು ಗತಿಸಿ ಹೋಯಿತು. ನಾವೆ ಈ ಮಹತ್ವದ ದಿನವನ್ನು ಆಚರಿಸುವಾಗ ನಿಜವಾಗಿಯೂ ನಾವು ಪ್ರಾಮಾಣಿಕ ರೀತಿಯಿಂದ ಆಚರಿಸುತ್ತಿರುವೆವೋ ಎಂದು ನನಗೆ ಅನಿಸುವದು. ಗಾಂಧೀಜಿಯವರು ಬೋಧಿಸಿದ್ದೆಲ್ಲ ಈಗ ನುರೆತು ಹೋದಂತೆ ಅನಿಸುವದು. ಗಾಂಧೀಜಿಯವರ ಹೆಸರನ್ನು ನಾವು ಅದ ಕ್ಕರುವ ಪಾಪಿತ್ಯ ಹಾಗು ಪರ್ಚಸ್ಸಿನಿಂದ ತೆಗೆದು ಕೊಳ್ಳುವ ಪ್ರಸಂಗವಿದ್ದಾಗ ಮಾತ್ರ ತೆಗೆದುಕೊಳ್ಳುತ್ತಿರುವೆವು. ನಾವು ಅವರು ಬೋಧಿಸಿದ ತತ್ವಗಳಂತೆ ಆಚರಿಸುವದು ಅಗತ್ಯವಿದೆ ಎಂದು ಭಾವಿಸುವದಿಲ್ಲ. ಚರಖಾದ ಮಹತ್ವ, ಖಾದಿಯ ಸಂದೇಶ ಅವರು ದೇಶಕ್ಕೆ ತಿಳಿಸಿದರು. ಅದರಂತೆ ನಾವು ವರ್ತಿಸಿದ್ದರೆ ಎಂದೋ ದೇಶಕ್ಕೆ ಬಟ್ಟೆಯನ್ನು ಒದಗಿಸುವ ಸಮಸ್ಯೆಯನ್ನು ಬಿಡಿಸಬಹುದಿತ್ತು.

ಅದರಂತೆಯೇ ಅವರು ಬೋಧಿಸಿದ ಸ್ವಾವಲಂಬನ ತತ್ವವನ್ನು ಕೆಲ ವರ್ಷಗಳ ಹಿಂದೆಯೇ ಜಾರಿಯಲ್ಲಿ ತರಲು ಪ್ರಯತ್ನಿಸಿದ್ದರೆ ದೇಶವು ಇಂದು ಎದುರಿಸಬೇಕಾದ ಅನೇಕ ಸಮಸ್ಯೆಗಳನ್ನು ಎದುರಿಸುವ ಪ್ರಸಂಗವೇ ಬರುತ್ತಿರಲಿಲ್ಲ. ಅವರು ಬೋಧಿಸಿದ ರಚನಾತ್ಮಕ ಕಾರ್ಯಕ್ರಮ ಒಂದೇ ದೇಶದಲ್ಲಿಯ ಬದತನ, ಶಾಂತಿಸಂರಕ್ಷಣೆಗಳ ಸಮರ್ಥ ಸಲನ ಮಾಡಲು ಯೋಗ್ಯವಾದ ಸಾಧನವಾಗಿದೆ. ನಾವು ರಚನಾತ್ಮಕ ಕಾರ್ಯವನ್ನೂ ದುರ್ಲಕ್ಷಿಸಿಬಿಟ್ಟಿರುವೆವು. ಕಾಲವು ಇನ್ನೂ ಮೀರಿ ಹೋಗಿಲ್ಲ. ಈ ಶುಭ ದಿನದಿಂದಲೇ ನಾವು ಗಾಂಧೀಜಿಯವರು ಬೋಧಿಸಿದ ತತ್ವ ಹಾಗೂ ಅವರು ದೇಶದ ಮುಂದೆ ಇಟ್ಟ ಕಾರ್ಯಕ್ರಮ ಇವುಗಳತ್ತ ಲಕ್ಷ್ಯ ಹಾಕಿ ಆ ವುಗಳನ್ನು ಕಾರ್ಯರೂಪಕ್ಕೆ ತರಲು ಪುನಃ ಪ್ರಯತ್ನಿಸಿದರೆ ಯಾವ ಪರಿಸ್ಥಿತಿಯನ್ನೂ ಎದುರಿಸಲು ಕಾಂಗ್ರೆಸಿಗೆ ಅಳಿಗಾಲವಿಲ್ಲ ಎಂದು ಹೇಳಬಹುದು.

ಬಾಪೂ ತೋರಿದ ಮಾರ್ಗದಿಂದಲೇ ಸುಖ ಶಾಂತಿ

ಮಹಾತ್ಮರ ಉಪದೇಶವನ್ನು ಕಾರ್ಯರೂಪಕ್ಕೆಳಿಸಲು ಸರದಾರ ಪಟೇಲರ ಕರೆ

ಮಹಾತ್ಮರು ನಮ್ಮ ಜೀವನದಲ್ಲಿ ಪ್ರಜ್ವಲಿಸಿದ ಕಿಡಿಯು ನೊಂದದಂತೆ ನೋಡಿಕೊಳ್ಳುವದು ನಮ್ಮ ಕರ್ತವ್ಯ. ಗಾಂಧೀಜಿಯವರ ಸ್ವಾರ್ಥತ್ಯಾಗ, ಅಮರತ್ವಗಳು ವರಕೀಯ ಸತ್ಯಿಯಿಂದ ಮುಕ್ತಾಯವಾಗಲು ನಮಗೆ ಸಾರ್ವಭೌಮತ್ವವೊದಗಿಸಿದವೆಂದೂ ಅವರು ಅದರಲ್ಲಿ ಹೇಳಿರುವರು.

ಅವರು ತಮ್ಮ ಸಂದೇಶದಲ್ಲಿ ಮತ್ತೂ ಹೇಳಿರುವದೇನೆಂದರೆ ನಮ್ಮ ಸ್ವಾತಂತ್ರ್ಯಾಂದೋಲನ ಸಮಯದಲ್ಲಿ ಕನಸು ಕಾಣುತ್ತಿದ್ದ ಸಮಾಜ ನಿರ್ಮಿಸಲು ಇದರಿಂದ ಸಹಾಯವಾಯಿತು.

ಅವರ ಜನ್ಮದಿನದ ಈ ಶುಭಸಂದರ್ಭದಲ್ಲಿ ಅವರು ನಮ್ಮ ಮುಂದಿರಿಸಿದ ಆದರ್ಶಗಳಿಗೆ ನಾವು ಪುನಃ ದೀಕ್ಷಾಬದ್ಧರಾಗೋಣ. ಸತ್ಯ ಪ್ರೀತಿ ಸೇವೆಗಳಲ್ಲಿ ನಾವು ಅಚಲ ಶ್ರದ್ಧೆಯಿಟ್ಟ ದೇಶಭಕ್ತಿ ಸನಾತನತೆಗಳ ಪ್ರಸ್ಥಾನವೆಯು ಉಜ್ವಲ ಗುರಿಯತ್ತ ಮುನ್ನಡೆಯುವಾ. ಜಾಗತಿಕ ಶಾಂತಿಕಾಪಾಡಲು ಮುನ್ನುಗ್ಗುವಾ ಬಾಪೂ ತೋರಿಸಿದ ಮಾರ್ಗದಿಂದಲೇ ಸಾಗಬೇಕೆಂದು ನನ್ನ ದೇಶ ಬಾಂಧವರನ್ನು ಕಳಕಳಿಯಿಂದ ಬಿನ್ನವಿಸುವೆ. ಅದರಿಂದಲೇ ನನಗೆ ಮುಕ್ತಿ ಸುಖ ಶಾಂತಿಗಳು ದೊರೆಯುವುವು.

ಸರದಾರ ವಲ್ಲಭಭಾಯಿ ಪಟೇಲರು ಗಾಂಧೀ ಜಯಂತಿ ನಿಮಿತ್ತ ಕೊಟ್ಟ ಸಂದೇಶದಲ್ಲಿ. ಮಹಾತ್ಮಾ ಗಾಂಧೀಜಿಯವರ ತತ್ವ

ನನ್ನು ಸೇರುತ್ತಾರೆ. ಈ ವದ್ಧತಿ ಬದಲಾಗಿ ಒಕ್ಕಲತನ ಹಾಗು ತಾಂತ್ರಿಕ ರಂಗಗಳಲ್ಲಿ ನಿರ್ದಾರ್ಥಿಗೆ ಶಿಕ್ಷಣ ಕೊಡಬೇಕು.

ರಾಷ್ಟ್ರೀಕರಣ:—ಇಂದು ನಾವು ಎಲ್ಲ ಕುದ್ದಿಮೆಗಳನ್ನು ರಾಷ್ಟ್ರೀಕರಿಸುವ ಸ್ಥಿತಿಯಲ್ಲಿಲ್ಲ. ಅದಕ್ಕಾಗಿಯೇ ಸರಕಾರವು ಮುಖ್ಯ ಕುದ್ದಿಮೆಗಳ ರಾಷ್ಟ್ರೀಕರಣ ಮಾತ್ರ ಮಾಡಲಾಗುವೆದೆಂದು ಈ ಮೊದಲೇ ಸಾರಿದೆ. ರಾಷ್ಟ್ರೀಕರಣವು ಸಾಧ್ಯವೆನಿಸಿದರೆ ಅದನ್ನು ಸಾಧಿಸಲು ಸಹಕಾರ ನೀಡಲು ಎಲ್ಲರಿಗಿಂತ ಮೊದಲು ನಾನು ಮುಂದೆ ಬರುವೆನು. ಆದರೆ ಅಂಥ ಪರಿಸ್ಥಿತಿ ಒದಗಿಲ್ಲ.

ದಿವಂಗತ ಶ್ರೀ. ಎಂ. ವಿ. ಶಾಸ್ತ್ರಿಗಳ ಸ್ಮಾರಕ

ದಿವಂಗತ ಆಯುರ್ವೇದ ಭೂಷಣ ಎಮ್. ವಿ. ಶಾಸ್ತ್ರಿ ಸ್ಮಾರಕ ಸಮಿತಿಯ ವ್ಯಥಮು ವಿಠಲಿಂಗ್ ಶ್ರೀ. ರಾಮಕೃಷ್ಣ ಧರ್ಮ ವೈದ್ಯಾಶ್ರಮದಲ್ಲಿ ವೈದ್ಯಗುರು ಡಾ॥ ಎಮ್. ಆರ್. ಭಟ್ ಅವರ ಅಧ್ಯಕ್ಷತೆಯಲ್ಲಿ ಸೇರಿ, ಡಾ॥ ವಿ. ಎನ್. ಭಟ್, ಕಾಸರಗೋಡ್, ಅಧ್ಯಕ್ಷರು; ಡಾ॥ ಎಮ್. ಆರ್. ಭಟ್, ಉಪಾಧ್ಯಕ್ಷ; ಶ್ರೀ ಕೊಂಚಾಡಿ ಕೇಶವ ಶೆಣೈ, ಕೋಶಾಧಿಕಾರಿ; ಶ್ರೀಗಳಾದ ಕೆ. ವಿ. ಜ್ಯೋತಿ ಮತ್ತು ಎಮ್. ಆರ್. ಜೋಸ್ ಜತೆಕಾರ್ಯದರ್ಶಿಗಳಾಗಿ, ಇತರ ೪ ಮಂದಿಯ ಸಹಿತ ಒಂದು ಕಾರ್ಯಕಾರಿ ಮಂಡಲರಚಿಸಲಾಯಿತು. ಅಲ್ಲದೆ ಇದೇ ವೈದ್ಯಾಶ್ರಮದ ವಠಾರದಲ್ಲಿ ಬಡ ರೋಗಿಗಳಿಗೆ ರಿಯಾಯ್ತಿಲಯ ಶಯ್ಯೆಗಳೆರಡು ವಿನಿಯೋಡಾಗಬೇಕೆಂದೂ ನಿರ್ಧರಿಸಲಾಯಿತು.

ದಿವಂಗತ ಶ್ರೀ. ಏ. ಶಂಕರಯ್ಯನವರು

ಸ್ಥಳೀಯ 'ದಿ ಪೊಮ್ಮಲಂ ಇನ್ಶುರೆನ್ಸ್ ಕಂಪೆನಿ, ಲಿಮಿಟೆಡ್' ಇದರ ಸುಪರಿಂಟೆಂಡೆಂಟರಾದ ಮೇಲ್ಕಂಡ ಮಹನೀಯರು ಇದೇ ಕಳೆದ ತಾ. ೨೪ರಲ್ಲಿ ದೈವಾಧೀನರಾದರೆಂದು ತಿಳಿಸಲು ಅತ್ಯಂತ ವಿಷಾದದೆನ್ನಿಸುತ್ತಿದೆ. ಇವರು ೧೬ ವರ್ಷಗಳ ಹಿಂದೆ ಈ ಸಂಸ್ಥೆಯ ಆ ಹುದ್ದೆಗೆ ಬಂದು ಕೊನೆತನಕವೂ ಅಮೂಲ್ಯ ಸೇವೆ ಸಲ್ಲಿಸಿದವರು. ಇವರ ನಿಧನದ ದುಃಖದಲ್ಲಿ ಅವರ ದೊಡ್ಡ ಕುಟುಂಬವೂ ಹಲವಾರು ಮಂದಿ ಗೆಳೆಯರೂ ಸಹಭಾಗಿಗಳಾಗಿದ್ದಾರೆ. ಮೃತರ ಆತ್ಮಕ್ಕೆ ನಿತ್ಯ ಶಾಂತಿ ಇರಲಿ!

ಅಕ್ಕಿ ಬತ್ತಗಳ ಮಿಗತೆಯನ್ನೊಪ್ಪಿಸುವ ಅವಧಿಗಳು

ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ಸ್ ಸೊಸೈಟಿ ಲಿಮಿಟೆಡ್ ಅಥವ ಅದರ ಶಾಖೆಗಳಿಗೆ ಮೇಲ್ಕಂಡ ಮಿಗತೆಯನ್ನು ಈ ಕೆಳಗಿನ ತಾರೀಕುಗಳಲ್ಲಿ ಒಪ್ಪಿಸತಕ್ಕದ್ದೆಂದು ಜಿಲ್ಲಾ ಕಲೆಕ್ಟರರ ಹುಕುಂ ಹೊರಟಿದೆ:— ಹೊಸದುರ್ಗ ಸಬ್ ತಾಲೂಕು ಮೊದಲಾ ಬತ್ತ ಒಂದೇ ಕಂತಿನಲ್ಲಿ ತಾ. ೧೫ ಒಕ್ಟೋಬರ್; ಜಿಲ್ಲೆಯ ಇತರ ಕಡೆ ಬತ್ತ ಒಪ್ಪಿಸುವ ಕಂತುಗಳಿರಲು, ಅಧಿವಾಸಿಯಂತೆ —ತಾ. ೩೧ ಅಕ್ಟೋಬರ ಮತ್ತು ತಾ. ೧೫ ನವಂಬರ. ಎಲ್ಲ ತಾಲೂಕುಗಳಲ್ಲಿ ಅಕ್ಕಿ ಒಪ್ಪಿಸುವ ಕಂತು ನಾಲ್ಕು, ಕಾಲು ವಾಸಿಯಂತೆ —ತಾ. ೫—೧೧—೫೦; ೩೦—೧೧—೫೦; ೧೫—೧೨—೫೦; ೩೧—೧೨—೫೦; ೩೧—೧೨—೫೧. ವಾಯಿದೆ ಕಳೆದು ೧೫ ವಾರ ದೊಳಗೊಪ್ಪಿಸದ ಬತ್ತ ಮುದಿಗೆ ೨ ಆಣೆ, ಅಕ್ಕಿ ಮುದಿಗೆ ೪ ಆಣೆ ಬೆಲೆ ಕಡಿಮೆ; ಅನಂತರ ಒಪ್ಪಿಸುವ ಬತ್ತ ಮುದಿಗೆ ೪ ಆಣೆ; ಅಕ್ಕಿ ಮುದಿಗೆ ೪ ಆಣೆ ಬೆಲೆ ಕಡಿಮೆ; ಹೀಗೇ ಮಿಗತೆಯನ್ನು ಪ್ರೊಕ್ಯೂರ್‌ಮೆಂಟ್ ಆಫೀಸರರ ಮೂಲಕ ಒಪ್ಪಿಸುವಂತಾದಲ್ಲಿಯೂ ಅದೇ ರೀತಿಯ ಕಡಿತವೂ ಇರುವುದಲ್ಲದೆ ಸಂದರ್ಭಾನುಸಾರದ ಇತರ ಯಾವ ದಂಡವೆಗೂ ಆಧರಿಂದ ಬಾಧಕವಿರುವುದಿಲ್ಲ.

ಮಿಶ್ರಗೊಬ್ಬರದ ವಾರದ್ಧಾಚರಣೆ

ಈ ವಾರದಾಚರಣೆಯ ನಗರ ಸಮಿತಿ ಮುನಿಸಿಪಲ್ ಆಫೀಸಿನಲ್ಲಿ ಶ್ರೀ. ಎಂ. ವೆಂಕಟೇಶ ಸೈಗಳ ಅಧ್ಯಕ್ಷತೆಯಲ್ಲಿ ಈಚೆಗೆ ಸಭೆ ಸೇರಿ, ಶ್ರೀ. ಕೆ. ಸೂರ್ಯನಾರಾಯಣ ಅಡಿಗರನ್ನು ಆ ಸಮಿತಿ ಸದಸ್ಯರನ್ನಾಗಿ ಚುನಾಯಿಸಿತು. ಅಕ್ಟೋಬರ ತಾ. ೨ರಲ್ಲಿ ದೈದಾನಿನಲ್ಲಿ ಸಭೆ, ಹಲವು ಮಹನೀಯರ ಭಾಷಣ, ಈ ಗೊಬ್ಬರ ತಯಾರಿ ಪ್ರದರ್ಶನವೂ ಅದೇ ತಾ. ೩ರಿಂದ ೮ರ ವರೆಗೆ ಮುನ್ಸಿಪಾಲಿಟಿ ನಾಲ್ಕು ಶಾಲೆಗಳಲ್ಲಿಯೂ ಕೊಡಿಯಾಲಗುತ್ತಿನಲ್ಲಿಯೂ ಗೊಬ್ಬರ ತಯಾರಿ ಕಾರ್ಯಕ್ರಮವೂ ನಡೆಯುವಂತೆ ನಿರ್ಧರಿಸಿತು.

ನಿಧನ

ಸ್ಥಳೀಯ ಸೆಂಟ್ರಲ್ ಟೊಕಿಸಿನ ಆಡಳಿತ ನಡೆಸುತ್ತಿದ್ದ ('ಸೆಂಟ್ರಲ್'ನ ವ್ಯಾವಹಾರಿಕರಾಗಿರುವ ಶ್ರೀ. ಕೆ. ನಾರಾಯಣ ಕಾಮತರ ದ್ವಿತೀಯ ಪುತ್ರ) ಶ್ರೀ. ಕೆ. ಪುರುಷೋತ್ತಮ ಕಾಮತರವರು, ತಾ. ೩೦-೯-೫೦ನೇ ಶನಿವಾರ ಅಪರಾಹ್ನ ಘಂಟೆ ೪-೩೦ಕ್ಕೆ, ಕರಿನಟ್ಟಾಫೈಡ್ ಕಾಯಿಲೆಯಿಂದ ಸ್ವರ್ಗಸ್ಥರೆಂದು ತಿಳಿಸಲು ವಿಷಾದಿಸುವೆವು. ಶ್ರೀ. ಪುರುಷೋತ್ತಮ ಕಾಮತರು, ಸುಮಾರು ಒಂದು ವಾರದ ಮೊದಲು ಜ್ವರದಿಂದ ಶಯ್ಯಾಗ್ರಸ್ಥರಾಗಿದ್ದು ಮೊದಲನ ೨-೩ ದಿನಗಳಲ್ಲಿ ಗುಣಮುಖರಾಗುವಂತೆ ತೋರಿದರೂ, ಅವರ ದೇಹಸ್ಥಿತಿಯು ಒಮ್ಮಿಂದೊಮ್ಮೆ ವಿಷಮಕರವಾಗಿ ಪರಿಣಮಿಸಿ, ತಜ್ಞ ಡಾಕ್ಟರರ ಯತ್ನ ವಿಫಲಿಯೂ, ವಿಧಿವಶರಾದುದು, ಅವರನ್ನು ಬಲ್ಲ ವಿಶಾಲ ಕುಟುಂಬ ಹಾಗೂ ಸ್ನೇಹ ಮಂಡಲಕ್ಕೆ ಅಸಹನೀಯವಾದ ಸಂತಾಪವನ್ನುಂಟು ಮಾಡಿದೆ. ಕೇವಲ ಇಪ್ಪತ್ತು ವರ್ಷದ ವಯಸ್ಸಿನಲ್ಲೆ ಇವರು ಸಿನೆಮಾ ಪ್ರದರ್ಶನ ವ್ಯವಸಾಯ ಕ್ಷೇತ್ರದಲ್ಲಿಳಿದು, ೧೯ವರ್ಷಗಳ ಸೆಂಟ್ರಲ್ ಟೊಕಿಸಿನ ಸ್ಥಾಪನೆಗೆ ಕಾರಣರಾಗಿ, ಮೊನ್ನೆಯ ತನಕ ಶ್ರದ್ಧೆಯಿಂದ ಅದನ್ನು ನಡೆಸಿಕೊಂಡು ಬರುತ್ತ, ಗಣನೀಯರೆನಿಸುವಂತೆ ಜನಾದರವನ್ನು ಹೊಂದಿದ್ದರು. ಸದಾ ನಗುಮೊಗದಿಂದಿದ್ದು, ತಮ್ಮನ್ನೆ ಹಿತ ವರ್ಗದವರೊಡನಾಗಲಿ, ನೌಕರರೊಡನಾಗಲಿ ಸಹೋದರಭಾವದಿಂದ ವರ್ತಿಸುತ್ತಿದ್ದರು. ನಾಲ್ಕು ವರ್ಷಗಳ ಹಿಂದೆ ವಿವಾಹವಾಗಿದ್ದರು. ಈ ಎಳೆ ವ್ಯಾಯದಲ್ಲಿ ಮೃತ್ಯು ಅವರನ್ನು ಈ ರೀತಿ ಒಯ್ಯುವುದೆಂದು ಯಾರೂ ಎಣಿಸಿರಲಿಲ್ಲ. ಅವರ ಆಕಸ್ಮಿಕ ನಿಧನ ವಾರ್ತೆಯನ್ನು ಕೇಳುತ್ತಲೇ, ಮಂಗಳೂರಿನ ಎಲ್ಲ ಟೋಕಿಸ್‌ಗಳು, ಸಾಯಂಕಾಲ ಮುಚ್ಚಲ್ಪಟ್ಟವು. ಶ್ರೀ. ಕಾಮತರಿಗೆ ಎರಡು ವರ್ಷದ ಬಾಲಕನಿರುವನು, ಅವರ ಮಾತಾಪಿತರಿಗೆ ಸೃದ್ಧಾವ್ಯದಲ್ಲೊದಗಿದ ಈ ಶೋಕವನ್ನು ಶಮನಿಸಲೆಂದೂ ಮೃತರ ಆತ್ಮಕ್ಕೆ ಶಾಂತಿಯನ್ನು ದಯಪಾಲಿಸಲೆಂದೂ ಸರ್ವಾತ್ಮನಲ್ಲಿ ಪ್ರಾರ್ಥಿಸುವೆವು.

ಸಂಕ್ಷಿಪ್ತ ಸುದ್ದಿಗಳು

ಅಸಾವಾದಲ್ಲಿ ಭೂಕಂಪದಿಂದ ಪ್ರಾಣಹಾನಿ, ಸರಕಾರಿ ಕಟ್ಟಡಗಳಿಗೆ ಕೂಡಿ ೭೪ ಲಕ್ಷ ರೂಪಾಯಿ ಹಾನಿ ಸಂಭವಿಸಿದೆ. ಚಿಕ್ಕಮಗಳೂರು ತೋಟಗಳಿಗೆ ಸಂಭವಿಸಿದ ಹಾನಿ ಇದರಲ್ಲಿ ಸೇರಿಲ್ಲ. ೧೫೨೦ ಜನರು ಸಂತ್ರಸ್ತರಾಗಿದ್ದು ೫೭೫ ಜನರು ಸಾವು ನೋವುಗಳಿಗೊಳಗಾಗಿರುವರು ಅಲ್ಲದೆ ಸಾವಿರಾನಿ ದನಕರುಗಳು ಮರಣ ಹೊಂದಿರುವವು.

ಕೇಂದ್ರ ಸರಕಾರದ ಆಹಾರ ಶಾಖೆಯ ಉಪಮಂತ್ರಿಗಳಾದ ಎಂ. ತಿರುಮಲರಾಯರು ವಿಜಯನಾಡದಲ್ಲಿ ಭಾಷಣ ಮಾಡುತ್ತ ಪರದೇಶದಿಂದ ಆಹಾರ ಧಾನ್ಯ ತರಿಸಲು ಸರಕಾರವು ೧೫೦ ಕೋಟಿ ರೂಪಾಯಿ ವೆಚ್ಚ ಮಾಡುತ್ತಿದ್ದು, ಇನ್ನು ಹೆಚ್ಚು ವೆಚ್ಚಮಾಡುವುದು ರಾಷ್ಟ್ರೀಯ ಹಿತದ ದೃಷ್ಟಿಯಿಂದ ಯೋಗ್ಯವಾಗಿರುವುದೆಂದರು.

ಕ್ಷಯರೋಗ ನಿವಾರಣೆ ಸಂಬಂಧದಲ್ಲಿ ನಿಧಿ ಕೂಡಿಸಲು ೩೫೦ ಲಕ್ಷ ಮುದ್ರೆಗಳು ತಯಾರಿಸಲ್ಪಟ್ಟಿದ್ದು ಅಕ್ಟೋಬರ ೨ರಂದು ಅವು ಮಾರಾಟಕ್ಕಿಡುವವು. ಒಂದರ ಬೆಲೆ ೧ ಆಣೆ ಇರುವುದು.

ಕೇಂದ್ರ ಶಿಕ್ಷಣ ಶಾಲೆಯಿಂದ ನೇಮಿಸಲ್ಪಟ್ಟ ಸಮಾಜ ಹಿತವರ್ಧನ ಸಲಹೆಗಾರ ಸಮಿತಿಯವರು ದೇಶದಲ್ಲಿಯು ಎಲ್ಲ ಸಾಮಾಜಿಕ ವಿಜ್ಞಾನ ಸಂಸ್ಥೆಗಳಲ್ಲಿ ಒಂದೇ ತರದ ಶಿಕ್ಷಣ ಕ್ರಮ ಏರ್ಪಡಿಸಲು ನಿಶ್ಚಯಿಸಿದ್ದಾರೆ. ಶಿಕ್ಷಣದ ಅವಧಿಯು ೩ ವರ್ಷಗಳದ್ದು, ಕೇವಲ ಪದವೀಧರರನ್ನು ತೆಗೆದುಕೊಳ್ಳಲಾಗುವುದು.

ತಮ್ಮ ದೃಢ ವಿಶ್ವಾಸ ಪಾತ್ರ
ಕೆನರಾ ಬ್ಯಾಂಕ್ ಲಿಮಿಟೆಡ್
ಸ್ಥಾಪಿತ 1906
ಏಳತ್ತು ಸಹಸ್ರಕ್ಕೆ ಕುಟುಂಬದ ಬ್ಯಾಂಕರರು ಎಂಟು ಕೋಟಿಗೂ ಮಿಗಿಲಾದ ನಿಧಿಗಳು.

ಉಡುಪಿ ಎಮ್ ಜೆ. ಎಮ್ ಕಾಲೇಜಿನಲ್ಲಿ

ಪ್ರಿನ್ಸಿಪಾಲ್ ಶ್ರೀ. ಯಜ್. ಸುಂದರ ರಾಯರ ನೇತೃತ್ವದಲ್ಲಿ ಮತ್ತವರ ಮೊದಲ ಭಾಷಣದೊಂದಿಗೆ ಗಾಂಧೀ ಜಯಂತಿ ಸಭೆಯು ತಾ. 2ನೇ ಪೂರ್ವಾಹ್ನ ಜರಗಿತು. ಶ್ರೀಗಳಾದ ಕು. ಶಿ. ಹರಿದಾಸ ಭಟ್, ಕೆ. ಎಸ್. ಕಾಮತ್, ವಸಕ್ಕರ್, ಬಿ. ಮೋಹನದಾಸ ಶೆಟ್ಟಿ ಮತ್ತು ಡಾ. ಟಿ. ಮಾಧವ ಸೈಗಳ ಭಾಷಣಗಳಾದುವು. ವಿದ್ಯಾರ್ಥಿನಿಯರ ಪ್ರಾರ್ಥನೆ ಮತ್ತು ಗೀತೆಗಳಿದ್ದುವು.

ನಿಧನ

ಕಲ್ಯಾಣಪುರ ಮಿಲಾಗ್ರಿಸ್ ಹೈಸ್ಕೂಲಿನ ಅಧ್ಯಾಪಕರಾಗಿದ್ದ ಶ್ರೀ ಕಜ್ಜೆ ನಾರಾಯಣ ಕಮ್ತಿರು ತಾ. 1ರಲ್ಲಿ ಕೆಲವೇ ದಿನಗಳ ಕಾಯಿಲೆಯಿಂದ ಮೃತರಾದರೆನ್ನಲು ವಿಷಾದವಾಗುತ್ತದೆ. ದಿವಂಗತರು ಸರಳ ಸಾಧು ಸ್ವಭಾವದವರಿದ್ದು ತನ್ನ ಶಾಲೆಯ ಉನ್ನತಿಗಾಗಿ ತುಂಬಾ ದುಡಿದಿದ್ದರು. ಮೃತರ ಆತ್ಮಕ್ಕೆ ಚಿರ ಶಾಂತಿ ಕೋರುತ್ತೇವೆ.

ಬಿಹಾರದಲ್ಲಿಯ ಕಳ್ಳಸೇಟಿಗರ ಯಾದಿ

ಸರಕಾರವು ಸಿದ್ಧಪಡಿಸಿದೆ.

ಬಿಹಾರದಲ್ಲಿಯ ಬಿಕ್ಕಟ್ಟಿನ ಆಹಾರ ಪರಿಸ್ಥಿತಿಯ ಮೂಲಕ ಕಳ್ಳಸೇಟಿಗರನ್ನೆಲ್ಲ ನ್ಯಾಯ ಬದ್ಧ ಸ್ಥಾನಬದ್ಧತೆಗೆ ಆಜ್ಞೆಯನ್ನಯ ಸ್ಥಾನಬದ್ಧತೆಯಲ್ಲಿಡುವುದಕ್ಕಾಗಿ ಬಿಹಾರ ಸರಕಾರದವರು ಪ್ರಾಂತದಲ್ಲಿಯ ಕಳ್ಳಸೇಟಿಗರ ಪಟ್ಟಿಯನ್ನು ಸಿದ್ಧ ಪಡಿಸುತ್ತಿರುವರೆಂದು ತಿಳಿದು ಬಂದಿದೆ. ಈ ಪ್ರಸಿದ್ಧ ಕಳ್ಳಸೇಟಿಗರ ಒಂದು ತಾತ್ಕಾಲಿಕ ಯಾದಿಯು ಈಗಾಗಲೇ ಸಿದ್ಧವಾಗಿದ್ದು ಅವರೆಲ್ಲನ್ನು ಬಂಧಿಸುವ ಆಜ್ಞೆಯು ಇನ್ನು ೧೫ ದಿನಗಳಲ್ಲಿಯೇ ಹೊರಡಲಿದೆಯೆಂದೂ ವಾರ್ತೆಯಿದೆ.

ಸರಕಾರವು ಆಹಾರ ವಿತರಣ ಮತ್ತು ಎತ್ತುವಳಿ ಬಗ್ಗೆ ಕಾಲಕಾಲಕ್ಕೆ ಹೊರಡಿಸಿದ ಆಜ್ಞೆಗಳನ್ನು ಪಾಲಿಸಿ ಕಳ್ಳ ಸಂಗ್ರಹ, ಲಾಭಬಡಕತನ ಮೊದಲಾದ ಸನಾತನ ಘಾತಕ ಚಟುವಟಿಕೆಗಳಲ್ಲಿ ತೊಡಗಿ ಸರಕಾರಕ್ಕೆ ತೊಂದರೆಯೊಡ್ಡಿದವರ ವಿರುದ್ಧ ಈ ಆಜ್ಞೆಯನ್ನು ಅನ್ವಯಿಸಲಾಗುವುದು.

ನಿರಾಶ್ರಿತರಿಗೆ ಸಾಧ್ಯವಿದ್ದ ಪರಿಹಾರ ಕೊಡಲಾಗುವುದು

ಭಾರತ ಸರಕಾರದ ಪುನರ್ನಿವಸನಮಂತ್ರಿಗಳಾದ ಶ್ರೀ. ಅಜಿತ ಪ್ರಸಾದ ಜೈನರು ನವಾತಾಯಿತ್ತ ನಿರಾಶ್ರಿತರು ಕಳೆದುಕೊಂಡ ಆಸ್ತಿಗಾಗಿ ಶಕ್ಯವಿದ್ದಷ್ಟು ಪರಿಹಾರ ಕೊಡಿಸುವುದಾಗಿ ಆಶ್ವಾಸನವಿತ್ತರು.

ಅವರು ಸಿಂಧ ನಾಜಾಯತ ಮಹಾಮಂಡಲದ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡುತ್ತ ಮೇಲಿನಂತೆ ಹೇಳಿದರು.

ಒಡನರ ಮೇಲೆ ಭಾರತವು ಪೂರ್ಣ ಪರಿಹಾರ ಕೊಡಿಸುವುದು ಸಾಧ್ಯವಿಲ್ಲ. ಕೆಲವು ಲಕ್ಷಾಧೀಶರಿಗೆ ಪರಿಹಾರ ಕೊಡಲು ಒಡನರ ಮೇಲೆ ಕರವಾಕುವುದು ಯೋಗ್ಯವಾಗಲಾರದೆಂದು ಮಂತ್ರಿಗಳಿಯೂ ಅವರು ಹೇಳಿದರು.

ಆಗ್ನೇಯ ಏಶಿಯದ ಒಕ್ಕಲತನ ಅಭಿವೃದ್ಧಿ

ಪ್ರಾದೇಶಿಕ ಡಾಯರೆಕ್ಟರರ ಸಂಚಾರ

ಆಗ್ನೇಯ ಏಶಿಯದ ಆಹಾರ ಮತ್ತು ಒಕ್ಕಲತನ ಸಂಸ್ಥೆಯ ಪ್ರಾದೇಶಿಕ ಡಾಯರೆಕ್ಟರರಾದ ಡಬ್ಲ್ಯು. ಎಚ್. ಕವಿಂಗ್ಸ್ ಅವರು ಕೊಲೊಂಬೊಕ್ಕೆ ಹೋಗಲು ತಮ್ಮ ಬ್ಬರು ಅಧಿಕಾರಿಗಳೊಂದಿಗೆ ಮದ್ರಾಸಿಗೆ ದಿಲ್ಲಿಯಿಂದ ಬಂದಿದ್ದರು.

ಒಕ್ಕಲತನ ಅಭಿವೃದ್ಧಿ ಯೋಜನೆಗಳಲ್ಲಿ ಆಹಾರ ಮತ್ತು ಒಕ್ಕಲತನ ಸಂಸ್ಥೆ ಯಾವ ರೀತಿ ಸಹಾಯ ನೀಡಬಹುದು ಎಂಬ ವಿಚಾರವನ್ನು ಬೇರೆ ಬೇರೆ ಸರಕಾರಗಳೊಂದಿಗೆ ಚರ್ಚಿಸಲು ಕವಿಂಗ್ಸರು ಆಗ್ನೇಯ ಏಶಿಯದಲ್ಲಿ ಸಂಚರಿಸುತ್ತಿದ್ದಾರೆ. ಈ ಕಾರ್ಯದ ವೆಚ್ಚವು ಹಿಂದುಳಿದ ದೇಶಗಳಿಗೆ ತಾಂತ್ರಿಕ ಸಹಾಯ ನೀಡುವ ಸಂಯುಕ್ತ ರಾಷ್ಟ್ರ ಸಂಘದ ಯೋಜನೆಯಿಂದ ದೊರೆಯುವುದು ಎಂದು ಕವಿಂಗ್ಸರು ಹೇಳಿದರು.

ಸ್ವ-ಧರ್ಮವನ್ನರಿತು ವರ್ತಿಸಿರಿ!

ಚಾತುರ್ಮಾಸ್ಯ-ಸಮಾಪ್ತಿಯ ಕಾಲಕ್ಕೆ ಶ್ರೀ ಗೋಕರ್ಣ ಮಠಾಧೀಶರು ಕೊಟ್ಟ ಸಂದೇಶ.

ಮುಂಬಯ್, ತಾ. ೩೬-೯-೪೦

ಶ್ರೀ ಗೋಕರ್ಣ ಮಠಾಧೀಶ ಶ್ರೀಮದ್ಭಾರಿ ಕಾನಾಥ ತೀರ್ಥರುಗಳು ಇಲ್ಲಿಯ ಶ್ರೀ ಕಾಶೀ ಮಠದಲ್ಲಿ ಚಾತುರ್ಮಾಸ್ಯ-ವ್ರತವನ್ನು ಹಿಡಿದು ಆಚರಿಸುತ್ತಿದ್ದುದು "ವೈಶ್ಯ"ದ ವಾಚಕರಿಗೆ ವಿದಿತವಿರುತ್ತದಷ್ಟೇ. ಆಷಾಢ ಶು. ೧ಜಮೆಯ ದಿನ ಪ್ರಾರಂಭವಾದ ಈ ಚಾತುರ್ಮಾಸ್ಯದ ಅವಧಿಯಲ್ಲಿ ಶ್ರೀಮಠದಲ್ಲಿ ದಿನಾಲೂ ಪ್ರಾತಃಪ್ರಸನ್ನವಿಗಳಲ್ಲದೆ ಶ್ರೀಮದ್ ಭಾಗವತ ಪುರಾಣ ನಡೆಯುತ್ತಿತ್ತು. ಶ್ರೀ ಸಂಸ್ಥಾನದ ಗಣೇಶಚತುರ್ಥಿಯ ವ್ರತವೂ ಮೊನ್ನೆ ಶ್ರೀಮದನಂತ ಚತುರ್ದಶಿ ವ್ರತವೂ ಒಳ್ಳೇ ವಿದ್ಯುಕ್ತವಿಧಿಯಿಂದ ನಡೆದವು. ನಿನ್ನೆ ಶ್ರೀ. ಗುರುಗಳ ಚಾತುರ್ಮಾಸ್ಯ ವ್ರತದ ಸಮಾಪ್ತಿಯಾಯಿತು.

ನಿನ್ನೆ ರೀತಿಯಂತೆ ಮಧ್ಯಾಹ್ನದಲ್ಲಿ ಶ್ರೀ ವೀರ ವಿಟ್ಠಲನ ಸನ್ನಿಧಾನದಲ್ಲಿ ವಿಶೇಷ ಪೂಜಾ-ವಿನಿಯೋಗಗಳೂ ಸಂತರ್ಪಣೆಯೂ ನಡೆದವು. ಸಂಜೆಯಲ್ಲಿ ಶ್ರೀ ಗುರುಗಳು ಮೆರವಣಿಗೆಯುಂದ ಸೀಮೋಲ್ಲಂಘನೆ ಮಾಡಿ, ಬಾಣಗಂಗಾ ಸರೋವರದ ತೀರದಲ್ಲಿ ಶಾಸ್ತ್ರದಂತೆ ಗಂಗಾಪೂಜೆ, ನೃತ್ಯಕಾ ವಿಸರ್ಜನೆ ಮೊದಲಾದ ವಿಧಿಗಳನ್ನು ಮುಗಿಸಿ ಅಲ್ಲಿಯೇ ಇರುವ ಶ್ರೀ ವಾಲುಕೇಶ್ವರ ಗುಡಿಯಲ್ಲಿ ದೇವದರ್ಶನ ಮಾಡಿದು ಚಾತುರ್ಮಾಸ್ಯ ವ್ರತದ ಉದ್ಯಾಪನೆ ಮಾಡಿದರು. ಅಲ್ಲಿಂದ ತಿರುಗಿ ಮಠಕ್ಕೆ ಬಂದ ಮೇಲೆ ಮುಂಬಯಿಯ ಮಹಾಜನರಿಂದ ಶ್ರೀ ಗುರುಗಳ ವಾದ ಪೂಜೆಯಾಯಿತು. ಪೂಜೆ ಮುಗಿದ ಬಳಿಕ ರಾ॥ ಮಾಧವರಾವ ಭಟ್ಟರು ಎದ್ದು, ಶ್ರೀ ಗುರುಗಳು ಮುಂಬಯಿಗೆ ಚಿತ್ಕೃಸಿ, ಇಲ್ಲಿಯೇ ಚಾತುರ್ಮಾಸ್ಯ ವ್ರತ ಕೈಕೊಂಡು ಮುಂಬಾಪುರ್ಯರನ್ನು ತಮ್ಮ ದರ್ಶನ, ಸಾನ್ನಿಧ್ಯ ಮತ್ತು ಗುರೂ ವದೇಶಗಳಿಂದ ವಾವನ ಮಾಡಿದ ಬಗ್ಗೆ ಕೃತಜ್ಞತೆಯನ್ನು ವ್ಯಕ್ತಗೊಳಿಸಿದರು. "ಈ ೫೦ ವರ್ಷಗಳಲ್ಲಿ ಗೋಕರ್ಣ ಮಠಾಧೀಶರು ಮುಂಬಯಿಗೆ ದರ್ಶನಲಾಭವಿತ್ತಿದ್ದು ಇದೇ ಮೊದಲ ಸಲ. ಅದರಿಂದ ಇಲ್ಲಿಯ ಸಮಾಜ ಬಾಂಧವರು ಉತ್ಸಾಹದಿಂದ ಗುರು ಸೇವೆ ಮಾಡಿದುದರಲ್ಲಿ ಆಶ್ಚರ್ಯವಿಲ್ಲ. ಈ ಸೇವೆಗಳು ಶ್ರೀ ಗುರುಗಳಿಗೆ ಬೇಕೆಂದು ತಿಳಿಯಬೇಡಿರಿ. ಶ್ರೀ ಗುರುಗಳು ಎಷ್ಟೆಂದರೂ ಸನ್ಯಾಸಿಗಳು. ದಂಡ-ಕಮಂಡಲು-ಕೌಪೀನಗಳಿದ್ದರೆ ಅವರಿಗೆ ಸಾಕು. ಅವರಿಗೆ ನಾವು ನಮ್ಮ ಸೇವೆಗಳನ್ನು ಸಲ್ಲಿಸುವುದು ನಮ್ಮ ಸ್ವಂತ ಕಲ್ಯಾಣಕ್ಕಾಗಿ, ನಮ್ಮ ಶ್ರದ್ಧಾ ಭಕ್ತಿ-ವರಮಾರ್ಥಜ್ಞಾನಗಳನ್ನು ಬೆಳಿಸಿಕೊಳ್ಳುವುದಕ್ಕಾಗಿ, ನಮ್ಮ ವಾರಮಾರ್ಥಿಕ ಉನ್ನತಿಯನ್ನು ಸಾಧಿಸುವುದಕ್ಕಾಗಿ ಆಗಿರುತ್ತದೆಂಬುದನ್ನು ನೆನಪಿಲ್ಲಿರಿ" ಎಂದೂ ಅವರು ವಿವರಿಸಿದರು. ಅನಂತರ ಶ್ರೀ ಸ್ವಾಮಿಗಳು ವರ್ಣಾಶ್ರಮ, ಧರ್ಮದ ಮಹತ್ವವನ್ನೂ ಧರ್ಮಪಾಲನೆಯ ಆವಶ್ಯಕತೆಯನ್ನೂ ಬೋಧಿಸುತ್ತ ಈ ಕೆಳಗಿನಂತೆ ಅಶೀರ್ವಚನವಿತ್ತರು.

"ನಿನ್ನೆ ಮಂಗಲ ಸಮಯದಲ್ಲಿ ನಿಮಗೆ ಚಾತುರ್ವರ್ಣ್ಯ-ವ್ಯವಸ್ಥೆಯ ಸಂಬಂಧದಲ್ಲಿ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ವ್ಯವಸ್ಥೆ ಜಗತ್ತಿಗೆ ಸುಖ ಕೊಡಬಲ್ಲದೆಂದು ನಮ್ಮ ಮತವುಂಟು. ನಾವು ಈ ಊರಲ್ಲಿ ಬಂದಂದಿನಿಂದ ನಿಮಗೆ ಸಂಘಟನೆಯ ಮಹತ್ವವನ್ನು ಬೋಧಿಸುತ್ತಿದ್ದೆವು. ಆದರೆ ಸಂಘಟನೆ ಅದೊಂದು ಸಾಧನ ಮಾತ್ರ, ಸಾಧ್ಯವಲ್ಲ. ಸಂಘಟನೆಯಿಂದ ಸಾಧಿಸಿ ಬೇಕಾದುದು ಧರ್ಮ ಮತ್ತು ತಜ್ಜನ್ಯ ನಿತ್ಯ ಸುಖ. ಧರ್ಮವಾದರೂ ಒಂದು ಸಾಧನ ಮಾತ್ರ. ಐಹಿಕ, ವಾರತ್ರಿಕ ಉನ್ನತಿಯ ಸಾಧನೆಗೆ ಅದೊಂದು ಸಾಧನ "ಯತಃ ಅಭ್ಯುದಯ-ನಿಃಶ್ರೇಯಸ-ಸಿದ್ಧಿಃ ಸ ಧರ್ಮಃ" ಎಂದು ಧರ್ಮದ ವ್ಯಾಖ್ಯೆ ಕೊಡಲಾಗಿದೆ. ಈ ಧರ್ಮಕ್ಕೆ ಅನೇಕ ಅಂಗೋಪಾಂಗಗಳಿವೆ. ಚಾತುರ್ವರ್ಣ್ಯ ವ್ಯವಸ್ಥೆಯು ಧರ್ಮದ ಒಂದು ಪ್ರಧಾನಾಂಗ.

ಚಾತುರ್ವರ್ಣ್ಯವೇ ಆರ್ಯ ಸಂಸ್ಕೃತಿಯ ಮೂಲಾಧಾರ

ಸದ್ಯಕ್ಕೆ ಜನರಿಗೆ ಧರ್ಮದ ಮೇಲೆ ಶ್ರದ್ಧೆ ಇಲ್ಲ. ಚಾತುರ್ವರ್ಣ್ಯ ವ್ಯವಸ್ಥೆಯೆಂಬುದೂ ಅವರಿಗೆ ತೀರ ಅಸಹ್ಯವಾಗಿದೆ. ಇದರಿಂದ ನೀವು ವಿಚಾರ ಮಾಡಿ ನೋಡಿದಲ್ಲಿ ನಮ್ಮ ಸಮಾಜದ ಐಹಿಕ ಉನ್ನತಿಗೂ ಪಾರಲೌಕಿಕ ಸುಖಕ್ಕೂ, ಅಷ್ಟೇ ಅಲ್ಲ ಸಮಾಜದ ವ್ಯವಹಾರಗಳ ಸುರಳಿತ ಸಾಗಾಟಕ್ಕೂ ಈ ವರ್ಣ-ವ್ಯವಸ್ಥೆ ಅತ್ಯಂತ ಅನುಕೂಲವಿರುತ್ತದೆಂಬುದನ್ನು ನೀವು ಮನಗಾಣುವಿರಿ. ಸಮಾಜದ ಧಾರಣೆಗೆ ಚಾತುರ್ವರ್ಣ್ಯ-ವ್ಯವಸ್ಥೆ ಸಹಾಯಕವಿರುತ್ತದೆಂಬುದನ್ನು ಪೌರ್ವಾತ್ಯರಂತೆ ಪಾಶ್ಚಾತ್ಯ ತತ್ವಜ್ಞಾನಿಗಳೂ ಒಪ್ಪಲಾರಂಭಿಸಿದ್ದಾರೆ. ರಾಜ್ಯ ಘಟನೆಯು ಸ್ಥಿರತೆಗೆ ವರ್ಣ ವ್ಯವಸ್ಥೆ ಮಾರಕವಿರುತ್ತದೆಂಬ ಮಾತನ್ನಲ್ಲಿ ಹುರುಳಿಲ್ಲ. ನಮ್ಮ ಭಾರತೀಯ ಸಂಸ್ಕೃತಿಯೆಂತೂ ಬಹಳ ಪ್ರಾಚೀನ ಕಾಲದಿಂದ ವರ್ಣವ್ಯವಸ್ಥೆಯ ಮೇಲೆಯೇ ಆಧರಿಸಲ್ಪಟ್ಟಿದೆ. ನಮ್ಮ ಸಂಸ್ಕೃತಿಯ ಚಿರಸ್ಥಾಯಿತ್ವಕ್ಕೂ ಈ ವ್ಯವಸ್ಥೆಯೇ ಕಾರಣವೆಂದು ವಿಚಾರವಂತರ ಮತವುಂಟು. ತಮ್ಮ ಸಮಾಜದ ಸ್ವಾಸ್ಥ್ಯಕ್ಕಾಗಿ ಮತ್ತು ರಾಷ್ಟ್ರದ ಉನ್ನತಿಗಾಗಿ ಇನ್ನಿಕರ ರಾಷ್ಟ್ರಗಳೂ ಸ್ವೀಕರಿಸಬಹುದಾದಷ್ಟು ಈ ವ್ಯವಸ್ಥೆ ಉತ್ತಮವಿದೆ.

"ನಮ್ಮ ಭಾರತದಲ್ಲಿ ಹಿಂದೆ ವ್ಯಕ್ತಿಯೊಬ್ಬರೂ ತಮ್ಮ ತಮ್ಮ ವರ್ಣಾಶ್ರಮಗಳಿಗೆ ಒಪ್ಪುವ ಕರ್ಮಗಳನ್ನು ಮಾಡುತ್ತಿದ್ದರು. ಅದರಿಂದ ಆಗ ಎಲ್ಲೆಲ್ಲೂ ಸುಖ-ಶಾಂತಿ-ಸಮೃದ್ಧಿಗಳು ನೆಲಸಿದ್ದವು. ಇಂದಿನ ನಮ್ಮ ದುಃಸ್ಥಿತಿಗೆ ವರ್ಣಾಶ್ರಮ ಧರ್ಮದ ಅವನತಿಯೆ ಕಾರಣವೆಂದು ನಮ್ಮ ಅಭಿಪ್ರಾಯ. ಧರ್ಮಶ್ರದ್ಧೆ ಕಡಿಮೆಯಾಗಿರುವದರಿಂದ ಜನರ ನೀತಿಮತ್ತೆ ಕಳವಟ್ಟಕ್ಕೆ ಹೋಗಿದೆ. ಆದರ ವರಿಣಾಮವಾಗಿ ಎಲ್ಲೆಲ್ಲೂ ಲಂಚಗೂಳಿತನ, ಕಳ್ಳಸಂತೆ ಮೊದಲಾದ ಸಾಮಾಜಿಕ ವಿದ್ರೋಹಿ ಚಟುವಟಿಕೆಗಳು ಸರಾಗವಾಗಿ ಸಾಗಿವೆ. ಸರಕಾರದವರು ಕಾಯದೆಯಿಂದ ಪೆಕಾಯಧೆ ಮಾಡುತ್ತಿದ್ದರೂ ಅವು ಕುಗ್ಗುವದಿಲ್ಲ. ಇದರ ಮೇಲಿಂದ ರಾಜಸತ್ತೆಗಾದರೂ ಜನತೆಯ ಧರ್ಮಬುದ್ಧಿಯ ಆವಶ್ಯಕತೆ ಮುಂಬೆಂಬುದು ಸ್ಪಷ್ಟವಾಗುತ್ತಿದೆ. ಇದನ್ನು ಅನುಲಕ್ಷಿಸಿಯೇ "ಧಾರಣಾದ್ಧರ್ಮ ಮಿತ್ಯಾಹುಃ ಧರ್ಮೋ ಧಾರಯತೇ ಪ್ರಜಾಃ" ಎಂದೂ "ಸುವ್ಯವಸ್ಥಾಂ ಸಮಾಜಸ್ಯ ವಿ ಸೌಖ್ಯಮಿನ ಕಸ್ಯಚಿತ್; ವಿನಾಶ್ರಮಾಂ ನರ್ಣಾಂಶ್ಚಸಾವ್ಯವಸ್ಥಾನಸಿದ್ಧಿತಿ" ಎಂದೂ ಮಹಾಭಾರತದ ಶಾಂತಿವರ್ವದಲ್ಲಿ ಹೇಳಿದೆ. ಬೇರೆಬೇರೆ ವರ್ಣದವರ ಕರ್ತವ್ಯಕರ್ಮಗಳನ್ನು ಗೀತೆಯಲ್ಲಿ ಬಣ್ಣಿಸಲಾಗಿದೆ. (ಗುರುಗಳು ಗೀತೆಯಿಂದಲೂ ಈ ಸಂಬಂಧದ ಶ್ಲೋಕಗಳನ್ನು ಹೇಳಿ ಅವನ್ನು ತಿಳಿಸಿಹೇಳಿದರು) ಆಯಾ ವರ್ಣದವರು ತಮ್ಮತಮ್ಮ ಕರ್ಮಗಳನ್ನು ಮಾಡುತ್ತುಳಿದರೆ ಸಮಾಜದಲ್ಲಿ ಸುವ್ಯವಸ್ಥೆಯುಳಿಯುತ್ತದೆ; ಸಮಾಜದ ಸರ್ವಾಂಗೀಣ ಉನ್ನತಿಯಾಗುತ್ತದೆ. ಆದುರಿಂದ ನೀವು ವ್ಯಕ್ತಿಯೊಬ್ಬರೂ ತಮ್ಮ ಧರ್ಮವೇನೆಂಬುದನ್ನು ಚೆನ್ನಾಗಿ ತಿಳಿಕೊಂಡು ಅದನ್ನು ಶ್ರದ್ಧೆಯಿಂದ, ಆಚರಿಸಬೇಕು. ಹಾಗೆ ಮಾಡಿದರೆನೇ ನಿಮ್ಮ ಕಲ್ಯಾಣವಾಗುವದು; ದೇಶದ ಕಲ್ಯಾಣವೂ ಆಗುವದು."

ಈ ರೀತಿ ಗುರುಗಳ ಭಾಷಣವಾದ ಮೇಲೆ ರಾ॥ ಕೃಷ್ಣರಾವ ಗಾಯತೋಂಡೆಯವರ ಆಭಾರ ಮನ್ನಣೆಯಾಗಿ ಸಭೆಯ ಮುಕ್ತಾಯವಾಯಿತು. ಸಭೆಗೆ ಸಾವಿರಾರು ಜನರು ಕೂಡಿದ್ದರು. ಧ್ವನಿವಿಸ್ತಾರಕ ಯಂತ್ರ ವಸ್ಥಿತ್ತಿದ್ದರಿಂದ ಭಾಷಣಗಳು ಎಲ್ಲರಿಗೂ ಕೇಳಬರುತ್ತಿದ್ದವು. (ಕಾನಡಾವೃತ್ತ.)

ಯುದ್ಧವು ಅನಿವಾರ್ಯವಲ್ಲ

ಬ್ರಿಟಿಶ ಸಂರಕ್ಷಣ ಮಂತ್ರಿ ಇಮಾನ್ಯುಯೆಲ ಶಿನವೆಲ್ಲರು ಬ್ರಿಟಿಶ ಕೂಲಿಕಾರ ಪಕ್ಷದ ಅಧಿವೇಶನದಲ್ಲಿ ವಿದೇಶ ನೀತಿ ಚರ್ಚೆಯನ್ನು ಪ್ರಾರಂಭಿಸುತ್ತ ಬ್ರಿಟನ್ನು ತನ್ನ ಸಂರಕ್ಷಣ ವಡೆಯನ್ನು ಬಲವಡಿಸಿದ್ದರೆ ಗುಡಾಂತರವಿದೆಂದುಎಚ್ಚರಿಸಿದರು. "ಶಾಂತಿಯನ್ನು ಸಾಧಿಸುವುದೇ ಬ್ರಿಟನ್ನಿನ ಉತ್ತೇಶವಾಗಿದೆ. ಅದಕ್ಕೆ ಯುದ್ಧವು ಬೇಕಿಲ್ಲ ಮೂರನೆ ಜಾಗತಿಕ ಯುದ್ಧವು ಬಂದೇ ತೀರುವದೆಂದು ಹೇಳುವದರಿಂದ ಮಾನವಜನಾಂಗದ ಸೇವೆ ಮಾಡಿದಂತಾಗುವದಿಲ್ಲ. ಯುದ್ಧವು ಅನಿವಾರ್ಯವೇನೂ ಅಲ್ಲ. ನಿರ್ಣಯ ರೀತಿಯನ್ನ ಕ್ರಾಂತಿಯನ್ನು ನೋಡಿದವರಿಗೆ ರೀತಿಯುದ ಇಂದಿನ ನಡತೆಯುಂದ ನಿರಾಶೆಯಾಗದಿರದು. ಜಾಗತಿಕ ಸಾಧನೆಗೆ ರೀತಿಯ ಅಡ್ಡ ಬಂದಿದೆ. ಯು ಜೀವನವನ್ನು ಏರಿಸಲು ಅದು ಏರಿಸುತ್ತಿಲ್ಲ ಎಂದರು.

ಬಸ್ಸು ಪ್ರಯಾಣಿಕರಿಗೆ ಸೂಚನೆ

ಇತ್ತೀಚೆಗೆ ಬಸ್ಸು ಟಿಕೇಟು ಮುಂದಾಗಿ ಪಡಕೊಂಡು ಪ್ರಯಾಣ ಬೆಳಸದೆ ಅದರ ಮೊಬಲಗು ರಿಫಂಡ್ ಕೇಳುವಂಥಾ ಪದ್ಧತಿ ದಿನೇ ದಿನೇ ಪ್ರಬಲವಾಗಿ—ಬಂದಿದೆ. ಕಾರಣ ಕೆಲವರು ಪ್ರಯಾಣದ ಅತ್ಯಾವಶ್ಯಕತೆ ಗಮನಿಸದೆ—ಟಿಕೇಟು ಮೌಲ್ಯ ಪಾಸ್ಸು ದೊರೆಯುವುದಾಗಿ ಕೂಡಾ ತಿಳುವಳಿಕೆಯಿಂದ ಟಿಕೇಟು ಪಡಕೊಂಡು ಆ ಟಿಕೇಟಿನಲ್ಲಿ ನಮೂದಿಸಿರುವ ಸಮಯವನ್ನು ಲಕ್ಷಿಸದೆ, ಸಮಯ ತಪ್ಪಿಸಿ ಬರುವುದು. ಇದರಿಂದ ಸೀಟುಗಳು ಖಾಲಿಯಾಗಿ ಇರಗೊಡಿಸಿ ಸರ್ವಿಸು ಬಿಡಲ್ಪಟ್ಟು ಅತೀ ಅಗತ್ಯದಿಂದ ಪ್ರಯಾಣಿಸುವವರಿಗೆ ಕೂಡಾ ತೊಂದ್ರೆಗೊಳಿಸುವಂತಾಗುತ್ತಾ ಬರುವುದಲ್ಲದೆ ಸೀಟು ಇರುತ್ತಾ ಟಿಕೇಟು ಕೊಡುವುದಿಲ್ಲವಾಗಿ ಇತ್ಯಾದಿ ಆರೋಪ ಹೊರಿಸಿ ಬರುವ ಕಂಪ್ಲೈಂಟುಗೂ ಅಸ್ಪದ ಕೊಡುತ್ತಾರೆ. ಬಸ್ಸು ಟಿಕೇಟು, ಪ್ರಯಾಣಿಸುವವರೇ ಪಡೆದು ಅವರೇ ಉಪಯೋಗಿಸ ಬೇಕಾಗಿ ಶಿವ್ಯಾ ಇತರ ಯಾರಿಗೂ ವಿಕ್ರಯಿಸುವುದಾಗಲೀ ಪ್ರಯಾಣ ಬೆಳಸುವವರೇ ಕೊಡುವುದಾಗಲೀ ಕೊಡದಾಗಿ ಸರಕಾರದ ಕಠಿಣ ಕಾನೂನು ಕೂಡಾ ಇದ್ದರೂ ಪ್ಯಾಸೆಂಜರರು ಇದಕ್ಕೇ ವಿರುದ್ಧವಾಗಿ ನಡೆಯುವುದು ನಮ್ಮ ತಿಳುವಳಿಕೆಗೆ ಬಂದಿದೆ. ಇನ್ನು ಮುಂದೆ ಆದಷ್ಟು ತಮ್ಮ ಪ್ರಯಾಣದ ಅವಶ್ಯಾವಶ್ಯಕತೆ ತಿಳಿಕೊಂಡು ಟಿಕೇಟು ಮುಂದಾಗಿ ಪಡಕೊಂಡು ತಪ್ಪದೆ ಪ್ರಯಾಣ ಮಾಡಬೇಕಾಗಿಯೂ, ಈ ಮೇಲಿನ ಅನ್ಯವಸ್ಥೆಗೆ ಎಡೆಕೊಡಬಾರದಾಗಿ ನಾವು ವಿನಂತಿಸುವುದಲ್ಲದೆ ಪ್ರಯಾಣ ಬೆಳಸದೆ ತರುವ ಟಿಕೇಟುಗಳ ಮೊಬಲಗನ್ನು ವಾಪ್ಸು ಕೊಡುವ ಕ್ರಮವಿಲ್ಲವೆಂಬುದನ್ನು ಮುಂದಾಗಿ ತಿಳಿಸಲು ಇಚ್ಛಿಸುತ್ತೇವೆ.

ಜಾಯಿಂಟ್ ಮೆನೇಜರ್ಸ್,
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ, ಮಂಗಳೂರು.
ದಿ ಜ್ಯೊಂಟ್ ಬುಕ್ಕಿಂಗ್ ಆಫೀಸ್, ಕೊಡಿಯಾಲಬೈಲು.

ಮಂಗಳೂರು
10-4-49

THE CANARA BANKING CORPORATION LTD.
Estd: 1906.

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್
ಹೆಡ್ ಆಫೀಸು—ಉಡುಪಿ

ಮೂಲ ಧನ
ಅಧಿಕೃತ ರೂ. 25,00,000
ಹೊರಡಾ ಅಪ್ ಸಿದ್ದು ಮತ್ತು ವಸೂಲಾದ್ದು ರೂ. 20,00,000
ಕೀಸರ್ವ್ ನಿಧಿಗಳು ರೂ. 10,21,747
ಒಟ್ಟು ಜಾಮೀನಿನ ಭಂಡವಾಳ ರೂ. 303,02,976

ಗಿರಾಕಿಗಳ ತೃಪ್ತಿಯೇ ನನ್ನ ಗುರಿ!

ಸಕಲ ತರದ ಬ್ಯಾಂಕಿಂಗ್ ವಹಿವಾಟುಗಳನ್ನು ಕೈಕೊಳ್ಳಲಾಗುವುದು



ಹುಳುಕಡ್ಡಿ ಮುದ್ದು

ಕಜ್ಜಿ, ತುರಿಕೆ, ಕುರಿಕಜ್ಜಿ, ಹುಳಕಡ್ಡಿ, ವಿಕ್ಷ ಉಪದ್ರವ, ತಲೆಹುಣ್ಣು, ವ್ರಣಮೊದಲಾದವೆಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಫಿಲ್ಸ್,
ಮೊಂಬ್ಬಾ, ಮಹಡಾಸು, ಕಳ್ಳಿಕ್ಕೆ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಕಾಲದವಿರಾಮ ನಿಶ್ಚಿತ ಜೀವನಕ್ಕೆ – ಕುಟುಂಬದ ಸುಖ ಸೌಕರ್ಯಕ್ಕೆ
ಅತ್ಯಮೂಲ್ಯ ಆಕರ್ಷಕ ವಿಮಾಯೋಜನೆಃ

ಮಾಸವೊಂ ಕೇವಲ ರೂ. 55/-ರ ವಿನಿಯೋಗದಿಂದ ರೂ. 30,080/- ನಿಧಿ ನಿಮ್ಮದಾಗುವುದು
ಅಥವಾ ವರ್ಷಂಪ್ರತಿ ರೂ. 1,995ರಂತೆ ಕಾಯಂ. ಆಗಿ ದೊರೆಯುವ ಅಚೀವ ವರ್ಷಾಸನ (ವರ್ಷದಲ್ಲಿ ನೀವು ತೆತ್ತ ಹಣ ರೂ. 660/ ಮಾತ್ರ)
ಅಥವಾ ನಿಶ್ಚಿತ ಅವಧಿಯಲ್ಲಿ ರೂ. 17830/- ನಗದು
ಅಥವಾ ನಿರ್ದಿಷ್ಟ ಅವಧಿಯಲ್ಲಿ ರೂ. 23,500/- ಮತ್ತು ಮರಣಾನಂತರ ಇನ್ನೊಂ ರೂ. 10,000/-

ಮೇಲೆ ನಮೂದಿಸಿರುವುದು ಮಾತ್ರವಲ್ಲದೆ ಕ್ಲುಪ್ತ ಅವಧಿಯ ಮೊದಲು, ಯಾವ ಸಮಯದಲ್ಲೇ ಆಗಲಿ, ಸುರಣ ಹೊಂದಿದರೆ, ವರ್ಷಕ್ಕೆ ರೂ. 1000/-ಕ್ಕೆ ರೂ. 30/-ರಂತೆ ಪಾತ್ರಿಯಾಗಿ ಬೋನಸ್ಸು ಮೊದಲಾದವು ರೂ. 10,000/-ದ ಪೂರ್ಣ ವಿಮಾರಕ್ಷಾ ಕವಚ ಸಹಾ.

ವಿಮಾ ಕ್ಷೇತ್ರದಲ್ಲಿ 40 ವರ್ಷಕ್ಕೆ ಮಿಕ್ಕಿ ದುಡಿದು ಉತ್ತಮ ಅನುಭವ ಗಳಿಸಿದ ನಿಮ್ಮ ವಿಮೆಯ ಉತ್ಕೃಷ್ಟ ಸಲಹೆಗಾರರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.
ಚೀಫ್ ಏಜೆಂಟ್ಸ್:
ದಿ ಬೊಂಬ್ಬಾ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಬೊಂಬಾಯಿ ಲ್ಯಾಫ್ ಬಿಲ್ಡಿಂಗ್, ಉಡುಪಿ (ದ. ಭಾರತ)

M/s. KOCHIKAR BROTHERS, LTD.,
Chief Agents:
The Bombay Life Assurance Co. Ltd.,
(Bombay Life Building Udipi S. India)
With Offices at:—Mangalore, Calicut, Coimbatore, Madura, Bangalore City, Trivandrum, Madras, Bombay.

ಕೆನರಾ ಬ್ಯಾಂಕು, ಲಿಮಿಟೆಡ್.
(ಸ್ಥಾಪನೆಃ ೧೯೦೬)
(ಹೊಸಗಾಂಕೆ ಪರಿಮಿತಿಸಲ್ಪಟ್ಟು ಭಾರತದಲ್ಲಿ ಸಾಂಘೀಕರಿಸಿದ್ದು)

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧,೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರಡಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು . . . . . ನೂರಕ್ಕೆ ವರ್ಷಕ್ಕೆ ೨।
ಳರಿಂದ ೫ ತಿಂಗಳು . . . . . ,, ,, ೨॥

ರೂ. ೧,೦೦೦ದ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸವಿವರವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಮಂಗಳೂರು ಶಾಖೆಗಳು:
(1) ಬಂದರ ರೋಡ (2) ಡೊಂಗರಕೇರಿ
ಇತರ ಶಾಖೆಗಳು:—ಕಾರ್ಕಳ, ಬಂಟವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ, ಇತ್ಯಾದಿ.

CANARA BANK, LIMITED.
ESTD: 1906

Bhuvanendra Products Limited,
KATAPADI S. Kanara.

Pleasant shade, Free flow and quick drying have commanded good popularity

"BHUVANENDRA" REAL INK "BHUVANENDRA"

USEFUL FOR ALL FOUNTAIN PENS

"ಭುವನೇಂದ್ರ"
ರೀಯಲ್ ಶಾಯಿ

ಬರವಣಿಗೆಯ ಎಲ್ಲಾ ಕೆಲಸಗಳಿಗೂ, ಫೌಂಟನ್ ಪೆನ್ನುಗಳಿಗೂ, ಅತ್ಯುಪಯುಕ್ತ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕನ್ನಡ

ಡೊಂಗರೆ
ಬಾಲಾಮೃತವು
ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

REEL-22

SWADESHA BHIMANI

CONTD FROM:

3 JANUARY 1947

TO

6 OCTOBER-1950

CONTD IN NEXT REEL

D.V

MICROFILMED BY
NEHRU MEMORIAL MUSEUM
AND LIBRARY
TEEN MURTI HOUSE
NEW DELHI